ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ, ೧೯ನೇ ಜೂನ್ ೧೯೯೦. ಜ್ಯೇಷ್ಠ ೨೯ ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದ್ದರು.

ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಗೆ ಸಮಾಜ ಕಲ್ಯಾಣ ಮಂತ್ರಿಯವರಿಂದ ಉತ್ತರ ಬೇಡಿಕೆಗಳ ಕ್ರ. ಸಂ. ೭, ೬೦ ಮತ್ತು ೬೧

ಉಪಾಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳಿಂದ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷರೇ, ಈಗ ನನಗೆ ೫ ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಬೇಕು. ರಾಜ್ಯದಲ್ಲಿನ ಗ್ರಾನೈಟ್ ಕಲ್ಲುಗಳ ಬಗ್ಗೆ......

ಶ್ರೀ ಎಂ. ಶಿವಣ್ಣ.—ನನ್ನ ಇಲಾಖೆಯ ಬೇಡಿಕೆಯ ಬಗ್ಗೆ ಮಾನ್ಯ ವಿರೋಧ......

(ಗೊಂದಲ)

ಉಪಾಧ್ಯಕ್ಷರು.—ನಿನ್ನೆಯೇ ಚರ್ಚೆ ಮುಗಿದಿದೆ ಈಗ ತಾವು ಮಾತನಾಡುವುದು ಬೇಡ. ಮಾನ್ಯ ಮಂತ್ರಿಗಳು ಹೊರದೇಶಕ್ಕೆ ಹೋಗುವವರಿದ್ದಾರೆ ಅವರಿಗೋಸ್ಕರ ವಿಶೇಷವಾಗಿ ಬೆಳಿಗ್ಗೆ ೯ ಗಂಟೆಗೆ ನಾವು ಸೇರಿದ್ದೇವೆ. ನಿನ್ನೆ ಸಾಯಂಕಾಲ ೭-೪೫ರ ತನಕ ಕುಳಿತು ಚರ್ಚೆಯನ್ನು ಮುಗಿಸಿದ್ದೇವೆ. ತಾವು ಏನಾದರೂ ಹೇಳುವುದು ಇದ್ದರೆ ಅವರ ಚೇಂಬರ್‌ಗೆ ಹೋಗಿ ಮಾತನಾಡಿ. ತಾವು ನನಗೆ ಸಹಕಾರವನ್ನು ಕೊಡಬೇಕು. ನಿನ್ನೆ ಚರ್ಚೆ ಮುಗಿದಿದೆ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನಾನು ಭಾಷಣ ಮಾಡುವುದಿಲ್ಲ ಒಂದೇ ಒಂದು ಸಲಹೆಯನ್ನು ಕೊಡುತ್ತೇನೆ, ನಿಸರ್ಗ ಸಂಪತ್ತು ನಾಶವಾಗುತ್ತಿದೆ ಅದನ್ನು ತಪ್ಪಿಸಬೇಕು. ಈ ಬಗ್ಗೆ ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕು.

(ಗೊಂದಲ)

ಉಪಾಧ್ಯಕ್ಷರು.—ದಯಮಾಡಿ ತಾವು ಕುಳಿತುಕೊಳ್ಳಬೇಕು.

ಶ್ರೀ ಎಂ. ಶಿವಣ್ಣ.—ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಸಿಂಧ್ಯರವರು ಅನೇಕ ವಿಚಾರಗಳನ್ನು ಇಲ್ಲಿ ಹೇಳುತ್ತಾ......

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಸರಕಾರದ ನೀತಿಯನ್ನು ಪ್ರತಿಭಟಿಸಿ ನಾನು ಧರಣಿ ಕೂತು ಕೊಳ್ಳುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಅಧ್ಯಕ್ಷರ ಪೀಠದ ಮುಂದೆ ಧರಣಿ ಕುಳಿತರು)

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಸದಸ್ಯರೊಬ್ಬರು ಧರಣಿ ಕುಳಿತಾಗ ಸಭೆಯನ್ನು ನಡೆಸು ವುದು ಅಷ್ಟು ಚೆನ್ನಾಗಿರುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು.—ನಿನ್ನೆ ೬-೪೫ರ ತನಕ ಚರ್ಚೆ ಮಾಡಿ ಮುಗಿಸಿದ್ದೇವೆ. ನಿನ್ನೆ ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ನಿಮ್ಮೆಲ್ಲರ ಸಲಹೆ ಪ್ರಕಾರ ೯ ಗಂಟೆಗೆ ಇಂದು ಸಭೆ ಕರೆದಿದ್ದೇವೆ. ಅವರು ಒಂದು ಸಲ ಪ್ರಾರಂಭ ಮಾಡಿದರೆ ಅರ್ಧ ಗಂಟೆಗೆ ಕಡಿಮೆ ಮುಗಿಸುವುದಿಲ್ಲ. ಎಲ್ಲರೂ ಕೂಡ ಜವಾಬ್ದಾರಿಯಿಂದ ಆರಿಸಿ ಬಂದಿರುವವರು ನನಗೆ ಸಹಕಾರವನ್ನು ಕೊಡಬೇಕು. ಕ್ಲಾರಿಫಿಕೇಷನ್ ಕೇಳಲು ಮೊದಲು ಅವರಿಗೆ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡ ಬಹುದು.

(ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಸೀಟಿಗೆ ಎದ್ದು ಬಂದು ಮಾತನಾಡತೊಡಗಿದರು.)

ಶ್ರೀ ಎಂ. ಶಿವಣ್ಣ.—ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಗಳು ಕೊಟ್ಟಿದ್ದಾರೆ.

ಉಪಾಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್*

ಉಪಾಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಿಲ್ಲ

ಉಪಾಧ್ಯಕ್ಷರು.—ಅವರು ಮೊದಲು ಉತ್ತರವನ್ನು ಹೇಳಲಿ, ಅನಂತರ ನೀವು ಕ್ಲಾರಿಫಿಕೇಷನ್ ಕೇಳಿ.

ವಾಟಾಳ್ ನಾಗರಾಜ್.—ನಾನು ಕಳೆದ ೧೬ ವರ್ಷಗಳಿಂದ ಹೋರಾಟ ಮಾಡುತ್ತಿದ್ದೇನೆ, ಮೊದಲು ನಿಸರ್ಗ ಸಂಪತ್ತು ಹಾಳಾಗುವುದು ನಿಲ್ಲಬೇಕು.

(ಗೊಂದಲ)

ಉಪಾಧ್ಯಕ್ಷಿಣಿಯವರು.—ದಯವಿಟ್ಟು ಎಲ್ಲರೂ ಕೂತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು.—ನಿನ್ನೆಯ ದಿವಸ ಈ ವಿಷಯದಲ್ಲಿ ಸಾಕಷ್ಟು ಚರ್ಚೆಯಾಗಿದೆ ಮತ್ತು ಈ ಚರ್ಚೆ ಇಲ್ಲಿಗೆ ಮುಗಿದಿದೆ ಎಂದು ನಾನು ನಿನ್ನೆಯ ದಿವಸವೇ ನಾನು ಹೇಳಿದ್ದೇನೆ. ಆದರೂ ಮತ್ತೆ ನೀವು ಮಾತನಾಡುವುದು ಸರಿಯಲ್ಲ. ನಾಗರಾಜ್‌ರವರೆ, ನಿಮ್ಮ ಪ್ರಶ್ನೆ ಏನೇ ಇರಲಿ, ಕ್ಲಾರಿಫಿಕೇಷನ್ ಸಂದರ್ಭದಲ್ಲಿ ನಿಮಗೆ ಸಾಕಷ್ಟು ಅವಕಾಶವನ್ನು ಕೊಡುತ್ತೇನೆ. ಅನಂತರ ಅದಕ್ಕೆ ನೀವು ಮಂತ್ರಿಗಳಿಂದ ಉತ್ತರವನ್ನು ಪಡೆದುಕೊಳ್ಳಬಹುದು. ಈ ಸಭೆ ಸುಗಮವಾಗಿ ನಡೆಯುವುದಕ್ಕೆ ನೀವು ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜು.—ನನ್ನ ವಾದ ಇಷ್ಟೆ. ಈ ನಿಸರ್ಗ ಸಂಪತ್ತು ಉಳಿಯಬೇಕು.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಬಹಳ ಗಂಭೀರ ವಾದ ಯಾವುದೋ ವಿಷಯದಲ್ಲಿ ಅತ್ಯಂತ ಉತ್ತೇಜಿತರಾಗಿ ಮಾತನಾಡಿದ್ದಾರೆ. ಆದರೆ ಈ ಸದನದ ನೀತಿ ನಿಯಮಗಳನ್ನು ಬಿಟ್ಟು ಮಾತನಾಡುವುದಕ್ಕೆ ಬರುವುದಿಲ್ಲ. ನಮ್ಮ ತಾಳ್ಮೆಗೂ ಒಂದು ಮಿತಿ ಇದೆ, ಮಾನ್ಯ ಸಚಿವರು ಉತ್ತರ ಕೊಡುವುದನ್ನು ಅವರು ಮೊದಲು ಕೇಳಲಿ. ಅವರ ಉತ್ತರದಿಂದ ಇವರಿಗೆ ಸಮಾಧಾನವಾಗದಿದ್ದರೆ ಈಗ ಅವರು ಏನು ಮಾತನಾಡುತ್ತಿದ್ದಾರೆ, ಅದೇ ಮಾತನ್ನು ಅನಂತರ ಮಾತನಾಡುವುದಕ್ಕೂ ಬರುತ್ತದೆ. ಅದನ್ನು ಬಿಟ್ಟು ಸದನದ ಶಿಸ್ತಿಗೆ ಭಂಗ ತರುವುದಾದರೆ ಅದಕ್ಕೆ ನಿಯಮಾವಳಿಗಳ ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜು.—ನನ್ನದೊಂದು ಕ್ರಿಯಾಲೋಪ ಇದೆ.

ಉಪಾಧ್ಯಕ್ಷರು.—ನಿಮ್ಮದು ಏನು ಕ್ರಿಯಾಲೋಪ ಇದೆ? ಯಾವ ಕ್ರಿಯಾಲೋಪವೂ ಇಲ್ಲ. ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ, ಅದಕ್ಕೆ ತಾವು ಸಹಕಾರ ಕೊಡಬೇಕು. ಅವರು ಆ ರೀತಿ ಉತ್ತರ ಕೊಡುತ್ತಾರೆ, ಈ ರೀತಿ ಉತ್ತರ ಕೊಡುತ್ತಾರೆ ಎಂದು ನೀವು ಊಹೆ ಮಾಡಿಕೊಂಡು ಈಗಲೇ ಮಾತನಾಡುವುದು ಸರಿಯಲ್ಲ, ಮೊದಲು ಅವರು ಉತ್ತರ ಕೊಡಲಿ, ಅನಂತರ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮೊದಲು ಮಾನ್ಯ ಮಂತ್ರಿಗಳು ಉತ್ತರ ಹೇಳಲಿ. ನಂತರ ನೀವು ಪ್ರಶ್ನೆ ಕೇಳಿ.

ಶ್ರೀ ವಾಟಾಳ್ ನಾಗರಾಜು.—ನನ್ನ ಕ್ರಿಯಾಲೋಪ ಇದೆ.

ಉಪಾಧ್ಯಕ್ಷಿಣಿಯವರು.—ಕ್ರಿಯಾಲೋಪ ಇದೆಯೆಂದು ಹೇಳುತ್ತಿದ್ದೀರಿ. ಯಾವ ರೂಲ್ ಪ್ರಕಾರ ಹೇಳಿ.

ಶ್ರೀ ವಾಟಾಳ್ ನಾಗರಾಜು.—ಸದನದ ನಿಯಮದ ಪ್ರಕಾರ ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ ತಾವು ನನ್ನ ರಕ್ಷಣೆಗೆ ಬರಬೇಕು......

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ತಾವು ಹಿರಿಯ ಸದಸ್ಯರು, ತಾವು ತಿಳಿದುಕೊಳ್ಳಿ, ಮೊದಲು ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಅನಂತರ ಕ್ಲಾರಿಫಿಕೇಷನ್ ಕೇಳುವುದಕ್ಕೆ, ಅಥವಾ ಮಾತನಾಡುವುದಕ್ಕೆ ನೀವು ಸರ್ವಸ್ವತಂತ್ರರು. ಆಮೇಲೆ ಧರಣಿ ಕುಳಿತುಕೊಳ್ಳುತ್ತೀರೋ. ನೀವು ವಾಕೌಟ್ ಮಾಡುತ್ತೀರೋ, ಅಥವಾ ಕ್ಲಾರಿಫಿಕೇಷನ್ ಕೇಳುತ್ತೀರೋ ಎಂಬುದು ನಿಮಗೇ ಬಿಟ್ಟಿದ್ದು. ಈಗ ಅವರು ಉತ್ತರ ಕೊಡಲಿ. ತಾವು ಇದನ್ನು ಪರಿಶೀಲನೆ ಮಾಡಿ.

† ಶ್ರೀ ಬಿ. ಶಿವಣ್ಣ.—ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸಿಂಧ್ಯರವರು ಮತ್ತಿತರ ಸದಸ್ಯರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸಿಂಧ್ಯರವರು ಹೇಳಿದರು. ಷೆಡ್ಯೂಲ್ಡ್ ಕ್ಯಾಸ್ಟ್ ಅಲ್ಲದವರಿಗೆ ಈ ಇಲಾಖೆಯನ್ನು ಕೊಟ್ಟರೆ ಒಳ್ಳೆಯದು ಅಂತ. ಆದರೆ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದವರಿಗೆ ಈ ಇಲಾಖೆಯನ್ನು ಕೊಟ್ಟರೆ ಅವರು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಬಹಳ ಸಮೀಪ ವಾಗಿರುತ್ತಾರೆಂದು ಹೇಳಬೇಕಾಗುತ್ತದೆ. ನನಗೆ ಈ ಖಾತೆಯನ್ನೇ ಕೊಡಬೇಕೆಂದೇನೂ ಇಲ್ಲ. ನನಗೆ ಯಾವ ಖಾತೆಯನ್ನು ಮುಖ್ಯ ಮಂತ್ರಿಗಳು ಕೊಟ್ಟರೂ ದಕ್ಷತೆಯಿಂದ, ಜವಾಬ್ದಾರಿಯಿಂದ ಕೆಲಸವನ್ನು ಮಾಡುತ್ತೇನೆ. ಮಾನ್ಯ ಸಿಂಧ್ಯರವರೂ ಕೂಡ ಹಿಂದೆ ಸ್ವಲ್ಪಕಾಲ ಸೋಷಿಯಲ್ ವೆಲ್‌ಫೇರ್ ಮಂತ್ರಿಗಳಾಗಿದ್ದರು. ಆ ಒಂದು ಅನುಭವದಿಂದ ಸಾಕಷ್ಟು ವಿಚಾರಗಳನ್ನು ನಿನ್ನೆ ದಿವಸ ಪ್ರಸ್ತಾಪ ಮಾಡಿದರು. ಅವರು ಬಡ ಜನರ ಬಗ್ಗೆ ಸಾಕಷ್ಟು ಕಾಳಜಿಯನ್ನಿಟ್ಟುಕೊಂಡಿದ್ದಾರೆ. ಅವರ ಭಾಷಣ ಕೇಳಿ ನನಗೆ ಬಹಳ ಸಂತೋಷವಾಯಿತು. ಕೊನೆಯಲ್ಲಿ ಗಣಿ ಮತ್ತು ಭೂಗರ್ಭ ಇಲಾಖೆಯ ಮೇಲೆ ಮಾತನಾಡುತ್ತಾ ಕೆಲವು ಆಪಾದನೆಗಳನ್ನು ಮಾಡಿದರು.

೯.೩೦ ಎ. ಎಂ.

ಆ ಮೇಲೆ ಈ ದೇಶದ ಇತಿಹಾಸವನ್ನು ಹೇಳಬೇಕೆಂದರೆ ಸಾವಿರಾರು ವರ್ಷಗಳ ಹಿಂದಿನಿಂದ ಈ ಬಡಜನರು ಅನ್‌ಟಚಬಲ್ ಎಂದು ಏನು ಇದ್ದರು, ಅವರ ಬಗ್ಗೆ ಇತಿಹಾಸವನ್ನು ನೋಡಿದರೆ ಆ ಜನರು ಮನುಷ್ಯರೆಂದು ಕರೆಯಲಿಕ್ಕೂ ಸಾಧ್ಯವಾಗುತ್ತಿರಲಿಲ್ಲ. ಒಂದು ಕಾಲಕ್ಕೆ ಅವರನ್ನು ಪ್ರಾಣಿಗಳಂತೆ ಕಾಣುತ್ತಿದ್ದರು. ಅಂಥ ಕಾಲಕ್ಕೆ ಆ ಜನರಿಂದ ಸಾವಿರಾರು ವರ್ಷಗಳ ಹಿಂದಿನಿಂದಲೂ ಕಾಣದ ಒಬ್ಬ ನಾಯಕ ಹುಟ್ಟಿಕೊಂಡ. ಮಹಾರಾಷ್ಟ್ರದಲ್ಲಿ ಹುಟ್ಟಿದಂಥ ಡಾ. ಬಿ. ಆರ್. ಅಂಬೇಡ್ಕರ್ ಅವರೇ ಆ ನಾಯಕರು. ಅವರ ಜೀವನವೆಲ್ಲಾ ಸಂಘರ್ಷ, ಹೋರಾಟದಲ್ಲಿಯೇ ಮುಗಿಯಿತು. ಅವರು ಈ ಜನರ ಸೇವೆಗಾಗಿ ಆ ಜನರ ರಕ್ಷಣೆಗಾಗಿ ಬಹಳಷ್ಟು ಸೇವೆಯನ್ನು ಮಾಡಿದ್ದಾರೆಂದು ಹೇಳಬೇಕಾಗುತ್ತದೆ. ಡಾ. ಅಂಬೇಡ್ಕರ್‌ರವರ ರೀತಿಯಲ್ಲಿ ನಾವು ಸೇವೆಯನ್ನು ಸಲ್ಲಿಸುವುದಕ್ಕಾಗುವುದಿಲ್ಲ, ಆದರೆ ನನ್ನ ಪುಣ್ಯವೇನೆಂದರೆ ಅವರ ಸೆಂಚನರಿ ಸೆಲಬರೇಷನ್ ಆಚರಿಸುವ ಕಾಲಕ್ಕಾದರೂ ನಾನು ಮಂತ್ರಿಯಾಗಿ ಅವರ ನೂರನೇ ಬರ್ತ್‌ಡೇ ಸೆಲಬರೇಷನ್ ಆಚರಿಸುತ್ತಿರುವುದು ನನ್ನ ಪುಣ್ಯವೆಂದು ಹೇಳುತ್ತೇನೆ. ಈ ಒಂದು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಹಾರ್ದಿಕ ಧನ್ಯವಾದ ಗಳನ್ನು ಅರ್ಪಿಸುತ್ತೇನೆ, ಹಾಗೂ ಸರ್ಕಾರಕ್ಕೆ ಸಲ್ಲಿಸುತ್ತೇನೆ. ಡಾ. ಅಂಬೇಡ್ಕರ್ ಅವರ ನೂರನೇ ಜನ್ಮಶತಾಬ್ದಿಯನ್ನು ರಾಜ್ಯದ ಎಲ್ಲ ಭಾಗಗಳಲ್ಲಿಯೂ ಆಚರಣೆ ಮಾಡಿದಂಥ ಮತ್ತು ಅದಕ್ಕೆ ಸಹಕರಿಸಿದಂಥ ಎಲ್ಲ ಮುಖಂಡರುಗಳಿಗೂ, ನಾಯಕರುಗಳಿಗೂ ಹಾಗೂ ಶಾಸನಸಭಾ ಸದಸ್ಯರುಗಳಿಗೂ

ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಇದಾದ ಮೇಲೆ ಐತಿಹಾಸಿಕವಾಗಿ ನೋಡಿದರೆ, ಭಾರತದೇಶದ ಈ ಕಾನ್‌ಸ್ಟಿಟ್ಯೂಷನ್‌ನ್ನು ಬರೆಯಲಿಕ್ಕೆ ಏನು ಕಾರಣ ಇದನ್ನು ಯಾರು ಬರೆದರು, ಏತಕ್ಕೆ ಬರೆದರು ಎನ್ನುವ ಬಗ್ಗೆ ಹೇಳಬೇಕಾಗಿದೆ, ಒಂದು ಕಾಲಕ್ಕೆ ೧೯೩೧ನೇ ಇಸವಿಯಲ್ಲಿ ಡಾ. ಅಂಬೇಡ್ಕರ್‌ರವರು ರೌಂಡ್ ಟೇಬಲ್ ಕಾನ್‌ಫರೆನ್ಸ್‌ಗೆ ಬರಲು ಇನ್‌ವಿಟೇಷನ್ ಬಂದಿತ್ತು. ಬ್ರಿಟೀಷರ ಲೇಬರ್ ಗೌರ್ನಮೆಂಟ್ ಜೊತೆಯಲ್ಲಿ ಆ ಕಾಲಕ್ಕೆ ಡಿಸ್‌ಕಸ್ ಮಾಡುವಾಗ ಅವರಿಗೆ ಈ. ಎಸ್. ಸಿ. ಮತ್ತು ಎಸ್.ಟಿ. ಜನರ ಬಗ್ಗೆ ಬಹಳ ಅನುಕಂಪ ಇತ್ತು. ಆದ್ದರಿಂದ ಸಪರೇಟ್ ಎಲೆಕ್ಟೊರೇಟ್ ಫಾರ್ ಷೆಡ್ಯೂಲ್ಡ್ ಕ್ಯಾಸ್ಟ್ಸ್, ಡಿಪ್ರೆಸ್ಡ್ ಕ್ಲಾಸಸ್ ಅಂಡ್ ಅನ್‌ಟಚಬಲ್ಸ್ ಎಂದು ಹೇಳಿ ಒಂದು ನಿರ್ಣಯ ಮಾಡಿ ಹೇಳಿದರು. ಅದೇ ಕಾಲಕ್ಕೆ ದೇಶದಲ್ಲಿ ಫ್ರೀಡಮ್ ಮೂವ್‌ಮೆಂಟ್ ಇತ್ತು, ಹೋರಾಟ ಇತ್ತು, ಚಳುವಳಿ ನಡೆಯುತ್ತಿತ್ತು. ಮಹಾತ್ಮಾಗಾಂಧೀಜಿಯವರ ನೇತೃತ್ವದಲ್ಲಿ ಮಾನ್ಯ ಜವಾಹರಲಾಲ್‌ರವರ ನೇತೃತ್ವದಲ್ಲಿ, ಅಬ್ದುಲ್ ಕಲಾಮ್ ಆಜಾದ್, ಮತ್ತು ಮಾನ್ಯ ರಾಜೇಂದ್ರ ಪ್ರಸಾದ್, ಸುಭಾಷ್ ಚಂದ್ರ ಬೋಸ್ ಮುಂತಾದವರ ನೇತೃತ್ವದಲ್ಲಿ ಚಳುವಳಿ ನಡೆಯುತ್ತಿತ್ತು. ಆ ಕಾಲಕ್ಕೆ ವಿಶೇಷವಾಗಿ ಒಂದು ಘಟನೆ ನಡೆದುದು ನಮಗೆ ಗೊತ್ತಿದೆ. ಆ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿಯವರು ಆಮರಣ ಉಪವಾಸ ಮಾಡಿದರು. ಏಕೆಂದರೆ ಡಾ. ಅಂಬೇಡ್ಕರ್‌ರವರು ಸಪರೇಟ್ ಎಲೆಕ್ಟೊರೇಟ್‌ಗೆ ಒಪ್ಪಬಾರದು, ಇದಕ್ಕೆ ಒಪ್ಪಿದರೆ ಬಹುಶ: ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಿಂದೂ ಫೋಲ್‌ನಿಂದ ಹೊರಗೆ ಹೋಗಿ ಬಿಡುತ್ತಾರೆ. ಅವರು ಹೊರಗೆ ಹೋಗುವುದಕ್ಕೆ ಸಾಧ್ಯವಿಲ್ಲ, ಅವರು ಹೋದರೆ ಭಾರತ ಉಳಿಯುವುದಕ್ಕೆ ಸಾಧ್ಯವಿಲ್ಲವೆಂಬ ನಿಲುವನ್ನು ತಳೆದಿದ್ದು ತಮಗೆ ಗೊತ್ತಿದೆ, ಆ ಕಾಲಕ್ಕೆ ಹಿಂದೂ ಜನರ ನಾಯಕರು, ಮುಖಂಡರು, ದೇಶ ಪ್ರೇಮಿಗಳು ಡಾ. ಅಂಬೇಡ್ಕರ್‌ರವರನ್ನು ಕಂಡು ಮಾತನಾಡಿ ತಾವು ಸ್ಯಾಕ್ರಿಫೈಸ್ ಮಾಡಬೇಕು ಇಲ್ಲದಿದ್ದರೆ ಮಹಾತ್ಮಾಗಾಂಧೀಜಿಯವರು ಉಳಿಯುವುದು ಕಷ್ಟವಾಗುತ್ತದೆ. ಅವರು ಆಮರಣ ಉಪವಾಸ ಕೈಗೊಂಡಿದ್ದಾರೆಂದು ಹೇಳುತ್ತಾರೆ. ಅವರ ತತ್ವಗಳು ಎಲ್ಲರಿಗೂ ಗೊತ್ತು, ಅವರು ಯಾವಾಗಲೂ ಕಠೋರವಾದ ಒಂದು ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು. ಅಂಥ ಕಾಲಕ್ಕೆ ಮಹಾತ್ಮಾಗಾಂಧಿಯವರ ಹತ್ತಿರ ಡಾ. ಅಂಬೇಡ್ಕರ್‌ರವರು ಹೋಗುತ್ತಾರೆ, ಅವರು ಹೋದಮೇಲೆ ಮಹಾತ್ಮಾಗಾಂಧೀಜಿಯವರಿಗೆ ಬಹಳ ಸಂತೋಷವಾಗುತ್ತದೆ. ಇಂತಹ ಸಂದರ್ಭದಲ್ಲಿ ಮಹಾತ್ಮಾಗಾಂಧಿ ಅವರ ಮುಂದೆ ಡಾ. ಅಂಬೇಡ್ಕರ್ ಯಾರು ಎಂಬ ಭಾವನೆ ಕೆಲವರಲ್ಲಿ ಬರುತ್ತದೆ. ಈ ಬಗ್ಗೆ ಹೇಳುವುದಾದರೆ Dr. Ambedkar was anintellectual giant, political thinker, political scientist and a social reformer, He was not only a social reformer, but also a social revolutioner. ಅವರು ಬಹಳ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ, ಬಡತನದ ಮನೆಯಲ್ಲಿ ಹುಟ್ಟಿ ಬಹಳ ದೊಡ್ಡ ವ್ಯಕ್ತಿಯಾದಮೇಲೆ ಆ ಕಾಲಕ್ಕೆ ಮಹಾತ್ಮಾಗಾಂಧಿಯವರು ಅವರ ಬಗ್ಗೆ ಸಂತೋಷಪಟ್ಟು ಒಂದೇ ಒಂದು ಮಾತನ್ನು ಹೇಳುತ್ತಾರೆ. "You were very unfair to me and my people." ಎಂದು. It is a very historical sentence. ಈ ಮಾತನ್ನು ಏತಕ್ಕೆ ಹೇಳಿದರು ಎಂದರೆ ಬಹುಶಃ ಸಪರೇಟ್ ಎಲೆಕ್ಟೊರೇಟ್‌ಗೆ ಅವಕಾಶ ಕೊಟ್ಟಲ್ಲಿ, ಈ ಷೆಡ್ಯೂಲ್‌ಕ್ಯಾಸ್ಟ್ ಜನ ಹಿಂದೂಗಳ ಕೈವಾಡದಲ್ಲಿ ಆಗಲಿ ಅಥವಾ ಅವರ ಕಂಟ್ರೋಲ್‌ನಲ್ಲಿರುವುದಕ್ಕೆ ಸಾಧ್ಯವಾಗುವುದಿಲ್ಲ. ದಲಿತರು ಸಪರೇಟ್ ಆದರೆ ಬಹುಶ: ಅವರು ಇಂಡಿಪೆಂಡೆಂಟ್ ಆಗಿ ಇರಬಹುದು ಎನ್ನುವ ಆಸೆ ಇರುತ್ತದೆ. ಆ ಕಾಲಕ್ಕೆ ನಮಗೆ ಗೊತ್ತಿದೆ, ಪಾರ್ಟಿಷಿಯನ್ ಆಫ್ ಇಂಡಿಯಾ, ಪಾಕಿಸ್ಥಾನ ಕ್ರಿಯೇಟ್ ಆಯಿತು. ಆ ಉದ್ದೇಶದಿಂದ ಬಹುಶ: ಡಾ. ಅಂಬೇಡ್ಕರ್ ಅವರ ಮನಸ್ಸಾಗಲೀ ದೇಶದ ಆಗುಹೋಗುಗಳನ್ನು ನೋಡುವ ಕಾಲಕ್ಕೆ ಬಹುಶಃ ಇವೊತ್ತು ಈ ಜನರಿಗೆ ಸಪರೇಟ್ ಎಲೆಕ್ಟೊರೇಟ್ ಖಚಿತ ಆಗಿದ್ದರೆ 'ದಲಿಸ್ಥಾನ್' ಕೂಡ ಆಗಬಹುದಾಗಿತ್ತು. ಆದರೆ ಡಾ. ಅಂಬೇಡ್ಕರ್ ಬಹಳ ದೊಡ್ಡ ಸ್ಯಾಕ್ರಿಫೈಸ್ ಮಾಡಿದರು. ಆ ಸಾಕ್ರಿಫೈಸ್ ಮೂಲಕ ಗಾಂಧೀಜಿಯವರ ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಒಂದು ರೀತಿಯ ಸಹಾಯ ಮಾಡಬೇಕು ರಿಸರ್ವೇಷನ್ ಮಾಡಬೇಕೆಂದು ವಿಚಾರ ಮಾಡಿದರು. ಮುಂದೆ ೧೯೪೭ರಲ್ಲಿ ಭಾರತದ ಸಂವಿಧಾನವನ್ನು ಯಾರು ಬರೆಯಬೇಕೆಂಬ ವಿಷಯ ಬಂದಾಗ ಗಾಂಧೀಜಿಯವರು, ಪಟೇಲರು ಮತ್ತು ನೆಹರೂ ಮತ್ತಿತರ ನಾಯಕರು ಕೂಡಿ ಅಂಬೇಡ್ಕರ್ ಒಬ್ಬರೇ ಸಂವಿಧಾನ ಬರೆಯುವ ವ್ಯಕ್ತಿ, ಅವರಿಗೆ ಎಲ್ಲಾ ರೀತಿಯ ಅನುಭವ ಇದೆ. ಬುದ್ಧಿವಂತರಿದ್ದಾರೆ, ಎಂದು ಸಂವಿಧಾನ ಬರೆಯುವ ಕೆಲಸವನ್ನು ಅವರಿಗೆ ಕೊಟ್ಟರು. ಅವರು ಆ ಕಮಿಟಿ ಚೇರ್‌ಮನ್ ಆಗಿದ್ದರು, ನಂತರ ಅದು ೧೯೫೦ರ ಜನವರಿ ೨೬ರಂದು ಜಾರಿಗೆ ಬಂತು. Dr. Ambedkar was made the Drafting Committee Chairman of the Constitution. On 26th January 1950 the Constitution was adopted by the Constituent Assembly. The Preamble of

the Constitution which consists of 10 to 12 sentences assures the sovereignity, democracy and republic of the country. There are two important things in the Constitution. One is "Fundamental Rights" and another is "Directive Principles of State Policy" Fundamental Rights are incorporated in Articles 13 to 30. Directive Principles of State Policy are enshrined from Article 38 onwards. Article 15(4) provides for advancement of socially and educationally backward classes of citizens or for the Scheduled Castes and the Scheduled Tribes, Article 16 (4) provides for reservation for economically backward people and SC/ST people: Under Article, the right to equality is guaranteed. ಇಂಥ ವಿಷಯಗಳನ್ನು ನಾವು ನೋಡಿದರೆ ಈ ದೇಶದ ಸಂವಿಧಾನ ಎಂತಹ ಸಂವಿಧಾನ ಎಂಬುದು ಗೊತ್ತಾಗುತ್ತದೆ. ಈ ಕ್ವಾಲಿಟಿ ಮೇಲೆ ಎಷ್ಟೋ ಜನ ಈ ದೇಶದಲ್ಲಿ ಕೆಲಸ ಮಾಡಿದ್ದಾರೆ. ಸಾಧು ಸಂತರು, ರಿಫಾರ್ಮರ್, ದೊಡ್ಡ ದೊಡ್ಡ ನಾಯಕರು ಈ ದೇಶದಲ್ಲಿ ಬಡವರ ಉದ್ಧಾರವಾಗಬೇಕು, ಬಡತನ ಹೋಗಬೇಕು ಎಂದು ಶ್ರಮಿಸಿದ್ದಾರೆ. ೧೨ನೇ ಶತಮಾನದಲ್ಲಿ ಬಸವೇಶ್ವರರು ಅದೇ ಕೆಲಸ ಮಾಡಿದರು. ಎಷ್ಟೋ ಸುಧಾರಣೆಗಳು ಬಂದರೂ ಭಾರತ ದೇಶದಲ್ಲಿ ಜಾತೀಯತೆ ಹೋಗುವುದಕ್ಕೆ ಆಗಲಿಲ್ಲ, ಸಂವಿಧಾನದಲ್ಲಿ ಜಾತ್ಯತೀತ ಸರ್ಕಾರವನ್ನು ಕೊಡಬೇಕೆಂಬ ಉದ್ದೇಶ ಇದೆ. Article 14 state about right to equality which means, all are equal before law. Not only they are equal, but equal opportunities will be given to all citizens.

ಈ ದೇಶದಲ್ಲಿ ರೂಲ್ ಆಫ್ ಲಾ ಬರಬೇಕೆಂಬ ಅಭಿಪ್ರಾಯ ನಮ್ಮ ರಾಜ್ಯಾಂಗದಲ್ಲಿ ಇದೆ ಅದನ್ನು ಅಂಬೇಡ್ಕರ್ ಅವರು ಮಾಡಿದರು. ಎಲ್ಲಿಯವರೆಗೆ ಸಂವಿಧಾನವನ್ನು ಚೆನ್ನಾಗಿ ಜಾಗ್ರತೆಯಿಂದ ಉಪಯೋಗ ಮಾಡುವುದಿಲ್ಲ ಅಲ್ಲಿಯವರೆಗೆ ಬಹಳ ಕಷ್ಟವಾಗುತ್ತದೆ. ಸಂವಿಧಾನದ ಬಗ್ಗೆ ನ್ಯಾಯಾಂಗದ ತೀರ್ಮಾನಗಳು ಬಹಳಷ್ಟು ಇದೆ. ಇಂಥದ್ದೆಲ್ಲ ನೋಡಿದಾಗ ಸಂವಿಧಾನ ಹೇಗೆ ಡೆವಲಪ್ ಆಯಿತು ಎಂಬುದನ್ನು ವಿಚಾರ ಮಾಡಿದಾಗ ೧೭ನೇ ಶತಮಾನದಲ್ಲಿ ಒಂದು ಪ್ರೊಟೆಸ್ಟ್ ಆಗುತ್ತದೆ. In England a bill of Rights was brought in protest against the King and Parliament became the supreme body. That is how England became the mother of parliamentary democracy in the world. After Monarchy and Aristocracy, parliamentary democracy came into existence in England and that is the base for all democracies. But in America they have a Presidential form of government. English people when they pass a law they can make or unmake a man into a woman and a woman into a man. That means the sovereignity of the Parliament is supreme. Once what happened, the Parliament passed a law against the King or Queen of England. In that law it was said thatthe King or Queen will be hanged like other in cases of offence. Then what happened, the Queen being the Head of the State had to sign the law passed by the parliament. She cannot refuse or return the bill because Parliament is supreme. Like that we have also adopted resolution. "Social Welfare of the People", this is the policy of the State. What is welfare State? ಬಡವರಿಗೆ ಮತ್ತು ಅನ್‌ಟಚಬಲ್ಸ್‌ಗೆ ಸಾಕಷ್ಟು ಸ್ಕೀಮುಗಳನ್ನು, ಕಾರ್ಯಕ್ರಮಗಳನ್ನು ಕಳೆದ ೪೦ ವರ್ಷಗಳಿಂದ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಹಾಕಿಕೊಂಡು ಬಂದಿದೆ. ಇವರಿಗಾಗಿ ಒಳ್ಳೆಯ ಸ್ಕೀಮುಗಳಿವೆ. ಅದರಿಂದ ಬಹಳ ಜನರಿಗೆ ಲಾಭವಾಗಿದೆ. ಮಾನ್ಯ ಸದಸ್ಯರು It is a weak department, useless department, it has no rights, no authority, no control and it is inefficient ಎಂದು ಹೇಳಿದರು. Social welfare is more important. ಬೇರೆ ಬೇರೆ ವಿಷಯದಲ್ಲಿ ಮಾಡಬಹುದು. To create

social status for a man who is untouchable just law is not sufficient. ಅಂಥ ಕಾಲಕ್ಕೆ ಕೆಲವು ಪ್ರೋಗ್ರಾಂಗಳನ್ನು ಹಾಕಬೇಕಾಗುತ್ತದೆ, ನನಗನ್ನಿಸುತ್ತದೆ ಕಾರ್ಯಕ್ರಮಗಳು ಬಹಳಷ್ಟು ಮಟ್ಟಿಗೆ ಯಶಸ್ವಿಯಾಗಿ ನಡೆದಿವೆ, ಒಂದೇ ಒಂದು ಕಾರಣ ಮತ್ತು ತೊಂದರೆ ಎಂದರೆ ದುಡ್ಡಿನ ತೊಂದರೆ. ದುಡ್ಡು ಇಲ್ಲದಿದ್ದಕ್ಕೆ ಕೆಲವು ಸ್ಕೀಂಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸಣ್ಣ ಸಣ್ಣ ಸ್ಕೀಮುಗಳನ್ನು ತೆಗೆದುಕೊಂಡರೂ ಬಹಳ ಮಟ್ಟಿಗೆ ಜನರಿಗೆ ಸಹಾಯವಾಗುತ್ತದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಎಜುಕೇಷನಲ್ ಮತ್ತು ಸೋಷಿಯಲ್ ಪ್ರಾಬ್ಲಂಸ್ ಬಗ್ಗೆ ಕೆಲಸ ಮಾಡಲಾಗಿದೆ. ಇದಲ್ಲದೆ ಬೇರೆ ಬೇರೆ ಇಲಾಖೆಗಳು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಮಾಡಿವೆ. ಈಗ ಹೇಳಬೇಕೆಂದರೆ ಕಳೆದ ೮-೧೦ ವರ್ಷಗಳಿಂದ ಅಟ್ರಾಸಿಟೀಸ್ ಆನ್ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಸಾಕಷ್ಟು ಬೆಳೆದಿವೆ. ಇದು ಏತಕ್ಕೆ ಎಂಬ ಅಂಶವನ್ನು ಯಾರಿಗೂ ಗೊತ್ತು ಮಾಡುವುದಕ್ಕಾಗಲಿಲ್ಲ. Either they say group clashes, communal riots, or some provocation from somebody. ಇಲ್ಲಿ ಸಮಸ್ಯೆ ಏನೆಂದರೆ ನಾನು ಇವರು ಅವರು ಎಂದು ಹೇಳುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಮೇಲೆ ಬಹಳ ಅಟ್ರಾಸಿಟೀಸ್ ಆಗಿದೆ. ಆದರೆ ಇದರಲ್ಲಿ ಯಾರೋ ತಪ್ಪು ಮಾಡಿದರೆ, ಇನ್ಯಾರನ್ನೋ ಹಿಡಿದುಕೊಂಡು ಬರುವುದು ನಡೆಯುತ್ತದೆ. ರಾಜಕೀಯ ಉದ್ದೇಶದಿಂದ ಕೆಲವು ಘಟನೆಗಳು ನಡೆದಿರುತ್ತವೆ. ಆರು ತಿಂಗಳಿಂದೀಚೆಗೆ ಯಾವುದೇ ಲೆಜಿಸ್ಲೇಟರ್ ಆಗಿರಲಿ, ಅವರು ಯಾವ ಕಮ್ಯೂನಿಟಿಯವರೇ ಇರಲಿ, ಷೆಡ್ಯೂಲ್ಡ್ ಕ್ಯಾಸ್ಟ್ ಮೇಲೆ ಅತ್ಯಾಚಾರ ಆದರೆ ಕ್ರಮ ಕೈಗೊಳ್ಳಬೇಕು ಎಂಬ ಅಭಿಪ್ರಾಯ ಪಡುತ್ತಿದ್ದಾರೆ, ಇದು ನನಗೆ ಬಹಳ ಸಂತೋಷ ಉಂಟು ಮಾಡಿದೆ. ಹತ್ತು ಹದಿನೈದು ವರ್ಷಗಳ ಹಿಂದೆ ಇದು ಇರಲಿಲ್ಲ. ಮಾನ್ಯ ಸಿಂಧ್ಯಾ ಅವರು ಕೆಲವು ವಿಚಾರಗಳನ್ನು ಹೇಳಿದರು. ಅವರು ಬುದ್ಧಿವಂತರು. ಹಿಂದೆ ಅವರೂ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಆಗಿದ್ದರು. ಸುಧಾರಣೆಗಳನ್ನು ಮಾಡಬೇಕಾದರೆ ನಿಮ್ಮ ಸಹಾಯ ಸಹಕಾರ ನಮಗೆ ಬೇಕಾಗುತ್ತದೆ. ನಾವು ನೀವು ಸೇರಿ ಕೆಲಸ ಮಾಡಿದರೆ ಈ ಇಲಾಖೆಯಲ್ಲಿ ಸರಿಯಾಗಿ ಕೆಲಸ ಮಾಡಿ ಇಟ್ಟಿರುವ ಹಣವನ್ನು ಸರಿಯಾಗಿ ಉಪಯೋಗ ಮಾಡಬಹುದು. ನಿಮ್ಮ ಸರ್ಕಾರದಲ್ಲಿ ಕೆಲವು ಅಟ್ರಾಸಿಟೀಸ್ ನಡೆದಿವೆ. ನಾನು ಸರ್ಕಾರ ತಪ್ಪು ಮಾಡಿದೆ ಎಂದು ಹೇಳುವುದಿಲ್ಲ: ಬೇಂಡಿಗೇರಿಯಲ್ಲಿ ಮತ್ತು ತಟ್ಟೂರು ಈ ಜಾಗಗಳಲ್ಲಿ ಕೆಲವು ಘಟನೆ ನಡೆದಿದೆ, ಈ ಪ್ರಕರಣಗಳಿಂದ ಯಾರಿಗೂ ಗೌರವ ಬರುವುದಿಲ್ಲ. ಇದು ಆಗಬಾರದು. ಅದಕ್ಕಾಗಿ ದಲಿತ ಸಂಘರ್ಷ ಸಮಿತಿಯವರು ಈ ಬಗ್ಗೆ ಹೋರಾಟ ಮಾಡುತ್ತಿದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಬಹಳ ಮಂದಿ ವಿದ್ಯಾವಂತರಿದ್ದಾರೆ. ಅವರಿಗೂ ಕೂಡ ಈಗ ಜಾಗೃತಿ ಬಂದಿದೆ. ಅವರು ಎಲ್ಲವನ್ನು ಅರ್ಥ ಮಾಡಿಕೊಂಡು ಸರ್ಕಾರ ಯಾವ ರೀತಿ ಕೆಲಸ ಮಾಡಬೇಕೆಂದು ತಮ್ಮ ಅಭಿಪ್ರಾಯ ಕೊಡುತ್ತಾರೆ. ದಲಿತ ಸಂಘರ್ಷ ಸಮಿತಿಯವರು ಆಕ್ಟೀವಾಗಿ ಸರ್ಕಾರಕ್ಕೆ ಸಹಾಯ ಮಾಡುತ್ತಿದ್ದಾರೆ. ಅದೇ ಪ್ರಕಾರ ಹರಿಜನಗಿರಿಜನರ ಮೇಲೆ, ಬಡಜನರ ಮೇಲೆ ಹಲ್ಲೆ ಆದಾಗ ದಲಿತ ಸಂಘರ್ಷ ಸಮಿತಿಯವರೂ ರಕ್ಷಣೆ ಮಾಡುತ್ತಿದ್ದಾರೆ. ನಾನೂ ಕೂಡ ಅವರ ಜೊತೆಗೆ ಮಾತನಾಡಿದೆ. ಸರ್ಕಾರಕ್ಕೆ ಆ ಸಮಿತಿ ಸಹಾಯ ಮಾಡಿದೆ. ಅದಕ್ಕೆ ನಾವೂ ಕೂಡ ಅವರಿಗೆ ಸಹಾಯ ಮಾಡುತ್ತೇವೆ. ಚೀಫ್ ಮಿನಿಸ್ಟರ್ ಜೊತೆ ಕರೆದು ಎರಡು ಮೀಟಿಂಗ್‌ನಲ್ಲಿ ಡಿಸ್‌ಕಸ್ ಮಾಡಿದ್ದೇವೆ. ಅಟ್ರಾಸಿಟೀಸ್ ಕಡಿಮೆಯಾಗಬೇಕು. ಅದು ಹೇಗಾಗಬೇಕು ಎಂಬುದು ಸರ್ಕಾರದ ಮುಂದೆ ಇದೆ. ಮುಖ್ಯಮಂತ್ರಿಗಳು ಕೆಲವು ವಿಷಯಗಳಿಗೆ ಒಪ್ಪಿಗೆ ಕೊಟ್ಟಿದ್ದಾರೆ. ರೆವಿನ್ಯೂ ಲ್ಯಾಂಡ್ ಎನ್‌ಕ್ರೋಚ್ ಆಗಿರುವುದನ್ನು ರೆಗ್ಯುಲರೈಸ್ ಮಾಡುವ ಬಗ್ಗೆ ಸರ್ಕಾರ ನಿರ್ಣಯ ಕೂಡ ಮಾಡುತ್ತಿದೆ. ಅದೇರೀತಿ ಹೌಸ್ ಸೈಟ್ಸ್, ಎಜುಕೇಷನಲ್ ಫೆಸಿಲಿಟೀಸ್, ಅಟ್ರಾಸಿಟೀಸ್ ಕಾಂಪೆನ್‌ಷನ್ ಕೊಡುವುದರಲ್ಲಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನ ಮೂಲಕ ಸಹಾಯ ಮಾಡುತ್ತಿದ್ದೇವೆ. ಎರಡು ಅಟ್ರಾಸಿಟೀಸ್ ಬಗ್ಗೆ ಮುಖ್ಯವಾಗಿ ಸಗನಕಲ್ ಮತ್ತು ಆಳಂದದಲ್ಲಿ ನಡೆದ ಪ್ರಕರಣದ ಬಗ್ಗೆ ಮಾನ್ಯ ವಿರೋಧಪಕ್ಷದ ಉಪನಾಯಕರು ಹೇಳಿದರು.

ಸಂಗನಕಲ್‌ನಲ್ಲಿ ನಡೆದಂತಹ ದೌರ್ಜನ್ಯದ ಬಗ್ಗೆ ಹೇಳುವುದಾದರೆ ಅಲ್ಲಿ ಸ್ವಲ್ಪ ವಿಚಾರ ವಿಚಿತ್ರವಾಗಿದೆ ಎಂದು ಹೇಳಬೇಕಾಗಿದೆ. ಅಲ್ಲಿ ಹರಿಜನರ ಮೇಲೆ ನಡೆದಂತಹ ದೌರ್ಜನ್ಯ ಮತ್ತು ಅನ್ಯಾಯಗಳನ್ನು ವಿಚಾರಿಸಿಕೊಂಡು ಬರಲು ಮಾನ್ಯ ಮುಖ್ಯಮಂತ್ರಿಗಳು ನನಗೆ ಟೆಲಿಫೋನ್ ಮಾಡಿ ಸ್ಥಳಕ್ಕೆ ಹೋಗಬೇಕೆಂದು ಹೇಳಿದರು. ನಾನು ಸಂಗನಕಲ್‌ಗೆ ಭೇಟಿ ಕೊಟ್ಟಿದ್ದೆ. ಅಲ್ಲಿ ದಲಿತ ಸಂಘರ್ಷ ಸಮಿತಿಯವರು ಆ ಜನರಿಗೆ ರಿಲೀಫ್ ಕೊಡಿಸಿದ್ದಾರೆ. ಅಲ್ಲಿ ನಡೆದಿರುವಂತಹ ಪರಿಸ್ಥಿತಿಯನ್ನು ನೋಡಿದ ಮೇಲೆ ಏನಾಗಿದೆ ಎಂಬುದು ನನಗೆ ತಿಳಿಯಿತು. ಯಾವುದೋ ಒಂದು ಹೋಟೆಲಿನಲ್ಲಿ ಷೆಡ್ಯೂಲ್ಡ್‌ಕ್ಯಾಸ್ಟ್ ಜನರಿಗೆ ಟೀ ಕೊಡಲಿಲ್ಲವೆಂದು ಜಗಳ ಶುರುವಾಗಿದೆ. ಸಾಯಂಕಾಲ ಐದಾರು

ಗಂಟೆಗೆ ಊರಿನ ಮುಂದುವರಿದ ಜನಾಂಗದವರು ಹರಿಜನರ ಗುಡಿಸಲುಗಳಿಗೆ ಮತ್ತು ಮನೆಗಳಿಗೆ ಬೆಂಕಿಯನ್ನು ಹಚ್ಚಿದ್ದಾರೆ. ಈ ವಿಚಾರ ನಾನು ಅಲ್ಲಿಗೆ ಹೋದ ಮೇಲೆ ಗೊತ್ತಾಯಿತು. ದಲಿತ ಸಂಘರ್ಷ ಸಮಿತಿಯವರು ಪ್ರೊಟೆಸ್ಟ್ ಮಾಡಿದ್ದಾರೆ. ಅಲ್ಲಿ ಯಾವರೀತಿ ತೊಂದರೆಯಾಗಿತ್ತು ಎಂಬುದನ್ನು ಅವರು ಹೇಳಿದ ಮೇಲೆ ನಾನು ಅರ್ಥಮಾಡಿಕೊಂಡೆ. ಅಲ್ಲಿ ಗಂಭೀರವಾದ ಪರಿಸ್ಥಿತಿ ಇತ್ತು. ನಾನು ಜಿಲ್ಲಾಧಿಕಾರಿಗಳವರ ನೇತೃತ್ವದಲ್ಲಿ ಒಂದು ಶಾಂತಿ ಸಮಿತಿಯನ್ನು ನೇಮಕ ಮಾಡಿ, ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಸಹಾಯ ಮಾಡಬೇಕೆಂದು ಅಲ್ಲಿನ ಎಸ್.ಪಿ. ಅವರಿಗೆ ಹೇಳಿದ್ದೇನೆ. ಮನೆಗಳನ್ನು ಕಳೆದುಕೊಂಡವರಿಗೆ ೯೦೦ ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟಿದ್ದಾರೆ. ನಾನು ಸ್ಥಳಕ್ಕೆ ಭೇಟಿ ಕೊಟ್ಟು ಜಿಲ್ಲಾಧಿಕಾರಿಗಳವರಿಗೆ ಇನ್ಸ್ಟ್ರಕ್ಷನ್ ಕೊಟ್ಟು ಬಂದಿದ್ದೇನೆ. ಅಲ್ಲಿ ಕೆಲವೊಂದು ಪ್ರೋಗ್ರಾಮ್‌ಗಳನ್ನು ಮಾಡಬೇಕೆಂದು ಸಲಹೆ ಬಂದಿದೆ. ಪರಿಹಾರ ರೂಪವಾಗಿ ೧೪ ಲಕ್ಷ ರೂಪಾಯಿಗಳನ್ನು ಕೊಡಲಿಕ್ಕೆ ಸರ್ಕಾರ ಒಪ್ಪಿಕೊಂಡಿದೆ. ನಿಮ್ಮ ಜನತಾದಳದ ನಾಯಕರು ಒಂದು ಹೇಳಿಕೆಯನ್ನು ಇತ್ತು ಸಂಗನಕಲ್‌ನ ಬಗ್ಗೆ ಎನ್‌ಕ್ವಾಯರಿ ಮಾಡದಿದ್ದರೆ ನಾವು ಧರಣಿ ಕುಳಿತುಕೊಳ್ಳುತ್ತೇವೆಂದು ಹೇಳಿದರು. ಅದೇರೀತಿ ದಲಿತ ಸಂಘರ್ಷ ಕಮಿಟಿಯವರು ಸಹ ಈ ಬಗ್ಗೆ ಜುಡಿಸಿಯಲ್ ಎನ್‌ಕ್ವಾಯರಿ ಮಾಡಬೇಕೆಂದು ಕೇಳಿದ್ದರು. ಈಗ ಸರ್ಕಾರ ಒಂದು ನಿರ್ಣಯ ತೆಗೆದುಕೊಂಡಿದೆ. ಮಾನ್ಯ ಮುಖ್ಯಮಂತ್ರಿಗಳು ಸಂಗನಕಲ್ ಮತ್ತು ಆಳಂದ್‌ಗಳಲ್ಲಿ ನಡೆದ ಘಟನೆಗಳ ಬಗ್ಗೆ ತನಿಖೆ ಮಾಡಲು ಜುಡಿಸಿಯಲ್ ಎನ್‌ಕ್ವಾಯರಿಗೆ ಒಪ್ಪಿಕೊಂಡಿದ್ದಾರೆ. ಮನೆಗಳನ್ನು ಕಳೆದುಕೊಂಡವರಿಗೆ ಮನೆ ಕಟ್ಟಿಕೊಳ್ಳಲು ನಾವು ವ್ಯವಸ್ಥೆ ಮಾಡಿದ್ದೇವೆ. ಸಧ್ಯಕ್ಕೆ ಟೆಂಪರರಿ ಶೆಡ್‌ಗಳನ್ನು ಮಾಡಿ ನಮ್ಮ ಇಲಾಖೆಯ ಅಧಿಕಾರಿಗಳ ಮುಖಾಂತರ ಸಹಾಯ ಮಾಡಂತ್ತಿದ್ದೇವೆ. ಜಿಲ್ಲಾಧಿಕಾರಿಗಳು ಸಹ ಈ ವಿಚಾರದಲ್ಲಿ ಸಹಾಯ ಮಾಡುತ್ತಿದ್ದಾರೆ. ಈ ಅಟ್ರಾಸಿಟಿ ಏನಿದೆ, ಇದನ್ನು ತಡೆಗಟ್ಟಲು ಸರ್ಕಾರ ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದಕ್ಕೆ ಮಾನ್ಯ ಸದಸ್ಯರುಗಳ ಸಲಹೆ ಮತ್ತು ಸಹಕಾರ ಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ನಮ್ಮ ಶಾಸಕರು ಸಹ ಈ ವಿಚಾರದಲ್ಲಿ ಬಹಳ ಚಟುವಟಿಕೆಯಿಂದ ಇದ್ದಾರೆ. ಅವರು ಯಾವುದೇ ಜಾತಿಯವರು ಇರಲಿ ಈ ಜನರಿಗೆ ತೊಂದರೆಯಾದರೆ ಮೊದಲು ಕೇಳುತ್ತಿರಲಿಲ್ಲ. ಈಗ ಕಾಲ ಪರಿವರ್ತನೆಯಾಗಿದೆ. ಈ ದೇಶದಲ್ಲಿ ಈ ಜನರ ಮೇಲೆ ಅಟ್ರಾಸಿಟಿ ಕಡಿಮೆಯಾಗುತ್ತಿದೆಯೆಂದು ಹೇಳಬಹುದು. ಈಗ ನಮಗಿರುವ ತೊಂದರೆ ಏನೆಂದರೆ ಸಮಾಜ ಕಲ್ಯಾಣ ಇಲಾಖೆಯ ಕೆಲಸಕಾರ್ಯಗಳು ಏನಿವೆ ಅವುಗಳಲ್ಲಿ ಮುಖ್ಯವಾಗಿ ಹಾಸ್ಟಲ್‌ಗಳು. ಪ್ರಿಮೆಟ್ರಿಕ್ ಹಾಸ್ಟಲ್, ಕಾಲೇಜು ಹಾಸ್ಟಲ್ ಇವುಗಳ ಬಗ್ಗೆ ಹೇಳಿದ್ದಾರೆ. ಗುರುಪ್ರಸಾದ್ ಕಮಿಟಿ ಶಿಫಾರಸ್ಸಿನಂತೆ ೧೦೦ ರೂಪಾಯಿ ಕೊಡುವ ಕಡೆ ೧೫೦ ರೂಪಾಯಿ ಕೊಡಬೇಕೆಂದು, ೧೫೦ ರೂಪಾಯಿ ಕೊಡುವ ಕಡೆ ೨೦೦ ರೂಪಾಯಿ ಕೊಡಬೇಕೆಂದು ಅದೇರೀತಿ ಆಶ್ರಮ ಶಾಲೆಗಳಲ್ಲಿ ಓದುತ್ತಿರುವ ಈ ಜನರ ಮಕ್ಕಳಿಗೆ ೭೫ ರೂಪಾಯಿ ಕೊಡುವ ಕಡೆ ೧೦೦ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಅದರ ಸಲುವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳ ಜೊತೆ ಮಾತನಾಡಿ ಈಗ ಕೊಡಲಿಕ್ಕೆ ಒಪ್ಪಿಸಿದ್ದೇನೆ. ಅದು ದಿನಾಂಕ ೧-೬-೯೦ ರಿಂದ ಜಾರಿಗೆ ಬಂದಿದೆ. ನೀವು ಅಧಿಕಾರದಲ್ಲಿದ್ದ ಕಾಲದಲ್ಲಿ ಮಾಡಲಿಲ್ಲ, ಆದರೆ ನಾವು ಮಾಡಿದ್ದೇವೆ. ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಹಣಕಾಸಿನ ಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಮ್ಮ ಇಲಾಖೆಯ ಕಾರ್ಯಕ್ರಮಗಳ ಪ್ರಕಾರ ಹಾಸ್ಟಲ್‌ಗಳಲ್ಲಿ ಬೇಕಾದಷ್ಟು ಸಂಖ್ಯೆಯಲ್ಲಿ ಈ ಜನರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ತಾವು ಹೇಳಿದ ಸಲಹೆ ಪ್ರಕಾರ ಶಾಲಾ ಕಾಲೇಜುಗಳಲ್ಲಿ ಅಡ್ಮಿಶನ್ ಆದಕೂಡಲೇ ಹಾಸ್ಟಲ್‌ಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳುತ್ತೇವೆ. ಹಾಸ್ಟಲ್‌ಗಳ ಕಂಡೀಷನ್ ಬಗ್ಗೆ ಬಹಳಷ್ಟು ಜನರು ಕಂಪ್ಲೆಂಟ್ ಮಾಡುತ್ತಿದ್ದಾರೆ. ನಾನು ಬಹಳಷ್ಟು ಹಾಸ್ಟಲ್‌ಗಳಿಗೆ ಭೇಟಿ ಕೊಟ್ಟಮೇಲೆ ಅಲ್ಲಿ ಮೆಂಟೇನೆನ್ಸ್ ಸರಿಯಿಲ್ಲ ಎನ್ನುವುದು ಗೊತ್ತಾಯಿತು. ಹಾಸ್ಟಲ್‌ಗಳಲ್ಲಿ ಓದುತ್ತಿರುವ ಮಕ್ಕಳಿಗೆ ಸ್ನಾನದ ರೂಮ್‌ಗಳಿಲ್ಲ, ಶೌಚಾಲಯಗಳಿಲ್ಲ, ಊಟದ ಕೋಣೆಗಳಿಲ್ಲ ಬಹಳಷ್ಟು ತೊಂದರೆಗಳಿವೆ. ಜೊತೆಗೆ ಇರತಕ್ಕ ಕೊಠಡಿಗಳು ಸಾಲುವುದಿಲ್ಲ. ಇವುಗಳ ಬಗ್ಗೆ ಪರಿಶೀಲನೆ ಮಾಡಬೇಕೆಂದು ನಮ್ಮ ಇಲಾಖೆಯ ಕಾರ್ಯದರ್ಶಿಯವರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇನೆ. ಒಂದು ಹಾಸ್ಟಲ್ ಕಮಿಟಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ ರಾಜ್ಯಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಇಲಾಖೆಯ ನಿರ್ದೇಶಕರು, ಜಿಲ್ಲಾಧಿಕಾರಿಗಳು ಇರುತ್ತಾರೆ. ತಾಲ್ಲೂಕುಮಟ್ಟದಲ್ಲಿ ತಹಶೀಲ್ದಾರ್‌ರವರ ನೇತೃತ್ವದಲ್ಲಿ ತಾಲ್ಲೂಕು ಮಟ್ಟದ ಹಾಸ್ಟಲ್ ಸಮಿತಿಯನ್ನು ಮಾಡುವವರು ಇದ್ದೇವೆ. ಈ ಹಾಸ್ಟಲ್ ಕಮಿಟಿಯಲ್ಲಿ ಶಾಸಕರು ಕೂಡ ಸದಸ್ಯರಿರುತ್ತಾರೆ. ಅದೇ ಪ್ರಕಾರ

ಎಂಪಿಗಳೂ ಸಹಾ ಮೆಂಬರ್ ಆಗಿರುತ್ತಾರೆ. ಈ ಪ್ರಕಾರ ಹಾಸ್ಟೆಲ್‌ನಲ್ಲಿ ಏನು ಕಷ್ಟ ಇದ್ದರೂ ಕೂಡಾ ಅದನ್ನು ದೂರ ಮಾಡಲು ಆ ಕಮಿಟಿ ಮೂಲಕ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಶಾಸಕರು ಸದಸ್ಯರು ಆಗಬಾರದು. ತಹಶೀಲ್ದಾರರು ಅಧ್ಯಕ್ಷರು ಇದ್ದಾಗ ಶಾಸಕರು ಸದಸ್ಯರಾಗಬಾರದು. ಆದ್ದರಿಂದ ಬೇರೆ ಯಾರನ್ನಾದರೂ ಅವರ ಜಾಗದಲ್ಲಿ ಹಾಕಿ.

ಶ್ರೀ ಬಿ. ಶಿವಣ್ಣ.— ಆಯಿತು ನೋಡುತ್ತೇನೆ.

ಶ್ರೀ ಸಿದ್ದನಗೌಡ ಪಾಟೀಲ್.— ಶಾಸಕರು ಛೇರ್ಮನ್ ಆಗಬೇಕೇ ಹೊರತು ಮೆಂಬರ್ ಆಗಬಾರದು. ತಾವು ಈ ಬಗ್ಗೆ ತಮ್ಮ ಅಧಿಕಾರಿಗಳಿಗೆ ಆದೇಶ ಕೊಡಬೇಕು.

ಶ್ರೀ ಬಿ. ಶಿವಣ್ಣ.— ಆಯಿತು ಮತ್ತೆ ಇವತ್ತು ಇಲಾಖೆ ವತಿಯಿಂದ ಬಹಳಷ್ಟು ಸಾಲಗಳನ್ನು ಈ ವರ್ಗಗಳ ಜನರಿಗೆ ಕೊಟ್ಟಿದ್ದೇವೆ. ವ್ಯವಸಾಯ ಇಲಾಖೆಯಿಂದ ಹಾಗೂ ಬೇರೆ ಬೇರೆ ಇಲಾಖೆಗಳಿಂದ ಕೈಗಾರಿಕೆ ಮಾಡುವುದಕ್ಕೆ ವ್ಯವಸಾಯಕ್ಕೆ ಸಹಾಯ ಮಾಡುತ್ತಿದ್ದೇವೆ. ಅಷ್ಟೇ ಅಲ್ಲ ೩೫ ಸಾವಿರ ರೂಪಾಯಿ ಏನು ಲೋನ್ ಕೊಡುತ್ತಿದ್ದೆವು, ಅದನ್ನು ೨ ಲಕ್ಷ ೫೦ ಸಾವಿರಕ್ಕೆ ಹೆಚ್ಚು ಮಾಡಿದ್ದೇವೆಂದೂ ಹೇಳಬೇಕಾಗುತ್ತದೆ. ನಮ್ಮ ಕಾರ್ಯಕ್ರಮದಲ್ಲಿ ಮುಖ್ಯವಾದ್ದು ನೀರಾವರಿ ಬೋರ್‌ವೆಲ್‌ಗಳು. ಇದು ಬಹಳ ಒಳ್ಳೆಯ ಕಾರ್ಯಕ್ರಮ. ಈ ಬೋರ್‌ವೆಲ್‌ಗಳಿಂದ ಅಧಿಕ ಲಾಭ ಅವರಿಗೆ ಆಗುತ್ತಿದೆ. ಈ ಬೋರ್‌ವೆಲ್‌ಗೆ ನಾವು ೩೫ ಸಾವಿರ ರೂ. ಕೊಡುತ್ತಿದ್ದು, ಅದನ್ನು ೪೫ ಸಾವಿರಕ್ಕೆ ಹೆಚ್ಚು ಮಾಡಬೇಕೆಂದು ಮಾನ್ಯ ಸಿಂಧ್ಯಾ ಅವರು ಹೇಳಿದ್ದಾರೆ. ಇವತ್ತು ನಬಾರ್ಡ್‌ನ ಕಂಡೀಷನ್ಸ್ ೪೦ ಸಾವಿರದೊಳಗೆ ಕೊಡಬೇಕೆಂದು ಇದೆ. ಆದ್ದರಿಂದ ಈ ಬಗ್ಗೆ ಪರಿಶೀಲನೆ ಮಾಡಿ ಹೆಚ್ಚು ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ವಿಶೇಷ ಘಟಕ ಯೋಜನೆಯ ಬಗ್ಗೆ ರಾಜ್ಯದ ಎಲ್ಲ ಕಡೆಯೂ ಎವಾಲ್ಯುಯೇಷನ್ ಪ್ರೋಗ್ರಾಮ್ ಹಾಕಿಕೊಳ್ಳಬೇಕಾಗಿತ್ತೆಂದು ಮಾನ್ಯ ಸದಸ್ಯರು ಹೇಳಿದರು. ಇದೀಗ ನಮ್ಮ ಇಲಾಖೆಯಿಂದ ತುಮಕೂರು ಜಿಲ್ಲೆಯಲ್ಲಿ ಎವ್ಯಾಲ್ಯುಯೇಷನ್ ಪ್ರೋಗ್ರಾಮ ಅನ್ನು ಮಾಡಿದ್ದಾರೆ. ಹಾಗೂ ಪರಿಶೀಲನೆ ಮಾಡಿದ್ದಾರೆ. ಮುಂದೆ ಎಲ್ಲಾ ಜಿಲ್ಲೆಗಳಿಗೆ ಹೋಗಿ ಪರಿಶೀಲನೆ ಮಾಡಿ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನೋಡುತ್ತೇವೆ. ನಮ್ಮಲ್ಲಿ ಗಂಗಾ ಕಲ್ಯಾಣ ಯೋಜನೆ ಬಗ್ಗೆ ೧೯೮೭ರಲ್ಲಿಯೇ ಒಂದು ಸುತ್ತೋಲೆ ಹೋಗಿದೆ. ೫ ವರ್ಷಗಳವರೆಗೆ ಸರ್ಕಾರದವರೇ ಅವುಗಳನ್ನು ನೋಡಿಕೊಳ್ಳಬೇಕೆಂದು ಅದರಲ್ಲಿ ಹೇಳಿದೆ. ಮತ್ತೆ ಟೈಪಿಂಗ್ ಹಾಗೂ ಟಿ.ವಿ. ಕೆಲಸ ಮಾಡುವವರಿಗೆ ಟ್ರೈನಿಂಗ್ ಕೊಡುವ ಕಾರ್ಯಕ್ರಮಗಳು ಇವೆ. ಕೈಗಾರಿಕೆ ಮಾಡುವವರಿಗೆ ಸಹಾಯ ಮಾಡುವುದು, ತರಕಾರಿ ಮಾರುಕಟ್ಟೆಗೆ ಸಾಲ ಕೊಡುವುದು ಈ ರೀತಿ ಹಲವಾರು ಕಾರ್ಯಕ್ರಮಗಳು ೧೯೮೯–೯೦ರಲ್ಲಿ ಇವೆ. ಮತ್ತೆ ನಮ್ಮ ಇಲಾಖೆಯಲ್ಲಿ ಎಲ್ಲರೂ ನಿಮ್ಮ ಜನರೇ ಇದ್ದಾರೆ ಎಂದು ಸಿಂಧ್ಯಾ ಅವರು ಹೇಳಿದರು. ಮಿನಿಸ್ಟರೂ ಹರಿಜನರೇ, ಸೆಕ್ರೆಟರಿಯವರು ಹರಿಜನರೇ, ಡೈರೆಕ್ಟರ್ ಅವರೂ ಹರಿಜನರೇ ಎಂದು ಸಿಂಧ್ಯಾ ಅವರು ಹೇಳಿದರು. ಇವತ್ತು ಸೆಕ್ರೆಟರಿಗಳಾದ ರಜಪೂತ್‌ಸಿಂಗ್ ಅವರು ಸಿಂಗ್ ಜನಾಂಗಕ್ಕೆ ಸೇರಿದವರಿದ್ದಾರೆ. ಅವರು ಐಎಎಸ್ ಅಧಿಕಾರಿಗಳಾಗಿದ್ದು ಅವರು ಒಳ್ಳೆಯ ದಕ್ಷರಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ನಿರ್ದೇಶಕಿಯವರು ಹರಿಜನರಲ್ಲ. ಅವರೂ ಕೂಡ ದಕ್ಷ ಅಧಿಕಾರಿ ಇದ್ದಾರೆ. ಅವರು ಐಎಎಸ್ ಇದ್ದಾರೆ. ಎಲ್ಲರೂ ಒಳ್ಳೆಯವರಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಒಬ್ಬರು ಮಾತ್ರ ಹರಿಜನರಿದ್ದು ಅವರೂ ದಕ್ಷ ಅಧಿಕಾರಿ ಇದ್ದಾರೆ. ಆದರೆ ಸಾಕಷ್ಟು ಸಿಬ್ಬಂದಿ ಇಲ್ಲದೆ ನಮಗೆ ಕೆಲಸ ಮಾಡುವುದು ಕಷ್ಟವಾಗಿದೆ.

ಶ್ರೀ ವಾಟಾಳ್ ನಾಗರಾಜ್.— ಈ ಸಭೆಯ ಆ ಮೂಲೆಯಲ್ಲಿರುವ ಅಧಿಕಾರಿಗಳೆಲ್ಲರೂ ಸತ್ಯಹರಿಶ್ಚಂದ್ರನ ವಂಶದಿಂದ ಬಂದಿರುವವರು, ಅದರಲ್ಲಿ ಏನೂ ಅನುಮಾನವಿಲ್ಲ.

ಶ್ರೀ ಬಿ. ಶಿವಣ್ಣ.— ಅವರು ಕೇಳಿದ್ದರಿಂದ ನಾನು ಹೇಳಬೇಕಾಯಿತು. ಇವತ್ತು ಒಳ್ಳೆಯ ಅಧಿಕಾರಿಗಳು ಇದ್ದು ಸ್ಟಾಫ್ ಇಲ್ಲದೇ ಇರುವುದರಿಂದ ಸ್ವಲ್ಪ ಹೆಚ್ಚು ಕಡಿಮೆ ಆಗಿದೆ. ಇವತ್ತು ಮಹಿಳಾ ಕಲ್ಯಾಣ ಇಲಾಖೆಯ ಮೂಲಕ ಹೆಣ್ಣುಮಕ್ಕಳಿಗೆ ಸಹಾಯ ಮಾಡುತ್ತಿದ್ದೇವೆ. ಮತ್ತೆ ಸಿಡಿಪಿನಲ್ಲಿ ಏನೂ ಆಕ್ಷನ್ ತೆಗೆದುಕೊಂಡಿಲ್ಲವೆಂದು ಹೇಳಿದರು ಈ ಬಗ್ಗೆ ನಾವು ಕ್ರಮ ತೆಗೆದುಕೊಂಡು ೧೫ ಜನರ ಮೇಲೆ ಛಾರ್ಜಸ್ ಮಾಡಿದ್ದೇವೆ. ೨೩ ಜನರ ಮೇಲೆ ಅಲಿಗೇಷನ್ಸ್ ಬಂದಿದ್ದು, ಎನ್‌ಕ್ವಯರಿ ಮಾಡುತ್ತಿದ್ದೇವೆ. ಇವತ್ತು ಹೆಣ್ಣುಮಕ್ಕಳ ಬಗ್ಗೆ ಹೇಳಬೇಕೆಂದರೆ, ಈ ದೇವದಾಸಿ ಪದ್ಧತಿ ಏನು ಇದೆ ಅದರ ಬಗ್ಗೆ ನಾನು ಹೇಳಬೇಕಾಗಿಲ್ಲ. It is a disgraceful institution in the human history. ಇದಕ್ಕಿಂತಲೂ ಕಡಿಮೆಯಾವುದೂ ಇಲ್ಲ ಇದಕ್ಕೆ ಕಾರಣ ಕೆಲವು

ಐತಿಹಾಸಿಕ, ಕೆಲವು ಪಾರಂಪರಿಕ ಕಾರಣಗಳು ಇರುತ್ತವೆ. ಇದರ ಬಗ್ಗೆ ಸರ್ಕಾರದಲ್ಲೂ ಕೂಡಾ ತೀಕ್ಷ್ಣತೆಯಿಂದ ವಿಚಾರ ಮಾಡುತ್ತಿದ್ದೇವೆ. ನಾನು ಈ ಬಗ್ಗೆ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿದ್ದೇನೆ.

ಇವರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಿ ಅಂತ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದೇ ಪ್ರಕಾರ ಸರ್ಕಾರ ಆ ದಿಕ್ಕಿನಲ್ಲಿ ೨-೩ ಮೀಟಿಂಗ್‌ಗಳನ್ನು ಮಾಡಿದೆವು. ಜೊತೆಗೆ ಸವದತ್ತಿಗೆ ವಿಸಿಟ್ ಮಾಡಿದ್ದೇವೆ. ಸವದತ್ತಿಯಲ್ಲಿರುವ ಯಲ್ಲಮ್ಮ ದೇವಸ್ಥಾನಕ್ಕೆ ಬಂದವರು ದೇವದಾಸಿಯರನ್ನಾಗಿ ಹೆಚ್ಚು ಹೆಚ್ಚು ಬಿಟ್ಟುಬಿಡುತ್ತಾರೆಂಬ ಅಭಿಪ್ರಾಯ ಬಂತು ಅದಕ್ಕಾಗಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ದೂರವಾಣಿಯ ಮೂಲಕ ಹೇಳಿ ಇದು ಆಗಬಾರದೆಂದು ಸೂಚಿಸಿದ್ದೇವೆ. ಈಗ ಅದು ಆಗುತ್ತಿಲ್ಲ. ಆದರೂ ಮೂಢನಂಬಿಕೆ ಇನ್ನೂ ಅಲ್ಲಲ್ಲಿ ಇರುವುದರಿಂದ ಕಟ್ಟುನಿಟ್ಟಾಗಿ ಕಡಿಮೆ ಮಾಡುವುದಕ್ಕಾಗಿಲ್ಲ. ಆದಷ್ಟು ಮಟ್ಟಿಗೆ ಈಗ ಇದನ್ನು ಕಡಿಮೆ ಮಾಡಿದ್ದೇವೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕಾಗಿ ೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ೧೨೦೦ ಜನರಿಗೆ ಈ ಕಾರ್ಯಕ್ರಮದಡಿಯಲ್ಲಿ ಇವಾಲ್ಯುಯೇಷನ್ ಮಾಡಿ ೩೦೦ ಜನರಿಗೆ ಪರ್ಮನೆಂಟ್ ಆಗಿ ರೀ-ಹ್ಯಾಬಿಲಿಟೇಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ದೇವದಾಸಿಯರ ಮಕ್ಕಳ ಸಲುವಾಗಿ ಅದರಲ್ಲೂ ಬಾಲಕರ ಸಲುವಾಗಿ ಸವದತ್ತಿಯಲ್ಲಿ ಒಂದು ಹಾಸ್ಟೆಲ್ ಇದೆ. ಅದೇ ಪ್ರಕಾರ ಅಥಣಿಯಲ್ಲಿ ಇನ್ನೊಂದು ಹಾಸ್ಟಲ್‌ನ್ನು ಮಾಡಿದ್ದೇವೆ. ಧಾರವಾಡ, ಬೆಳಗಾಂ ಸವದತ್ತಿ, ರಾಯಚೂರು ಈ ಭಾಗದಲ್ಲಿ ಹೆಚ್ಚಾಗಿ ಈ ದೇವದಾಸಿಯರು ಇದ್ದಾರೆ. ಅದೇ ಪ್ರಕಾರ ಬಿಜಾಪುರದಲ್ಲಿ ಇನ್ನೊಂದು ಮೀಟಿಂಗ್‌ನ್ನು ಮಾಡಿದ್ದೇವೆ. ಹೆಚ್ಚು ಹೆಚ್ಚು ದೇವದಾಸಿಯರನ್ನು ರೀ-ಹ್ಯಾಬಿಲಿಟೇಷನ್ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಮಾನ್ಯ ಕೌಜಲಗಿ ಅವರು ಸಹ ಅಂದಿನ ಮೀಟಿಂಗ್‌ನಲ್ಲಿ ಭಾಗವಹಿಸಿದ್ದರು. ಇನ್ನು ಅಂಗವಿಕಲರಿಗೆ ಸಂಬಂಧಪಟ್ಟ ಇಲಾಖೆಯೊಂದಿದೆ. ಅದು ಬಹಳ ಒಳ್ಳೆಯ ಇಲಾಖೆಯೆಂದು ನನಗನ್ನಿಸುತ್ತಿದೆ. ಕುರುಡರು, ಕುಂಟರು ಹೀಗೆ ಎಲ್ಲ ಅಂಗವಿಕಲರಿಗೂ ಇದರಿಂದ ಸಹಾಯವಾಗುತ್ತದೆ. ಅವರಿಗೆ ಸೇವೆ ಮಾಡುವಂತಹ ಒಂದು ಅವಕಾಶ ಇದರಿಂದ ದೊರೆಯುತ್ತದೆ. ಈ ಜನರನ್ನು ಶೋಷಣೆ ಮಾಡುವವರು ಇದ್ದಾರೆ. ಅದನ್ನು ತಪ್ಪಿಸುವ ಸಲುವಾಗಿ ಅಂತಹವರನ್ನು ಸರ್ಕಾರ ಗುರುತು ಮಾಡಿ, ಅವರ ಸಲುವಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕುತ್ತಿದ್ದೇವೆ. ವಿಶೇಷ ಘಟಕ ಯೋಜನೆಯಲ್ಲಿ ಸುಮಾರು ೧೬೮–೧೭೦ ಕೋಟಿ ರೂಪಾಯಿಗಳವರೆಗೆ ಎಲ್ಲ ಇಲಾಖೆಗಳಿಂದ ಸೇರಿ ಖರ್ಚು ಮಾಡುತ್ತಿದ್ದೇವೆ. ಬೇರೆ ಬೇರೆ ಇಲಾಖೆಯಲ್ಲಿ ಶೇಕಡ ೧೮ರ ಮೀಸಲು ಹಣದಲ್ಲಿ ಇವರ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿದ್ದಾರೆ. ಆ ವಿಚಾರ ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯಿತಿರಾಜ್ ಸಚಿವರಾದ ಶ್ರೀಮಾನ್ ಘೋರ್ಪಡೆಯವರಿಗೆ ಗೊತ್ತಿದೆ. ನಾವು ಕೂಡಿ ಪರಿಶೀಲನೆ ಮಾಡುತ್ತಿದ್ದೇವೆ ಈ ಎಲ್ಲ ಹಣವನ್ನು ಪೂಲ್ ಮಾಡಿ ಯಾವ ಪ್ರಕಾರ ಖರ್ಚು ಮಾಡಬೇಕೆಂಬುದನ್ನು ಸರ್ಕಾರ ಪರಶೀಲನೆಮಾಡುತ್ತಿದೆ. ಅದೇ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳು ಹೈ-ಪವರ್-ಕಮಿಟಿಯ ಸಭೆಯನ್ನು ಕರೆದು ಈ ಬಗ್ಗೆ ಚರ್ಚೆ ಮಾಡಿದರು. ಆ ಒಂದು ಸಭೆಯಲ್ಲಿ ಈ ಜನರ ಸಲುವಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಹಾಕಿಕೊಂಡಿರತಕ್ಕಂತಹ ಕಾರ್ಯಕ್ರಮಗಳನ್ನು ಪರಿಶೀಲಿಸಿ, ಅವುಗಳನ್ನು ಯಾವ ರೀತಿ ಜಾರಿಗೆ ತರಬೇಕೆಂಬುದರ ಬಗ್ಗೆ ಆದೇಶವನ್ನು ಕೊಟ್ಟಿದ್ದೇವೆ. ಫಿಜಿಕಲಿ ಹ್ಯಾಂಡಿಕ್ಯಾಪ್ಟ್‌ಗೆ ಸಂಬಂಧಪಟ್ಟಂತೆ ಇಂಟಿಗ್ರೇಟೆಡ್ ಎಜುಕೇಷನ್ ಸಿಸ್ಟಂನ್ನು ಫಾಲೋ ಮಾಡುತ್ತಿದ್ದೇವೆ. ಕುರುಡರು ಕುಂಟರು ಈಗ ಜನರಲ್ ಸ್ಕೂಲುಗಳಿಗೆ ಬಂದು ಓದಬಹುದು. ಮೊದಲು ಅವರಿಗಾಗಿಯೇ ಪ್ರತ್ಯೇಕವಾದ ಶಾಲೆಗಳು ಇದ್ದವು. ಈಗ ಅವರೂ ಕೂಡ ಜನರಲ್ ಸ್ಕೂಲುಗಳಿಗೆ ಬಂದು ಓದಬಹುದು. ಆ ಪ್ರಕಾರ ಎಲ್ಲ ಇಲಾಖೆಗಳಿಗೆ ಸಂಬಂಧ ಪಟ್ಟಂತೆ ಕೆಲವು ಕಾರ್ಯಕ್ರಮಗಳನ್ನು ಹಾಕಿದ್ದೇವೆ. ಮಾನ್ಯ ಸದಸ್ಯರ ಅನುಕೂಲಕ್ಕಾಗಿ ಕೆಲವು ಅಂಕಿ ಅಂಶಗಳನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅದನ್ನು ಓದಲು ತಾವು ಅಪ್ಪಣೆ ನೀಡಬೇಕು.

Apart from the schemes, I have a few things to share with the hon'ble members. There has been great demand for starting of hostels i. e., new hostels. Hon'ble Members are aware that the avaliability of funds is the main constraint and that is the reason why the Social Welfare Department has not been able to open new hostels. Members are also aware

that vacant posts in the Department has also affected the progress of opening new hostels. However, I am very confident that with the assistance of the Hon'ble Finance Minister and the Chief Minister I will be able to open at least 50 hostels of SCs/STs and 25 for BCs, this year. There are also plans to open minority hostels with grant in aid this year. The Devaraj Urs Research Centre for Backward Classes has an ambitious scheme. This has not taken a concrete shape for the last 2 years. I will ensure that this will come into being in this current year:

10.00 A. M.

During the current year, the Directorate of Social Welfare has Started a pre-examination Training Centre with hostel facilities, to impart training for about 60 candidates belonging to SC/ST appearing for the All India Civil Service Examinations. This will Serve as foundation to impart higher education and preparing students to compete in higher competitive examinations.

A budget provision of Rs. 19.00 lakhs has been made during the current year to establish two Residential schools for the backward classes candidates. Several religious minority organisations are running their own hostels. It is proposed to as list suchorganisations for construction of hostel buildings and also towards boarding charges.

It is also proposed to establish 10 Ashram Schools during the current year and to open 5 Tailoring Centres by the Department of Backward Classes.

To enable SC/ST, Backward Classes and Minority persons to get Self-employed, it is proposed to introduce new training schemes in Electrical Electronics, Automobile and other Trades through the Development Corporations.

Hon'ble Member would be glad to know that for the first time I have directed and arranged my department to release a sum of Rs.15.00 lakhs for the rehabilation of Devadasis. With this Rs. 15.00 lakhs as Corpus, approximately a sum of Rs. 50.00 lakhs would be raised from Financial Institutions. Thus, a sum of almost Rs.65.00 lakhs will be available for the rehabilitation of approximatly about 1,200 Devadasis. For the implementation of the programmes of the Women and Children's Welfare Department, we propose to involve the participation of good voluntary organisations.

This year being the year of the Girl Child we propose to start 5 Girls hostels.

This year, a special programme for the welfare of the street children and rag-pickers is being started. These young and unfortnate children will be given night shelters where they will be provided with medical care, vocational training and supplementary nutrition.

This year full coverage of the population of the state under the integrated child Development scheme projects would be taken up.

It is also proposed to start 3 new Juvenile Homes. out of these 3, one is for the girls and the remaining two are for boys.

For the welfare of the disabled, it is proposed to start one school for the blind and one school for the deaf children at Bangalore. Both these schools will be residential schools.

So for, there has been no survey of the disabled in the State of Karnataka. This is a big handicap in Programming for the welfare of the disabled. To eradicate this lacunae, we have taken up a survey of the diabled. Along with the survey, identity cards to the disabled will also be issued.

Old age homes for the physically handicapped one in each district, will be started through the help of voluntary agencies.

A technical training centre at Gulbarga for the training of deaf and blind is being set up, during the current year.

It is also proposed to start two disabled working men's hotels one at Mangalore and another at Mysore.

Lastly, before I conclude, I must mention that this being the Centinary year of Baba Saheb Dr. B. R. Ambedkar, during this year, construction of Ambedkar Bhavan in Bangalore would be taken up in right earnest. various programmes to mark the centenary year are being drawn up and members belonging to all sections will be involved in chalking out these programmes.

I thank the members who have participated in the discussions on the demands of my Department and also thank other members for giving their suggestions.

ಶ್ರೀ ಎಂ. ಟಿ. ವೆಂಕಟೇಶ್.— ೧೫೦ರಿಂದ ೩೦೦ ರೂಪಾಯಿಗಳಿಗೆ ವಿದ್ಯಾರ್ಥಿ ವೇತನ ಹೆಚ್ಚು ಮಾಡಿ ಎಂದು ಹೇಳಿದ್ದೆವು. ಇದರ ಬಗ್ಗೆ ಸಚಿವರಿಂದ ಉತ್ತರ ಬರಲಿಲ್ಲ.

ಶ್ರೀ ಬಿ ಶಿವಣ್ಣ.— ಈಗ ಹಣಕಾಸಿನ ತೊಂದರೆ ಇದೆ ಮುಂದೆ ಅದನ್ನು ಪರಿಶೀಲನೆ ಮಾಡಬಹುದು.

ಉಪ ಸಭಾಧ್ಯಕ್ಷಿಣಿಯವರು.—ಮಾನ್ಯ ಮಂತ್ರಿಗಳು, ಅವರ ಖಾತೆಗಳಿಗೆ ಸೇರಿದ ಇಲಾಖೆಗಳ ಮೇಲಿನ ಉತ್ತರವನ್ನು ಪೂರ್ಣವಾಗಿ ಮುಗಿಸಲಿ, ಅನಂತರ ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ. ಶಿವಣ್ಣ.— ಇದುವರೆಗೂ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಂತೆ ಉತ್ತರ ಕೊಟ್ಟ ಮೇಲೆ, ಇನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ ಬಗ್ಗೆ ಉತ್ತರ ಕೊಡಲು ಬಯಸುತ್ತೇನೆ.

ಶ್ರೀ ಕರಿಯಣ್ಣ.— ಸೋಷಿಯಲ್‌ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನ ಉತ್ತರ ಮುಗಿಯಿತು ಎಂದು ಹೇಳುತ್ತಿದ್ದಾರೆ, ನಾವು ಕ್ಲಾರಿಫಿಕೇಷನ್ ಕೇಳುತ್ತೇವೆ. ಅವರು ಮತ್ತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಹೋಗುತ್ತಿದ್ದಾರೆ.

ಉಪ ಸಭಾಧ್ಯಕ್ಷಿಣಿಯವರು.—ಅವರ ಖಾತೆಗಳಿಗೆ ಸಂಬಂಧಪಟ್ಟಂತೆ ಎಲ್ಲ ಉತ್ತರವನ್ನೂ ಹೇಳಲಿ, ನಂತರ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ.—ಸಮಾಜಕಲ್ಯಾಣಕ್ಕೂ ಕಲ್ಲಿಗೂ ಸಂಬಂಧ ಇಲ್ಲ. ಕಲ್ಲಿನದು ಬಂದಾಗ, ಅದು ಪ್ರಶ್ನೆ ಬೇರೆ, ಅದಕ್ಕೆ ಉತ್ತರವೇ ಬೇರೆ. ಈ ಸಮಾಜದ ಪರಿವರ್ತನೆ ಬಗ್ಗೆ ಮೊದಲು ಅವರು ಪೂರೈಸಿಕೊಳ್ಳಲಿ, ನಂತರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಹೋಗಲಿ.

ಶ್ರೀ ಎನ್. ಪ್ರಭಾಕರ ರಾಣೆ.—ವಿರೋಧಪಕ್ಷದ ನಾಯಕರು ಹೇಳಿದಹಾಗೆ ಸಮಾಜ ಕಲ್ಯಾಣ ಇಲಾಖೆಯನ್ನು ಮೊದಲು ಮುಗಿಸಿದರೆ ಒಳ್ಳೆಯದು.

ಶ್ರೀ ಎಂ.ಪಿ. ವೆಂಕಟೇಶ್.—ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಮುಗಿಸಿದರೆ. ಮುಂದೆ ಅವರಿಗೆ ಹೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕರಿಯಣ್ಣ.—ಈಗ ಸಚಿವರು ಸಮಾಜ ಕಲ್ಯಾಣ ಇಲಾಖೆ ಉತ್ತರ ಮುಗಿಸಿದ್ದಾರೆ, ನಮಗೆ ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷಿಣಿಯವರು.—ಅವರು ಎರಡು ಇಲಾಖೆಗಳ ಮಂತ್ರಿಗಳಾಗಿರುವುದರಿಂದ, ಉತ್ತರವನ್ನು ಪೂರ್ಣವಾಗಿ ಮುಗಿಸಿದ ಮೇಲೆ, ನೀವು ಯಾವುದರ ಬಗ್ಗೆ ಬೇಕಾದರೂ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ. ಶಿವಣ್ಣ.—ಮಾನ್ಯ ಉಪ ಸಭಾಧ್ಯಕ್ಷಿಣಿಯವರೇ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧಪಟ್ಟಂತೆ ಬಹಳ ಜನ ಗ್ರಾನೈಟ್ ಮೇಲೆ ಮಾತನಾಡಿದ್ದಾರೆ. ಇದರ ಮೇಲೆ ರೆಸಲ್ಯೂಷನ್ ಮೂವ್ ಆಯಿತು, ಪ್ರಶ್ನೆಗಳನ್ನು ಕೇಳಿದರು, ಕಾಲಿಂಗ್ ಅಟೆನ್‌ಷನ್ ಮೇಲೆ ಚರ್ಚೆ ಮಾಡಿದರು, ಅರ್ಧ ಗಂಟೆ ಚರ್ಚೆಯಾಯಿತು. ನಾವು ಈ ಕಲ್ಲಿಗೆ ಯಾವ ಬೆಲೆ ಇದೆ ಎಂಬುದನ್ನು ವಿಚಾರ ಮಾಡಬೇಕು. ಈ ಕಲ್ಲಿನಲ್ಲಿ ಅನೇಕ ವಿಧವಾದ ಕಲ್ಲುಗಳು ಇವೆ, ನಮ್ಮ ವಿಧಾನಸೌಧವನ್ನೂ ಕಲ್ಲಿನಿಂದಲೇ ಕಟ್ಟಿದ್ದಾರೆ. ದೇವಸ್ಥಾನಗಳನ್ನೂ ಕಲ್ಲಿನಿಂದಲೇ ಕಟ್ಟುತ್ತಾರೆ. ೧೯೭೮–೭೯ರ ನಂತರ ಈ ಕರಿ ಕಲ್ಲಿಗೆ ಸ್ವಲ್ಪ ಬೆಲೆ ಬಂತು. ಇದನ್ನು ನಮ್ಮವರು ಯಾರೂ ಯೋಚನೆ ಮಾಡಲಿಲ್ಲ, ಹೊರ ದೇಶದವರು ಇದರ ಬಗ್ಗೆ ಯೋಚನೆ ಮಾಡಿ ಬೆಲೆ ಕಟ್ಟಿದರು. ಅಲ್ಲಿಂದ ಜನ ತಮ್ಮ ಕೆಲಸ ಪ್ರಾರಂಭ ಮಾಡಿದರು. ಕೇಂದ್ರ ಸರ್ಕಾರ ೨೭ ಜನರಿಗೆ ಲೀಸ್ ಕೊಟ್ಟಿತು. ೧೯೭೯ರಲ್ಲಿ ಇದು ರಾಷ್ಟ್ರೀಕರಣ ಆಯಿತು. ಅದಕ್ಕಿಂತ ಮೊದಲು ಅಲ್ಲಿ ಏನಾಗಿತ್ತು ಎಂದರೆ ೪೯–೫೦೦ ಜನ ಲೀಸ್ ಹೋಲ್ಡರ್ಸ್ ಇದ್ದರು. ೧೯೭೯ರಲ್ಲಿ ಬ್ಲಾಕ್ ಗ್ರಾನೈಟ್‌ನ್ನು ಸರಕಾರ ಯಾವಾಗ ನ್ಯಾಷನಲೈಸ್ ಮಾಡಿತು, ಆಗ ಬಹಳ ಜನ ಪ್ರೈವೇಟ್ ಪಟ್ಟಾ ಲ್ಯಾಂಡ್ ಓನರ್ಸ್ ಕೋರ್ಟಿಗೆ ಹೋದರು. ಕೋರ್ಟಿಗೆ ಹೋಗಿ ಎಲ್ಲರೂ ಸ್ಟೇ ಆರ್ಡರ್ಸ್ ತಂದರು. ಸ್ಟೇ ಆರ್ಡರ್ಸ್ ತಂದ ಮೇಲೆ ನ್ಯಾಷನಲೈಸೇಷನ್ ಪ್ರೋಗ್ರಾಂ ಇಂಟರ್ ನ್ಯಾಷನಲೈಸ್ ಆಗಿ ಹೋಯಿತು. ಇಂಟರ್‌ನ್ಯಾಷನಲೈಸ್ ಎಂದರೆ ಯಾರು ಬೇಕು ಅವರು ಕಲ್ಲು ತೆಗೆದು ವ್ಯಾಪಾರ ಮಾಡಬಹುದು ಉರ್ದುವಿನಲ್ಲಿ ಒಂದು ಮಾತು ಹೇಳುತ್ತಾರೆ ಆ ರೀತಿ ವೈಟ್ ಈಸ್ ರೈಟ್ ಎಂದು ಆಯಿತು ಯಾವುದೇ ಕಾನೂನನ್ನು ಅಧಿಕಾರವನ್ನು ಅವರು ನಡೆಸಿಕೊಡಲಿಲ್ಲ. ಹೈಕೋರ್ಟ್ ಪ್ರತಿಯೊಂದಕ್ಕೂ ಸ್ಟೇ ಕೊಡುವುದೇ ಕೊಡುವುದು. ೧೬೩ ಜನ ಸ್ಟೇ ತಂದರು. ಸ್ಟೇ ಕೊಟ್ಟ ಮೇಲೆ ಸರಕಾರ ಅದನ್ನು ವೆಕೇಟ್ ಮಾಡಿಸಲು ಪ್ರಯತ್ನ ಮಾಡಿತು. ಆದರೆ ಕೋರ್ಟ್ ಡೈರೆಕ್ಷನ್ ಕೊಟ್ಟಿತು. They have directed tne Revenue authorities not to interfere in the affair ಹೊಡೆದುಕೊಂಡು ಹೋಗಲಿ ಎಂದು ಹೇಳಿದರು. ಇದು ನ್ಯಾಷನಲೈಸ್ ಆದ ಮೇಲೆ ಬಂದಂಥ ತೊಂದರೆ. ಸ್ಟೇಟ್ ಗೌರ್ನಮೆಂಟ್ ಪ್ರಾಬ್ಲಂ ಹೇಳುತ್ತೇನೆ. ಗೌರ್ನಮೆಂಟ್ ಆಫ್ ಇಂಡಿಯಾದವರು ಇವು ವ್ಯಾಲ್ಯೂಯಬಲ್ ಸ್ಟೋನ್ಸ್ ಇವೆ. ಇಂತಹದಕ್ಕೆ ನಮಗೆ ಫಾರಿನ್ ಎಕ್ಸ್‌ಚೇಂಜ್ ಸಿಗುತ್ತದೆ. ಅಡಿಷನಲ್ ಇನ್‌ಕಮ್ ನಮಗೆ ಬರುತ್ತದೆ. ಆದುದರಿಂದ ಎಕ್ಸ್‌ಪರ್ಟ್ಸ್ ಆದಂಥ ಬಹಳ ಜನರಿಗೆ ಪಾಲಿಷಿಂಗ್ ಮತ್ತು ಕಟಿಂಗ್ ಫ್ಯಾಕ್ಟರಿ ಇಟ್ಟುಕೊಂಡು ವ್ಯಾಪಾರ ಮಾಡಲು ಅವಕಾಶವಾಗುವಂತೆ ೨೭ ಯೂನಿಟ್ ಎಕ್ಸ್‌ಪೋರ್ಟ್ ಓರಿಯಂಟೆಡ್ ಯೂನಿಟ್ಸ್ ಎಂದು ಮಾಡಿದರು. ಅವರು ಈಗಾಗಲೇ ಇಲ್ಲಿ ಬಂದು ಅವರೇ ಗಣಿ ಲೀಸ್ ತೆಗೆದುಕೊಂಡು ಬ್ಲಾಕ್ ಗ್ರಾನೈಟ್ ಮತ್ತು ಇತರ ಗ್ರಾನೈಟ್‌ಗಳನ್ನು ತೆಗೆದು ವ್ಯಾಪಾರ ಮಾಡಲು ಪ್ರಾರಂಭ ಮಾಡಿದರು. ೨೭ ಜನ ಫ್ಯಾಕ್ಟರಿ ಸೆಟಪ್ ಮಾಡಿದರು. ಇವರು ಯಾವ ಜಾತಿ, ಯಾವ ಊರು ಒಂದೂ ಯಾರಿಗೂ ಗೊತ್ತಿಲ್ಲ. ಗೌರ್ನಮೆಂಟ್ ಆಫ್ ಇಂಡಿಯಾದವರು ೨೭ ಜನರಿಗೆ ಅನುಮತಿ ಕೊಟ್ಟಿದ್ದಾರೆ. ಅವರು ಇಲ್ಲಿ ಬಂದು ಕೆಲಸ ಮಾಡುತ್ತಿದ್ದಾರೆ. ಈ ಕಡೆ ಸ್ಟೇಟ್ ಭಾಗದಲ್ಲಿ ನೋಡಿದರೆ, ಇದೆಲ್ಲಾ ಕಂಪ್ಲೀಟ್ ಸ್ಟೇ ಆರ್ಡರ್ ಮೇಲೆ ನಾನಾ ತರಹದಿಂದ ದುರುಪಯೋಗ ಮಾಡಿಕೊಂಡರು. ವಾಟಾಳ್ ನಾಗರಾಜ್ ಅವರು ಹೇಳುವುದು ಕಂಪ್ಲೀಟ್ ಕರೆಕ್ಟ್ ಇದೆ. ಅವರಿಗೂ ನಮಗೂ ಡಿಫರೆನ್ಸ್ ಏನು ಎಂದರೆ ಲಿಬರಲೈಸೇಷನ್ ಮತ್ತು ನ್ಯಾಷನಲೈಸೇಷನ್ ಪಾಲಿಸಿ ವಿಚಾರ. ನ್ಯಾಷನಲೈಸೇಷನ್ ಪಾಲಿಸಿ ಆದ ಮೇಲೆ ಕಂಪ್ಲೀಟ್ ಕಂಟ್ರೋಲ್ ಗೌರ್ನಮೆಂಟ್‌ಗೆ ಬರಬೇಕಾಗಿತ್ತು.

ಆದರೆ ಬರಲಿಲ್ಲ. ನ್ಯಾಷನಲೈಸೇಷನ್ ಪಾಲಿಸಿ ಮಾಡಿದರು. ಇದರಲ್ಲಿ ಹೈಕೋರ್ಟ್ ಇಂಟರ್‌ಫಿಯರೆನ್ಸ್ ಆಗಿ ಸ್ಟೇ ಆರ್ಡರ್‍ಸ್ ಬಂದು, ಗ್ರ್ಯಾನೈಟ್ಸ್‌ನ್ನು ಕಂಪ್ಲೀಟ್ ಆಗಿ, ಎಲ್ಲೆಲ್ಲಿ ಬೇಕು ಅಲ್ಲಿ ಮನಸ್ಸಿಗೆ ಬಂದ ಹಾಗೆ ಲೂಟಿ ಮಾಡಿದರು. ಅದೇ ಪ್ರಕಾರ ಪಿಂಕ್, ಗ್ರೇ ಗ್ರ್ಯಾನೈಟ್ ಬಗ್ಗೆ ೧೯೮೦–೮೧ರಲ್ಲಿ ಅವುಗಳನ್ನೂ ಕೂಡಾ ನ್ಯಾಷನಲೈಸ್ ಮಾಡಲಾಯಿತು. ೧೯೭೭–೮೦ರಿಂದ ಹತ್ತು ವರ್ಷಗಳವರೆಗೆ ಈ ದೇಶದಲ್ಲಿದ್ದ ಈ ಕಲ್ಲುಗಳನ್ನು ಕಂಪ್ಲೀಟ್ ಆಗಿ ಮುರಿದು ಚಿಂದಿ ಚಿಂದಿ ಮಾಡಿದರು. ಇಲ್ಲೀಗಲ್ ಆಗಿ ಎಷ್ಟು ಕ್ವಾರಿಗಳನ್ನು ಮಾಡುತ್ತಿದ್ದಾರೋ ಯಾರಿಗೂ ಗೊತ್ತಿಲ್ಲ. ನೋಟೀಸ್ ಕೊಟ್ಟರೆ ಹೈಕೋರ್ಟ್ ಸ್ಟೇ ಇದೆ ಎಂದು ಗೌರ್ನ್‌ಮೆಂಟ್‌ಗೆ ಹೇಳಿದರು. ಹೈಕೋರ್ಟ್ ಸ್ಟೇ ವೆಕೇಟ್ ಮಾಡಿಸುವುದಕ್ಕೆ ಆಗಲೇ ಇಲ್ಲ. ಗೌರ್ನ್‌ಮೆಂಟ್ ಆಫ್ ಇಂಡಿಯಾದವರು, ಈಗಾಗಲೇ ಕಲ್ಲುಗಳು ಹಾಳಾಗಿ ಹೋಗುತ್ತಿವೆ, ಕರ್ನಾಟಕ ರಾಜ್ಯ ಈ ಗ್ರ್ಯಾನೈಟ್‌ಗೆ ಬಹಳ ಹೆಸರುವಾಸಿಯಾದಂಥಾದ್ದು, ಇಲ್ಲಿನ ಗ್ರ್ಯಾನೈಟ್ಸ್ ಬಹಳ ಒಳ್ಳೆಯದು, ಎಂದು ಕಂಡು ಹಿಡಿದು, ಇದರ ಬಗ್ಗೆ ಮೀಟಿಂಗ್ ಮಾಡಿದರು. ತಮಿಳುನಾಡು, ಆಂಧ್ರಪ್ರದೇಶ, ಕೇರಳ ಮತ್ತು ಕರ್ನಾಟಕ ಈ ನಾಲ್ಕು ರಾಜ್ಯಗಳನ್ನು ಸೇರಿಸಿ ಮೀಟಿಂಗ್ ಮಾಡಿ. ಈ ಗ್ರ್ಯಾನೈಟ್ಸ್‌ನ್ನು ಪ್ರೈವೇಟ್ ಎಂಟರ್‌ಪ್ರಿನರ್‍ಸ್‌ಗೆ ಕೊಡುವುದು ಉತ್ತಮ ಎಂದು ಹೇಳಿ, ಅವರಿಗೆ ಕೊಟ್ಟರೆ ಲಾಭ ಬರುತ್ತದೆ, ಯಾರು ಬೇಕಾದರೂ ಮಾಡುತ್ತಾರೆ ಎಂದು ಹೇಳಿದರು. ಅದರ ಪ್ರಕಾರ ಗೌರ್ನ್‌ಮೆಂಟ್ ಆಫ್ ಇಂಡಿಯಾದವರು ೧೯೮೭ರಲ್ಲಿ, ಆಗ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಅವರಿಗೆ ಕೇಂದ್ರದಿಂದ ಲೆಟರ್ ಬಂದ ಮೇಲೆ ಇದರ ಬಗ್ಗೆ ಚರ್ಚೆ ಮಾಡಿ, ಡಿಸ್ಕಸ್ ಮಾಡಿ, ಹೌದು ಇದನ್ನು ಪ್ರವೇಟ್‌ಗೆ ಕೊಡಬೇಕು ಎಂಬ ಅಭಿಪ್ರಾಯ ಇದೆ ಎಂದು ಹೇಳಿದರು. ಅದೇ ಕಾಲಕ್ಕೆ ಕನ್ಸರ್ನ್ಡ್ ಮಿನಿಸ್ಟರ್ ಆದಂಥ ರಮೇಶ್ ಜಿಗಜಿಣಗಿಯವರೂ ಕೂಡಾ ಇದನ್ನು ಪ್ರೈವೇಟ್ ಎಂಟರ್‌ಪ್ರಿನರ್‍ಸ್‌ಗೆ ಕೊಡಬೇಕೆಂದು ಹೇಳಿದರು. ಅದೂ ಅಲ್ಲದೆ ಗೌರ್ನ್‌ಮೆಂಟ್ ಆಫ್ ಇಂಡಿಯಾದ ಇಂಡಸ್ಟ್ರಿಯಲ್ ಪಾಲಿಸಿ ರೆಸಲ್ಯೂಷನ್ ಪ್ರಕಾರ the granites must be given only to private enterpreneurs. ಹೀಗೆ ಒತ್ತಡಕ್ಕೆ ಒಳಗಾಗಿ ೧೯೮೭ರಲ್ಲಿ ಮೀಟಿಂಗ್ ಆಯಿತು. ಮೇಲಿಂದ ಮೇಲೆ ಮೀಟಿಂಗ್ಸ್ ಆಯಿತು. ಗೌರ್ನ್‌ಮೆಂಟ್ ಆಫ್ ಇಂಡಿಯಾದಿಂದ ಲೆಟರ್ಸ್ ಬಂತು. ಗ್ರ್ಯಾನೈಟ್‌ನ್ನು ನೀವು ಲಿಬರಲೈಸ್ ಮಾಡುತ್ತಿಲ್ಲ, ಇಮ್ಮೀಡಿಯೆಟ್ ಆಗಿ ಲಿಬರಲೈಸೇಷನ್ ಮಾಡಬೇಕು, ಮಾಡದೇ ಹೋದರೆ ಅದರ ವ್ಯಾಲ್ಯೂ ಹೋಗುತ್ತದೆ ಎಂದು ಸೆಂಟ್ರಲ್ ಗೌರ್ನ್‌ಮೆಂಟ್‌ನವರು ಪತ್ರ ಬರೆದರು. ಇಲ್ಲಿ ತಾವು ಬಹಳ ಮುಖ್ಯವಾದ ಒಂದು ವಿಷಯ ಅರ್ಥ ಮಾಡಿಕೊಳ್ಳಬೇಕು, ಗ್ರ್ಯಾನೈಟ್‌ಗೆ ವ್ಯಾಲ್ಯೂ ಬಂದಿದ್ದು ಈ ಫ್ಯಾಷನ್ ಮೇಲೆ ವರ್ಲ್ಡ್ ಮಾರ್ಕೆಟ್‌ನಲ್ಲಿ ೨೫೦೦ ಕೋಟಿ ಗ್ರ್ಯಾನೈಟ್‌ಗೆ ಬೇಡಿಕೆ ಇದೆ. ಅದರಲ್ಲಿ ನಮ್ಮ ಭಾರತ ದೇಶದ್ದು ೫ ಪರ್ಸೆಂಟ್ ಮಾತ್ರ. ೫ ಪರ್ಸೆಂಟ್ ಗ್ರ್ಯಾನೈಟ್ ನಾವು ಉಪಯೋಗ ಮಾಡಿ ಕೊಳ್ಳುತ್ತಿದ್ದೇವೆ. ಅಂದರೆ ಕೇವಲ ೧೫೦ ಕೋಟಿ ರೂಪಾಯಿಗಳದ್ದು ಮಾತ್ರ. ಇದಕ್ಕೆ ಬಹಳ ಬೇಡಿಕೆ ಇದೆ. ಭಾರತ ದೇಶದ ಕಲ್ಲುಗಳ ಮೇಲೆ ಜನರಿಗೆ ಹೆಚ್ಚು ಇಂಟರೆಸ್ಟ್ ಇದೆ. ಇದು ಉತ್ತಮ ಕಲ್ಲುಗಳಾಗಿದ್ದು ಇದಕ್ಕೆ ಹೆಚ್ಚು ವ್ಯಾಲ್ಯೂ ಬರುತ್ತದೆ. ಇದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಸೆಂಟ್ರಲ್ ಗೌರ್ನ್‌ಮೆಂಟ್ ಹೇಳಿತು. ತಮಿಳುನಾಡಿನವರಿಗೂ ಹೇಳಿದರು. ತಮಿಳುನಾಡಿನವರು ೧೯೭೮ರಲ್ಲಿ ಲಿಬರಲೈಸೇಷನ್ ಪಾಲಿಸಿ ಮಾಡಿದರು, ಅದೇ ಪ್ರಕಾರ ಆಂಧ್ರದಲ್ಲಿ ಬ್ಯಾನ್ ಇಲ್ಲ. ಲಿಬರಲೈಸೇಷನ್ ಪಾಲಿಸಿ ಇದೆ, ಕೆಲವು ಕಂಡೀಷನ್ಸ್ ಇದೆ ಅಷ್ಟೆ.

ಕೇರಳದಲ್ಲಿ ಪರ್ಮಿಟ್ ಸಿಸ್ಟಂ ಇದೆ. ನಮ್ಮ ರಾಜ್ಯದಲ್ಲಿ ಲಿಬರಲೈಜೇಷನ್ ಪಾಲಿಸಿಯನ್ನು ದಿನಾಂಕ ೨೨–೫–೧೯೯೦ರಲ್ಲಿ ಜಾರಿಗೆ ತಂದಿದ್ದೇವೆ. ನಾನು ಕೆಲವು ವಿಚಾರಗಳನ್ನು ತಮಗೆ ಹೇಳಬೇಕೆಂದರೆ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತವಿದ್ದಂತಹ ಕಾಲದಲ್ಲಿ ಸಹ ಈ ಬಗ್ಗೆ ಸಾಕಷ್ಟು ಚರ್ಚೆಗಳನ್ನು ಮಾಡಿದ್ದಾರೆ. ಅದರ ಎಕ್ಸಿಕ್ಯೂಟೀವ್ ಮೆಂಬರ್ಸ್ ಜೊತೆ ಸಹ ಚರ್ಚೆ ಮಾಡಿದ್ದಾರೆ. ಆ ಸಮಯದಲ್ಲಿ ಈ ಲಿಬರಲೈಜೇಷನ್ ಪಾಲಿಸಿಗೆ ಬೇಕಾದಂತಹ ಎಲ್ಲಾ ರೂಲ್ಸ್ ಮತ್ತು ರೆಗ್ಯುಲೇಶನ್ಸ್ ಮಾಡಿ ಇಟ್ಟಿದ್ದರು. ಆ ಕಾಲಕ್ಕೆ ಅವರು ಯಾವುದೇ ಒಂದು ನಿರ್ಣಯವನ್ನು ತೆಗೆದುಕೊಳ್ಳದೆ ಚುನಾಯಿತ ಸರ್ಕಾರ ಬಂದ ಮೇಲೆ ಈ ಪಾಲಿಸಿಯನ್ನು ಜಾರಿಗೆ ತರಬಹುದು ಎಂದು ಕೈಬಿಟ್ಟರು. ಆಮೇಲೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂತು, ನಾವು ಆ ಅಧಿಕಾರಕ್ಕೆ ಬಂದ ಎರಡು ಮೂರು ತಿಂಗಳು ಆದ ಮೇಲೆ ಆಲ್ ಇಂಡಿಯಾ ಗ್ರ್ಯಾನೈಟ್ ಅಸೋಷಿಯೇಶನ್‌ನವರು ಮತ್ತು ಕೇಂದ್ರ ಸರ್ಕಾರದವರು ನಮ್ಮ ಸರ್ಕಾರವನ್ನು ರಿಕ್ವೆಸ್ಟ್ ಮಾಡಿದರು ತಾವು ಈ ಒಂದು ಪಾಲಿಸಿಯನ್ನು ಬೇಗನೆ ಜಾರಿಗೆ ತರಬೇಕು, ಇಲ್ಲದಿದ್ದರೆ ತುಂಬಾ ತೊಂದರೆಯಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೂ ನನಗೂ ಹೇಳಿದರು. ಆಮೇಲೆ ನಮ್ಮ ಸರ್ಕಾರ ಅವರ ಜೊತೆಯಲ್ಲಿ ಸುಮಾರು ೫–೬ ಮೀಟಿಂಗ್‌ಗಳನ್ನು ಮಾಡಿ ನಂತರ ಅವರು ಮಾಡಿಟ್ಟ ರೂಲ್ಸ್ ಮತ್ತು ರೆಗ್ಯುಲೇಶನ್ಸ್‌ನ್ನು

ಪರಿಶೀಲನೆ ಮಾಡಿ ಕೊನೆಗೆ ದಿನಾಂಕ ೨೨-೫-೧೯೯೦ರಲ್ಲಿ ಒಂದು ನೋಟಿಫಿಕೇಶನ್ ಹೊರಡಿಸಿದ್ದೇವೆ. ಈ ನೋಟಿಫಿಕೇಶನ್ ಅನ್ನು ನಮ್ಮ ಕರ್ನಾಟಕ ಸರ್ಕಾರದವರೇ ಮಾಡಲಿಲ್ಲ. ನಮ್ಮ ಕೇಂದ್ರ ಸರ್ಕಾರದಿಂದ ಯಾವ ಒಂದು ಆದೇಶ ಬಂತೋ ಆ ಪ್ರಕಾರ ಮಾಡಿದ್ದೇವೆ. ಈ ರೀತಿ ಮಾಡಿದ್ದರಿಂದ ಅವರಿಗೆ ಇದ್ದ ತೊಂದರೆ ತಪ್ಪಿದಂತೆ ಆಯಿತು. ರಾಜ್ಯ ಸರ್ಕಾರಕ್ಕೆ ರಾಜಧನ ಸಹ ಬರುವುದಕ್ಕೆ ಅನುಕೂಲವಾಯಿತು. ಇದನ್ನು ಮಾಡುವುದಕ್ಕಿಂತ ಮುಂಚಿತವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಪ್ರತಿ ದಿವಸ ನೂರು ಇನ್ನೂರು ಲಾರಿಗಳಲ್ಲಿ ಗ್ರಾನೈಟ್ ಕಲ್ಲುಗಳನ್ನು ಮಂಗಳೂರು ಬಂದರಿಗೆ ಸಾಗಿಸುತ್ತಿದ್ದರು. ನಮಗೂ ಇದರಿಂದ ಬಹಳ ನೋವಾಗುತ್ತಿತ್ತು, ಆದರೆ ನಾವೇನು ಮಾಡುವುದು ಇಂತಹ ಪರಿಸ್ಥಿತಿಯಲ್ಲಿ ಯಾರ ಕಂಟ್ರೋಲ್ ಇರಲಿಲ್ಲ. ನಮ್ಮ ಕಂಟ್ರೋಲ್‌ಗೆ ಬರಬೇಕಾದರೆ ನಾವೇನು ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ನ್ಯಾಷನೆಲೈಜೇಶನ್ ಮಾಡಿದರೆ ನಮ್ಮ ಕಂಟ್ರೋಲ್‌ಗೆ ಬರಬಹುದು ಎಂದು ಮಾಡಿದ್ದೆವು, ಅದರ ವಿರುದ್ಧ ಇವರು ಹೈಕೋರ್ಟಿಗೆ ಹೋಗಿ ಅಲ್ಲಿ ತಡೆಯಾಜ್ಞೆಗಳನ್ನು ತಂದರು. ಆ ತಡೆಯಾಜ್ಞೆಗಳನ್ನು ವೆಕೇಟ್ ಮಾಡಿಸಲು ಸರ್ಕಾರಕ್ಕೆ ಆಗಲಿಲ್ಲ. ಈ ಪರಿಸ್ಥಿತಿಯಲ್ಲಿ ಸರ್ಕಾರ ಏನು ಮಾಡಬೇಕು ? ಕಳೆದ ಹತ್ತು ವರ್ಷಗಳಲ್ಲಿ ರಾಜ್ಯದಲ್ಲಿದ್ದ ಎಲ್ಲಾ ಗ್ರಾನೈಟ್ ಕಲ್ಲುಗಳು ಹಾಳಾಗಿದ್ದು ನಿಜ. ಆದ್ದರಿಂದಲೇ ನಮ್ಮ ಸರ್ಕಾರ ಈ ಲಿಬರಲೈಜೇಷನ್ ಪಾಲಿಸಿಯನ್ನು ಜಾರಿಗೆ ತಂದು ಇದರಿಂದ ಸ್ವಲ್ಪ ಕಂಟ್ರೋಲ್ ಮಾಡಬಹುದು. ಮತ್ತು ರಾಜ್ಯದ ಬೊಕ್ಕಸಕ್ಕೆ ರಾಜಧನ ಸಹ ಬರುವಂತೆ ಆಯಿತು. ಈ ಲಿಬರಲೈಜೇಶನ್ ಪಾಲಿಸಿಯಿಂದ ಪಟ್ಟಾದಾರರು ಸಹ ತಮ್ಮ ಸ್ವಂತ ಜಾಗಗಳಲ್ಲಿ ಈ ಗ್ರಾನೈಟ್ ಕಲ್ಲುಗಳು ಇದ್ದರೆ ಅವರು ಬೇರೆಯವರಿಗೆ ಲೀಜ್ ಕೊಡಬಹುದು. ಅಥವಾ ಅವರೇ ಸ್ವತಃ ವ್ಯವಹಾರ ಮಾಡಬಹುದು. ಇನ್ನು ಈ ಲಿಬರಲೈಜೇಶನ್ ಪಾಲಿಸಿಯಲ್ಲಿ ಕೆಲವು ಷರತ್ತುಗಳು ಇವೆ. ನಾವು ಪ್ರೈಯಾರಿಟಿಯನ್ನು ಮೈಸೂರು ಮಿನರಲ್ ಮಿಲ್ಸ್‌ನವರಿಗೆ ಆದ್ಯತೆ ಕೊಡುತ್ತೇವೆ. ಕೇಂದ್ರ ಸರ್ಕಾರದ ಏಜೆನ್ಸಿಗಳು ಇದ್ದರೆ ಅವರಿಗೆ ಆದ್ಯತೆ ಕೊಡುತ್ತೇವೆ. ಆಮೇಲೆ ಆಲ್ ಇಂಡಿಯಾ ಗ್ರಾನೈಟ್ ಯೂನಿಯನ್‌ನವರು ೨೭ ಜನರಿದ್ದರು. ಅವರಿಗೆ ಸಹ ಪ್ರೈಯಾರಿಟಿ ಕೊಡುತ್ತೇವೆ. ಇವರಿಗೆ ಲೀಜ್ ಕೊಡುವಾಗ ನಾವು ೨-೩ ಷರತ್ತುಗಳನ್ನು ಹಾಕಿಕೊಡುತ್ತೇವೆ. ಇನ್ನು ನಮ್ಮ ಸರ್ಕಾರ ಬಂದ ಮೇಲೆ ಡೈರೆಕ್ಟರ್ ಆಫೀಸ್‌ನಲ್ಲಿ ಇದ್ದ ಕೆಲವೊಂದು ಅಧಿಕಾರವನ್ನು ವಿಕೇಂದ್ರೀಕರಣ ಮಾಡಿದ್ದೇವೆ. ಅದೇನೆಂದರೆ ಯಾವ ಯಾವ ಜಿಲ್ಲೆಗಳಲ್ಲಿ ಈ ಗ್ರಾನೈಟ್ ಕಲ್ಲುಗಳ ರಾ ಮೆಟೀರಿಯಲ್ಸ್ ಸಿಗುತ್ತವೆ, ಅಲ್ಲಿಗೆ ನಮ್ಮ ಇಲಾಖೆಯ ಒಬ್ಬ ಸೀನಿಯರ್ ಜಿಯಾಲಜಿಸ್ಟನ್ನು ಹಾಕಿ ಅವರ ಜೊತೆಗೆ ರೆವಿನ್ಯೂ ಅಥಾರಿಟಿಯವರು ಸಹ ಸ್ವಲ್ಪ ಸಹಾಯ ಮಾಡುವಂತೆ ಹೇಳಿ ಅಲ್ಲಿ ಸಿಗತಕ್ಕಂಥ ರಾ ಮೆಟೀರಿಯಲ್ಸ್‌ನ್ನು ಅವರೇ ಲೀಜ್‌ಗೆ ಕೊಡಬಹುದು, ಆಮೇಲೆ ಅವರೇ ಅಲ್ಲಿ ಸೂಪರ್‌ವೈಜ್ ಮಾಡಬಹುದು. ಇನ್ನು ನಮ್ಮ ಇಲಾಖೆಯಲ್ಲಿ ಹೊಸದಾಗಿ ೧೫ ಚೆಕ್‌ಪೋಸ್ಟ್‌ಗಳನ್ನು ಮಾಡಿದ್ದೇವೆ, ಅವುಗಳೆಂದರೆ ಬೆಳಗಾಂನಲ್ಲಿ ಎರಡು ಇತ್ತು. ಅದರ ಜೊತೆಗೆ ಎರಡು ಹೆಚ್ಚು ಮಾಡಿದ್ದೇವೆ. ಬೆಂಗಳೂರಿನಲ್ಲಿ ೬ ಹೊಸ ಚೆಕ್‌ಪೋಸ್ಟ್‌ಗಳನ್ನು ಮಾಡಿದ್ದೇವೆ. ಮತ್ತೆ ಬಳ್ಳಾರಿಯಲ್ಲಿ ಒಂದು ಚೆಕ್‌ಪೋಸ್ಟ್ ಮಾಡಿದ್ದೇವೆ. ಇನ್ನು ಕೆಲವು ಕಡೆ ಚೆಕ್‌ಪೋಸ್ಟ್‌ಗಳನ್ನು ಮಾಡಿದ್ದೇವೆ. ಇನ್ನು ಕೆಲವು ಜನರಿಗೆ ನೋಟೀಸ್ ಕೊಟ್ಟಿದ್ದೇವೆ. ನಮ್ಮ ಸರ್ಕಾರ ಈ ಲಿಬರಲೈಜೇಶನ್ ಪಾಲಿಸಿ ಜಾರಿಗೆ ತಂದಿದ್ದರಿಂದ ರಾಜಧನ ನಮಗೆ ಹೆಚ್ಚು ಸಿಗುತ್ತಿದೆ.........

ಶ್ರೀ ಕರಿಯಣ್ಣ.—ಮಾನ್ಯ ಅಧ್ಯಕ್ಷರೇ ಹರಿಜನ ಮತ್ತು ಗಿರಿಜನರಿಗೆ ಲೀಜ್ ಕೊಡುವುದರಲ್ಲಿ ೧೮ ಪರ್ಸೆಂಟ್ ಮೀಸಲಾತಿ ಇಡಿ ಎಂದು ನಾನು ಹೇಳಿದ್ದೆ. ಇದರಿಂದ ಕೆಲವು ಜನ ಯುವಕರಿಗೆ ಉದ್ಯೋಗ ಸಿಗುವಂತೆ ಆಗುತ್ತದೆ.

ಶ್ರೀ ಎಂ. ಶಿವಣ್ಣ.—ಅವರು ಮುಂದೆ ಬಂದರೆ ಹರಿಜನ ಮತ್ತು ಗಿರಿಜನರಿಗೂ ಲೀಜ್ ಕೊಡುವಂತಹ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳುತ್ತೇವೆ. ನಮ್ಮಲ್ಲಿದ್ದ ಗ್ರಾನೈಟ್ ಕಲ್ಲುಗಳನ್ನು ಹಿಂದೆ ಹಾಳು ಮಾಡಿದ್ದಾರೆ. ಇದರಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೇರಿ ಈ ಲಿಬರಲೈಜೇಶನ್ ಪಾಲಿಸಿ ತಂದಿದ್ದೇವೆ. ಈ ಪಾಲಿಸಿಯನ್ನು ಜಾರಿಗೆ ತಂದ ಮೇಲೆ ದೂರುಗಳು ಏನಾದರೂ ಬಂದರೆ ಅವರು ಅಧಿಕಾರಿಗಳಾಗಿರಲಿ, ಯಾರೇ ಆಗಿರಲಿ ಆ ಬಗ್ಗೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಶೇಕಡ ೬೦ರಷ್ಟು ಕಲ್ಲುಗಳು ಫಾರೆಸ್ಟ್ ಲ್ಯಾಂಡ್‌ನಲ್ಲಿ ಇದೆ. ಅದು ನಮ್ಮ ಕಂಟ್ರೋಲ್‌ನಲ್ಲಿ ಇಲ್ಲ. ಅದು ಕೇಂದ್ರ ಸರ್ಕಾರದ ಕಂಟ್ರೋಲ್‌ನಲ್ಲಿ ಇದೆ. ಅವರು ಯಾರಿಗೂ ಲೀಜ್‌ಗೆ ಕೊಡುವಂತೆ ಇಲ್ಲ. ಇನ್ನುಳಿದ ೪೦ ಪರ್ಸೆಂಟ್ ಕಲ್ಲುಗಳು ಪಟ್ಟಾ ಲ್ಯಾಂಡ್ಸ್‌ನಲ್ಲಿ ಇದೆ. ಅವರಿಗೆ ಫ್ರೀಡಂ ಇದೆ. ಅವರು ಯಾರಿಗೆ ಬೇಕಾದರೂ ಲೀಜ್‌ಗೆ ಕೊಡಬಹುದು ಅಥವಾ ಸ್ವತಃ ಅವರೇ ಮಾಡಬಹುದು. ಅಂತಹವರು ಮುಂದೆ ಬಂದರೆ ಅನೇಕ ಹಣಕಾಸಿನ ಸಂಸ್ಥೆಗಳು ಅವರಿಗೆ ಹಣ ಸಹಾಯ ಮಾಡಲು ಮುಂದೆ ಬರುತ್ತವೆ.

ಇಂಥ ವಿಷಯಗಳ ಬಗ್ಗೆ ಬಹಳ ಕಾಲದಿಂದಲೂ ಆರೋಪಗಳು, ಆಪಾದನೆಗಳು ಬೇಕಾದಷ್ಟು ಸರ್ಕಾರಕ್ಕಿದೆ ಏನಿದ್ದರೂ ನಾವು ಇದರ ಬಗ್ಗೆ ಸುಧಾರಣೆ ಮಾಡಿ ದೇಶಕ್ಕೆ, ಕರ್ನಾಟಕ ರಾಜ್ಯಕ್ಕೆ ಏನು ಗ್ರಾನೈಟ್‌ನಿಂದ ಸ್ವಲ್ಪ ಆದಾಯ ಬರುತ್ತಾ ಇದೆ, ಅದನ್ನು ಇನ್ನೂ ಸ್ವಲ್ಪ ಹೆಚ್ಚು ಆದಾಯ ಬರುವ ಹಾಗೆ ಮಾಡುತ್ತಾ ಇದ್ದೇವೆ. ಸುಮಾರು ೨೦ ಕೋಟಿಗಳಷ್ಟು ಆದಾಯ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯಿಂದ ಬರುತ್ತಾ ಇದೆ, ಇದು ಮುಂದಿನ ವರ್ಷಗಳಲ್ಲಿ ಇನ್ನೂ ಸ್ವಲ್ಪ ಹೆಚ್ಚಿಗೆ ಬರತಕ್ಕಂಥ ಸಂದರ್ಭ ಇದೆ, ಈ ದಿಶೆಯಲ್ಲಿ ನಮ್ಮ ಎಂ. ಎಂ. ಎಲ್, ಯವರಿಗೂ ಕೂಡ ಅಷ್ಟು ಹೆಚ್ಚಿಗೆ ಕೆಲಸ ಮಾಡುವುದಕ್ಕೆ ಆಗಿಲ್ಲ. ಖಾಸಗಿಯವರು ಅಮೂಲ್ಯವಾದಂಥ ಕ್ವಾರಿಗಳನ್ನು ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಅಕ್ವೈಯರ್ ಮಾಡಿಕೊಂಡು ಬಿಟ್ಟಿದ್ದಾರೆ, ಉಳಿದಂಥ ಸ್ವಲ್ಪ ಸ್ಥಳದಲ್ಲಿ ನಮಗೆ ರಾ ಮೆಟೀರಿಯಲ್ ಸಪ್ಲೈ ಮಾಡುವುದಕ್ಕೆ ಆಗಿಲ್ಲ. ಹೀಗಾಗಿ ಈ ಫ್ಯಾಕ್ಟರಿಯನ್ನು ಸರಿಯಾಗಿ ಸೆಟ್‌ಅಪ್ ಮಾಡುವುದಕ್ಕೆ ಅವರಿಗೆ ತೊಂದರೆ ಬಂದಿತು, ಆದರೆ ಖಾಸಗಿಯವರು in the name of nationalisation they have looted the whole mines, granite quarries. ಯಾವ ಕಾಲಕ್ಕೂ ಇದನ್ನು ಹಿಂದೆಗೆದುಕೊಳ್ಳಲಾಗುವುದಿಲ್ಲ ಎಂದು ಈ ವಿಚಾರದಲ್ಲಿ ಹೇಳಬೇಕಾಗುತ್ತದೆ. ಇದು ಸರಕಾರದ ನಿಲುವು ಕೂಡ ಎಂದು ಹೇಳುತ್ತಿದ್ದೇನೆ. ಮುಂದೆ ಇದರಲ್ಲಿ ಏನಾದರೂ ತೊಂದರೆ ಬಂದರೆ, ಆ ಬಗ್ಗೆ ಸೂಕ್ತ ತಿದ್ದುಪಡಿಗಳನ್ನು ತಂದು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಆದರೆ ಗ್ರಾನೈಟ್ ಕಲ್ಲುಗಳು ಎಲ್ಲಿಗೂ ಹೋಗಬಾರದು ಎಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಅದು ನಮ್ಮ ಕೈಯಲ್ಲಿ ಇಲ್ಲದ ವಿಚಾರ ಕೂಡ ಆಗಿದೆ. ಆ ಬಗ್ಗೆ ಕೇಂದ್ರ ಸರಕಾರದ ಆದೇಶ ಇದೆ. ಕರ್ನಾಟಕ ಸರಕಾರ ಕೂಡ ಪರಿಸರದ ವಿಚಾರದಲ್ಲಿ, ಅಮೂಲ್ಯ ವಸ್ತುಗಳನ್ನು ಕಾಪಾಡುವ ವಿಚಾರದಲ್ಲಿ, ದೇವಸ್ಥಾನಗಳ ವಿಚಾರದಲ್ಲಿ ತುಂಬಾ ಜಾಗರೂಕತೆಯಿಂದ ಇರುತ್ತದೆ. ಅಲ್ಲಿ ಯಾವುದೇ ತೊಂದರೆಗಳು ಮಾಡದ ಹಾಗೆ ನಿಯಮಗಳನ್ನು ಮತ್ತು ಕಾನೂನುಗಳನ್ನು ಮಾಡಿದ್ದೇವೆ. ಆ ಬಗ್ಗೆ ಸಕಾಲಿಕ ಕ್ರಮ ನಡೆಯುತ್ತಾ ಇದೆ, ಆದುದರಿಂದ ಈ ಒಂದು ನಿರ್ಧಾರವನ್ನು ಜಾರಿಗೆ ತರುವುದಕ್ಕೆ ಪ್ರಾರಂಭವಾದ ಕೂಡಲೇ ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರು ಮತ್ತಿತರ ಮಾನ್ಯ ಸದಸ್ಯರುಗಳು ಹೇಳಿದಂಥ ಪ್ರತಿಯೊಂದು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಅವರು ಹೇಳಿದ ಹಾಗೆ ಅಲ್ಲಿ ಅವ್ಯವಹಾರಗಳು ಆಗದ ಹಾಗೆ ನೋಡಿಕೊಳ್ಳುತ್ತೇನೆ ಎಂದು ಹೇಳಬಯಸುತ್ತೇನೆ. ಇನ್ನು ಅಧಿಕಾರಿ ಮದನ್‌ಗೋಪಾಲ್‌ರ ಬಗ್ಗೆ ಹೇಳಿದ್ದಾರೆ. ಆ ಕುರಿತು ಲೋಕಾಯುಕ್ತಕ್ಕೆ ಕೆಲವು ಕೇಸ್‌ಗಳನ್ನು ಕಳುಹಿಸಿದ್ದರು. ಕನಕಪುರದ ಒಂದು ಕೇಸ್‌ನಲ್ಲಿ ಪಿಂಕ್‌ಗ್ರಾನೈಟ್ ಕೊಡಬೇಕಾಗಿತ್ತು, ಅಲ್ಲಿ ಗ್ರೇಗ್ರಾನೇಟ್ ಕೊಟ್ಟಿದ್ದಾರೆ, ಈ ವಿಚಾರದ ಬಗ್ಗೆ ಫೈಲ್‌ಗಳನ್ನು ಲೋಕಾಯುಕ್ತಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅಷ್ಟು ಹೊರತು ಸಿ.ಓ.ಡಿ. ತನಿಖೆ ಆ ಬಗ್ಗೆ ಆಗಿಲ್ಲ. ಮದನ್‌ಗೋಪಾಲ್‌ರವರು ಐಎಎಸ್ ಅಧಿಕಾರಿಗಳು. ಅವರು ತುಂಬಾ ಧಕ್ಷರು ಎಂದು ಅಭಿಪ್ರಾಯ ಇದೆ, ನಾನು ಅವರ ಬಗ್ಗೆ ಒಳ್ಳೆಯ ಅಭಿಪ್ರಾಯವುಳ್ಳವನು. ಅವರಿಗೂ ಮೈನ್ಸ್ ಓನರ್‌ಗಳಿಗೂ ಸ್ವಲ್ಪ ಮತಭೇದ ಬಂದ ಕಾರಣ ಇವರೂ ಕೂಡ ಅಲ್ಲಿಗೆ ಹೋಗಿ ಅವರ ಮೇಲೆ ಆಕ್ರಮಣ ಮಾಡಿದ್ದಾರೆ ಎಂಬ ಆರೋಪ ಕೂಡ ಇದೆ. ಆ ಕುರಿತು ಈಗ ಇಲ್ಲಿ ಚರ್ಚೆ ಬೇಡ. ಸರಕಾರದ ಕೆಲಸ ಮಾಡುವಾಗ ಇಂಥ ಆರೋಪಗಳು ಒಳ್ಳೆಯ ಅಧಿಕಾರಿಗಳಿಗೂ ಬರುತ್ತವೆ. ಅದಕ್ಕೆ ಬೇರೆ ಕಾರಣಗಳೂ ಕೂಡ ಇರಬಹುದು. ವರ್ಗಾವಣೆ ಸರಕಾರದಲ್ಲಿ ಇದ್ದೇ ಇರುತ್ತದೆ. ಅವರು ಒಳ್ಳೆಯ ಸೇವೆಯನ್ನು ಮಾಡಿಕೊಂಡು ಬಂದಿದ್ದಾರೆ ಎಂದು ನಾನು ಕೂಡ ಹೇಳಬಯಸುತ್ತೇನೆ. ಈಗ ಅವರನ್ನು ಕರೆಸಿಕೊಳ್ಳಬೇಕಾದಂಥ ಅವಶ್ಯಕತೆ ಇಲ್ಲ. ಏನು ಒಂದು ಐಟಮ್ ಇತ್ತು ಅದರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ, ಅದನ್ನು ತೆಗೆದುಕೊಳ್ಳುತ್ತಿದ್ದಾರೆ. ಹೀಗೆ ಮಿನರಲ್ಸ್ ಮತ್ತು ಗ್ರಾನೇಟ್ಸ್‌ಗಳ ಬಗ್ಗೆ ವಿಶೇಷವಾಗಿ ಪರಿಶೀಲಿಸಿದಾಗ ಸರಕಾರಕ್ಕೆ ಅದರಿಂದ ಆದಾಯ ಬರುತ್ತದೆ. ಹಾಗೆಯೇ ಕೇಂದ್ರ ಸರಕಾರದ ಇನ್ಸ್‌ಟ್ರಕ್ಷನ್ಸ್ ಕೂಡ ಇದೆ. ಈಗ ಕರಿಕಲ್ಲು ಅಥವಾ ಪಿಂಕ್‌ಕಲ್ಲು ಸಪ್ಲೈ ಆಗುತ್ತಾ ಇಲ್ಲ. ಇಂಥ ಕಲ್ಲುಗಳ ಉಪಯೋಗದ ಫ್ಯಾಶನ್ ಕಡಿಮೆಯಾದ ಮೇಲೆ ಕಲ್ಲು ಕಲ್ಲಾಗಿ ಉಳಿಯಬೇಕಾಗುತ್ತದೆ. ಈ ಬಗ್ಗೆ ಜನರದ್ದು ಏನು ಡಿಮ್ಯಾಂಡ್ ಇದೆ, ಅದು ೨.೨೨೦ ಕೋಟಿ ಎಂದು ಲೆಕ್ಕ ಹಾಕಿದರೂ ಕೂಡ ಅದರಲ್ಲಿ ಕಡಿಮೆ ಅಂದರೆ ೧ ಸಾವಿರ ಕೋಟಿಗೆ ಬರಲು ನಾವು ೨೦೦೦ ಎ.ಡಿ.ಗೆ ಹೋಗಬೇಕಾಗುತ್ತದೆ. ಅದಕ್ಕಾಗಿ ನಾವು ಯೋಚನೆ ಮಾಡಿ, ಇನ್ನೂ ಏನಾದರೂ ಸ್ವಲ್ಪ ಹೆಚ್ಚಿಗೆ ಮಾಡಬೇಕೆಂದು ಇದ್ದೇವೆ. ಆ ಬಗ್ಗೆ ನಿಮ್ಮ ಸಲಹೆಗಳೇನಾದರೂ ಇದ್ದರೆ ಹೇಳಬಹುದು ಆ ಬಗ್ಗೆ ವಿಚಾರ ಮಾಡೋಣ. ಒಟ್ಟಿನಲ್ಲಿ ಇಂಪ್ರೂ ಮಾಡುವುದಕ್ಕೆ ಸಲಹೆಗಳನ್ನು ಕೊಡಿ. ಒಟ್ಟಿನಲ್ಲಿ ಈ ನೋಟಿಫಿಕೇಶನ್‌ನ್ನು ಹಿಂದೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿಯೂ ಕೂಡ ಈ ಬಗ್ಗೆ ಡಿಸ್‌ಕಶನ್ ಆಗಿಲ್ಲ ಎಂದು ಮಾನ್ಯ ಸಿಂಧ್ಯಾ ಅವರು ಹೇಳಿದರು.

ಆದರೆ ಅದು ಆಗಿದೆ ಎಂದು ಹೇಳಬೇಕಾಗುತ್ತದೆ ಮಾನ್ಯ ಜಿಗಜಿಣಗಿಯವರು ಕೂಡ ಖಾಸಗಿಯವರಿಗೆ ಅನುಮತಿ ಕೊಡಬೇಕೆಂದು ಅಭಿಪ್ರಾಯ ಪಟ್ಟಿದ್ದರು.

ಶ್ರೀ ಎಂ. ಪಿ. ವೆಂಕಟೇಶ್.—ಈ ಬಗ್ಗೆ ಕೇಂದ್ರ ಸರಕಾರದ ಸೂಚನಾ ಪತ್ರ ಎಲ್ಲಿದೆ ? ನೋಟಿಫಿಕೇಶನ್ ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಏತಕ್ಕಾಗಿ ಆಗುವುದಿಲ್ಲ?

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರೇ ಮಾನ್ಯ ಸಚಿವರ ಉತ್ತರ ಮುಗಿದ ಮೇಲೆ ನನಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶ ಕೊಡಬೇಕು.

ಉಪಾಧ್ಯಕ್ಷರು.—ಕೊಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ಈಗ ಇಲ್ಲಿ ಎಲ್ಲಾ ರೆಲವೆಂಟ್ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ.

ಶ್ರೀ ಬಿ. ಶಿವಣ್ಣ.—ಈ ಬಗ್ಗೆ ಇರುವ ಒಂದು ಪತ್ರವನ್ನು ಸದನದ ಗಮನಕ್ಕೆ ತರುತ್ತೇನೆ. ಇದು ಅರುಣ್ ನೆಹರೂರವರು ಬರೆದದ್ದು.

ಶ್ರೀ ಎಂ. ಪಿ. ವೆಂಕಟೇಶ್.—ಅವರು ಅಮೇಂಡ್‌ಮೆಂಟ್ ಮಾಡಿ ಎಂದು ಹೇಳಿದ್ದಾರೆಯೇ?

ಶ್ರೀ ಬಿ. ಶಿವಣ್ಣ,—ಅವರ ಪತ್ರವನ್ನು ಓದುತ್ತೇನೆ. ೧೧ನೇ ಮೇ ತಿಂಗಳ ೧೯೯೦ರಂದು ಬರೆದ ಪತ್ರ ಹೀಗಿದೆ.

Dear Shri Patil,

This is regarding the export of cut and polished granite. The Govt, of India have granted licence to twenty eight 100% export units in Karnataka for granite cutting and polishing. Though these licences have been sanctioned since 1985, only eight of them are operational. The value added export of cut and polished granites in Karnataka is just around Rs. 20 crores whereas he potential is at least 8 to 10 times more, We have recently undertaken a review at Bangalore jointly with the State Covt, Officers and the units concerned.

The major reason for the delay in setting up of these units and the reduced level of operations of the units already started, is the non-vailability of the basic material viz., rough granite blocks. The Leasing of mines for granite quarrying in Karnataka has virtually come to a standstill during the last two years because a new leasing policy is still under consideration of the Govt. of Karnataka. I under stand that the revised policy has almost beed finalised and is pending approval of the Cabinet.

In the interest of promoting value added granite exports from Karnataka and to ensure that investments made in the twently eight 100 EOUs are fully utilised. I shall be grateful if you can kindly expedite the examination of this matter and get the elearance of the Cabinet so that the new licencing policy for granite is announced at least by end of May, 1990. ಇದು ಅವರ ಪತ್ರ, ಮೇ ಕೊನೆಯಹೊತ್ತಿಗೆ ಈ ಪಾಲಿಸಿಯನ್ನು ಜಾರಿಗೆ ತರಬೇಕೆಂದು ಹೇಳಿದ್ದರು.

ಶ್ರೀ ವಾಟಾಳ್ ನಾಗರಾಜ್.—ಅರುಣ್ ನೆಹರೂರವರಿಗೆ ಏನು ಅರ್ಜೆಂಟ್ ಇತ್ತು? ಈ ೨೮ ಜನರು ಅಲ್ಲಿಗೆ ಹೋಗಿದ್ದರೆಂದು ಕಾಣುತ್ತದೆ,

ಶ್ರೀ ಎಂ. ಪಿ. ವೆಂಕಟೇಶ್.—ಈ ತರಹದ ಕಾನೂನು ಮಾಡಿಕೊಳ್ಳಿ ಎಂದು ಅವರು ಹೇಳಿದ್ದಾರೆಯೇ? ಅದರ ಪ್ರಕಾರ ಲೂಟಿ ಮಾಡಿ ಎಂದು ಅವರು ಹೇಳಿದ್ದಾರೆಯೇ?

ಶ್ರೀ ಬಿ. ಶಿವಣ್ಣ.—ಇನ್ನೊಂದು ಪತ್ರ ಈ ಕುರಿತು ನಮಗೆ ಬಂದಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ತಮಗೆ ಮತ್ತಷ್ಟು ಕನ್‌ವಿನ್ಸ್ ಮಾಡಬೇಕು. ಇಲ್ಲದಿದ್ದರೆ ಕರ್ನಾಟಕ ಸರಕಾರದ ಮೇಲೆ, ಮಂತ್ರಿಗಳ ಮೇಲೆ ಹೀಗೆ ಎಲ್ಲರ ಮೇಲೆ ಆಪಾದನೆ ಮಾಡಿದರೆ ಕಷ್ಟವಾಗುತ್ತದೆ. ಇದು ಕೈಗಾರಿಕಾ ಮಂತ್ರಿಗಳಾದ ಅಜಿತ್‌ಸಿಂಗ್‌ರವರು ಮೇ ೧೫ಕ್ಕೆ ಬರೆದ ಪತ್ರ.

INDUSTRY MINISTER,
INDIA,

UDYOG BHAVAN, NEW DELHI-110011.
May 15, 1990.

"Dear Sri Patil,

Please refer to my predecessor's D.O. of even number dated 6th June, 1989 to the then Governor of Karnataka regarding grant of long term granite quarrying leases and renewal of existing quarry leases to private entrepreneurs in Karnataka (Copy enclosed). In his reply dated 11th July, 1989 Shri P. Venkatasubbaiah had stated that the proposal for a change of policy were under active consideration of the State Government and that a decision would be taken shortly (copy enclosed).

There is a good potential for export of granite products and earning of foreign exchange for the country. I shall, therefore, be grateful, if you could kindly look into the matter with a view to liberalise the policy to enable long term grant and renewal of quarrying leases to facilitate setting up of 100% Export Oriented Units.

With regards,

Yours sincerely,
Sd/-
(AJIT SINGH.)

Shri Veerendra Patil,
Chief Minister,
Govt. of Karnataka, Bangalore."

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅವರು ಹೇಳಿದ್ದನ್ನು ಒಪ್ಪಿಕೊಳ್ಳಬೇಕೆಂದು ಏನು ಇದೆ ? Whatever they say, we need not agree for them. That means, we can say that the Granite Lobby has worked in Delhi. ಹಾಗಾದರೆ ಗ್ರಾನೇಟ್ ಲಾಬಿ ಅಲ್ಲಿ ಕೂಡ ಕೆಲಸ ಮಾಡಿದೆ ಎಂದು ನಾವು ಹೇಳಬೇಕಾಗುತ್ತದೆ. You please constitute a House Committee to probe in the matter in detail.

(ಗೊಂದಲ)

೧೦.೩೦ ಪಿ.ಎಂ.

ಶ್ರೀ ವಾಟಾಳ್ ನಾಗರಾಜ್.—ಅವರು ಹೇಳಿದನ್ನು ಒಪ್ಪಿಕೊಳ್ಳುವುದಕ್ಕೆ ನೀವ್ಯಾರು ಏನಿದೆ ನಿಮ್ಮ ಉದ್ದೇಶ ? ಅರುಣ್ ನೆಹರೂ ಯಾರು ?

ಶ್ರೀ ಎಂ. ಪಿ. ವೆಂಕಟೇಶ್.—ಕೇಂದ್ರದವರು ತಮಗೆ ಏನಾದರೂ ಇಂತಹ ಫ್ಯಾಕ್ಟರಿಯವರಿಗೇ ಕೊಡಿ ಈ ರೀತಿಯೇ ಮಾಡಿ ಎಂದು ಪತ್ರ ಬರೆದಿದ್ದಾರೆಯೇ ?

ಉಪಾಧ್ಯಕ್ಷರು.—ಆ ಮೇಲೆ ತಾವು ಮಾತನಾಡಿ. ಮಂತ್ರಿಗಳು ಮುಗಿಸಲಿ ನಂತರ ತಾವುಗಳು ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಶ್ರೀ ಆರ್. ದಯಾನಂದರಾವ್.—ಇನ್ನೊಂದು ಲೆಟರ್ ಇದೆಯಂತೆ, ಅದನ್ನು ಓದುತ್ತಾರೆ. ಅದನ್ನು ಅವರು ಕೇಳಲಿ.

ಉಪಾಧ್ಯಕ್ಷರು.—ಓದಲಿ.

ಶ್ರೀ ಬಿ. ಶಿವಣ್ಣ.—ನಮ್ಮ ಮಾಜಿ ರಾಜ್ಯಪಾಲರಾದ ವೆಂಕಟಸುಬ್ಬಯ್ಯನವರು ವೆಂಗಲರಾವ್ ಅವರಿಗೆ ಬರೆದಿರುವ ಪತ್ರವನ್ನು ಈಗ ಓದುತ್ತೇನೆ.—

"Raj Bhavan, Bangalore, Dt: July 11, 1989.

"Dear Shri Vengalrao,

"Please refer to your letter No. 333, AGS CGF 1141 dt: 16-6-89 regarding grant of granite quarry leases and renewal of existing quarry leases to private entrepreneurs. In this connection a meeting of the office bearers of All India quarry Owners Association was convened at the Government level recently and their suggestions have been obtained. The proposals for a change of policy are under active consideration of Government. I hope to take a decision shortly."

ಶ್ರೀ ಸಿ. ಬೈರೇಗೌಡ.—ಎಲ್ಲಾ ಕಡೆ ಏನೇನು ನಡೆಯಬೇಕು, ಅದೆಲ್ಲಾ ನಡೆದಿದೆ. ಅದರ ಬಗ್ಗೆ ಮತ್ತೆ ಚರ್ಚೆ ಏತಕ್ಕೆ? ಎಲ್ಲಾ ಕಡೆ ನಡೆದಿದೆ. ಮೊದಲು ಮೂರು ಕೋಟಿ ಇತ್ತು, ಈಗ ಐದು ಕೋಟಿ ರೂಪಾಯಿ ಆಯಿತು ಎಂದು ಜನ ಮಾತನಾಡುತ್ತಾರೆ.

(ಗೊಂದಲ)

SRI B. SHIVANNA.—Documentary evidence is the best evidence. ಎಂದು ಹೇಳುತ್ತಾರೆ. ಆದ್ದರಿಂದ...

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—೧೫ ದಿವಸದಲ್ಲಿ ಕಾರ್ಯಾಚರಣೆ, ೧೫ ದಿವಸದಲ್ಲಿ ಇಂಪ್ಲಿಮೆಂಟ್.

ಶ್ರೀ ಬಿ. ಶಿವಣ್ಣ.—ಮಾನ್ಯ ವೆಂಕಟೇಶ್ ಅವರೇ, ತಾವು ಯಾವುದಾದರೂ ಹೇಳಿದರೆ ಅದನ್ನು ಸ್ವಲ್ಪ ಅರ್ಥಗರ್ಭಿತವಾಗಿ ಹೇಳಿ.

SRI P. G. R. SINDHIA.—Even specific charges you make on us. We are prepared. ನಾವು ಹೇಳುತ್ತಿರುವುದೇನೆಂದರೆ ಹೌಸ್ ಕಮಿಟಿಯನ್ನು ಮಾಡಿ. ನಿಮಗೆ ಬೇಕಾಗಿರತಕ್ಕಂಥ ಮಿನಿಸ್ಟರ್ ಬರೆದಿರತಕ್ಕಂಥ ಪ್ಯಾರಾವನ್ನು ಇಲ್ಲಿ ಓದಿದರೆ ನಮ್ಮ ಬಗ್ಗೆ ಪಬ್ಲಿಕ್ ಒಪಿನಿಯನ್ ಏನು ಬರಬೇಕು ? You Constitute a House Committee. We are asking for that.

ಉಪಾಧ್ಯಕ್ಷರು.—ಅವರು ಏನು ಹೇಳುವುದು ಇದೆಯೋ ಅದನ್ನು ಹೇಳಲಿ.

SRI AZEEZ SAIT.—He is not making charges. He is trying to put facts before you.

SRI P. G. R. SINDHIA.—One sided facts and not all the facts are put. If a thorough discussion has to take place and if all of you have to be above suspicion, Constitute a House Committee. Let us go into all records.

ಶ್ರೀ ಅಜೀಜ್ ಸೇಠ್.—ಇಷ್ಟೊಂದು ಆವೇಶ ಏತಕ್ಕೆ ಮಾಡುತ್ತೀರಿ ? ಅವರು ಉತ್ತರ ಹೇಳುವುದಕ್ಕೆ ಅವಕಾಶವನ್ನು ಕೊಡಿ.

SRI B. SHIVANNA,—The Chief Minister has taken a meeting.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಏನು ಫೈಲ್‌ನಲ್ಲಿದೆ ಎಂದು ಹೇಳಿ.

SRI B. SHIVANNA.—ಹೇಳುತ್ತೇನೆ. Formulation of policy on the exploitation of ornamental granite deposits in Karnataka, File No. CI 304 MRC 87/88 Minister–Sri Jigajinagi.

"Various repesentations have been received from the quarry lessees who had obtained leases for quarrying black granite, pink granite and multi-colour granite to the effect that if their leases are not renewed. they will be put to irreperable losses as they have invested huge amounts at the time the leases were granted. They have further represented that if the renewals are not granted, it would result in great injustice and cause hardship to them.

"After examining the matter carefully, once again, it is seen there is considerable merit in the representations made by the lessees and therefore a suitable amendment to Rule 3A of Karnataka Mineral Concession Rules may be issued to the/effect that Rule 3A has no application to renewal of leases. It is also relevant to note that by granting renewals the State will earn valuable revenue and foreign exchange, However, the Department at last examined and opined that private persons may be granted leases in patta lands and only MML alone should be granted leases on Government lands. I am therefore of the opinion that Rule 3A may be suitably amended to permit renewal of leases that were granted earlier as many leases have expired, It is also necessary to incorporate suitable amendments to renew these leases giving the benefit of the present proposal. It is further made clear that no fresh leases can be granted to private persons in view of Rule 3A. This may please be put up in the next Cabinet meeting."

SRI P. G. R. SINDHYA.—This is his opinion.

ಶ್ರೀ ಬಿ. ಶಿವಣ್ಣ.—ಹೌದು

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸಬ್ಸಿಕ್ವೆಂಟ್ ಕ್ಯಾಬಿನೆಟ್‌ಗೆ ಅದು ಬಂದಿದೆಯಾ ? ಕ್ಯಾಬಿನೆಟ್ ನೋಟ್ ಏನು ? ಕ್ಯಾಬಿನೆಟ್‌ನಲ್ಲಿ ಏನು ತೀರ್ಮಾನ ಆಯಿತು ಎಂದು ತಿಳಿಸಿ. This is his personal opinion. ಈಗ ನಾನು ಇಲ್ಲಿ ಕುಳಿತುಕೊಂಡು ಫಾರೀನ್ ಎಕ್ಸ್‌ಛೇಂಜ್ ಜಾಸ್ತಿಯಾಗುತ್ತದೆ ಇದನ್ನು ಕಳಿಸಿಬಿಡಿ ಎಂದು ಹೇಳಿಬಿಟ್ಟರೆ does it become the opinion of the Government

ಶ್ರೀ ಬಿ. ಶಿವಣ್ಣ.—ನಾನು ಏನು ಹೇಳಬೇಕಾಗಿತ್ತು, ಅದನ್ನು ಎಲ್ಲಾ ಹೇಳಿವೆ. ಈ ಎಲ್ಲಾ ಕಾರಣಗಳಿಂದ ನಮ್ಮ ಸರ್ಕಾರ...

(ಗೊಂದಲ)

ಶ್ರೀ ಬಿ. ಶಿವಣ್ಣ.—ಇದು ತರಾತುರಿಯಿಂದ ಇಲ್ಲವೇ ಆತುರದಿಂದ ಮಾಡಿದ ಕೆಲಸ ಅಲ್ಲ. ಅಂಡರ್ ಹ್ಯಾಂಡ್ ಡೀಲಿಂಗ್ಸ್ ಅಂತೂ ಅಲ್ಲ. ನಮ್ಮ ಡಿಪಾರ್ಟ್‌ಮೆಂಟ್‌ನವರಾಗಲೀ ಮಂತ್ರಿಗಳಿಗಾಗಲೀ ಯಾವುದೇ ಆಕ್ಷೇಪಣೆಗೆ ಗುರಿ ಆಗಿಲ್ಲ. ಆದ್ದರಿಂದ ನಾನು ಮಂಡಿಸಿದ ಪ್ರೊಪೋಸಲ್‌ಗಳನ್ನು ತಾವು ಒಪ್ಪಿಕೊಳ್ಳಬೇಕೆಂದು ಕೋರುತ್ತೇನೆ. ಹಾಗೂ ಇನ್ನೇನಾದರು ಇದ್ದರೆ ಮಾನ್ಯ ಸದಸ್ಯರು ಕೇಳಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಸಮಾಜ ಕಲ್ಯಾಣ ಇಲಾಖೆಯಿಂದ ಒಂದು ಸಣ್ಣ ಕ್ಲಾರಿಫಿಕೇಷನ್ಸ್ ಬೇಕು. ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಬಂದಿದ್ದಾಗ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಸಂಗನಕಲ್‌ನಲ್ಲಿ ಆಗಿರತಕ್ಕ ಹಗರಣಕ್ಕೆ ಸುಮಾರು ನಾಲ್ಕು ಲಕ್ಷ ರೂಪಾಯಿಗಳನ್ನು ಕೊಡತಕ್ಕ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಇದಕ್ಕೆ ಏನಾದರೂ ಸಹಾಯ ಬಂದಿದೆಯೇ ? ಈ ಬಗ್ಗೆ ಏನಾದರೂ ಪತ್ರ ವ್ಯವಹಾರ ಆಗಿದೆಯೇ? ಎಂಬ ವಿಷಯವನ್ನು ತಿಳಿಸಬೇಕು. ಇದರ ಜೊತೆಗೆ ಬೊಂಬಾಯಿನಿಂದ ೧೦೦ ಅಲ್ಲ ಸಾವಿರಾರು ಹೆಣ್ಣು ಮಕ್ಕಳು ವೇಶ್ಯಾವಾಟಿಕೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಬಂದರು ಎಂದು ಪತ್ರಿಕೆಗಳಲ್ಲಿ ಸುದ್ದಿ ನೋಡಿದ್ದೇನೆ. ಹಾಗಿದ್ದರೆ ಅದರಲ್ಲಿ ಎಷ್ಟು ಜನ ಕರ್ನಾಟಕದವರು ಇದ್ದಾರೆ. ಅವರಿಗೆ ಸರ್ಕಾರ ಪುನರ್ವಸತಿ ಕಾರ್ಯ ಏನು ಕೈಕೊಂಡಿದೆ. ಇದರ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಲಿಲ್ಲ. ದಯವಿಟ್ಟು ಈ ಎರಡು ವಿಚಾರಗಳ ಬಗ್ಗೆ ಹೇಳಬೇಕು. ಆ ಮೇಲೆ ಈ ಪ್ರಸ್ತುತ ವಿಷಯಕ್ಕೆ ಬರುತ್ತೇನೆ.

ಶ್ರೀ ಬಿ. ಶಿವಣ್ಣ.—ತಮಗೆ ಗೊತ್ತು, ಚಂದ್ರೇಗೌಡರೂ ಆ ಫಂಕ್ಷನ್‌ನಲ್ಲಿ ಇದ್ದರು ಪ್ರಧಾನ ಮಂತ್ರಿಗಳು ಹೇಳಿದ್ದು ನಿಜ. ನಾಲ್ಕು ಲಕ್ಷ ರೂಪಾಯಿ ಕೊಡುತ್ತೇನೆ ಎಂದು ಪಾರ್ಲಿಮೆಂಟ್‌ನಲ್ಲಿ ಹೇಳಿದ್ದಾರೆ, ಹಾಗೆಯೇ ಹೊರಗಡೆ ಕೂಡ ಹೇಳಿದ್ದಾರೆ. ನಮಗೆ ಇನ್ನೂ ಬಂದಿಲ್ಲ. ಬರಬಹುದು, ನಾವು ಬೇಕಾದರೆ ಡಿಮ್ಯಾಂಡ್ ಮಾಡಿ ಲೆಟರ್ ಬರೆಯುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಇಲ್ಲಿಯವರೆಗೆ ನೀವು ಪತ್ರ ಬರೆದಿಲ್ಲ. ಬೇಕಾದರೆ ಅಲ್ಲಿ. ಬರೆಯಬೇಕು.

ಶ್ರೀ ಬಿ. ಶಿವಣ್ಣ.—ಆಯಿತು. ಪತ್ರ ಬರೆಯುತ್ತೇವೆ. We will take care of it. ಮಾನ್ಯ ಚಂದ್ರೇಗೌಡರು ಪ್ರಸ್ತಾಪ ಮಾಡಿದ ಎರಡನೇ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಇಲಾಖೆಯವರು ಪೋಲೀಸ್ ಕಮೀಷನರ್ ಹತ್ತಿರ ಮಾತನಾಡಿದ್ದಾರೆ. ಕರ್ನಾಟಕದವರು ಯಾರೂ ಬಂದಿಲ್ಲ ಎಂದು ಹೇಳಲಾಗಿದೆ. ಮದ್ರಾಸಿನಿಂದ ಯಾರೋ ವಾಲಂಟರಿ ಆರ್ಗನೈಸೇಷನ್ ಅವರು ಅಲ್ಲಿಂದಲೇ ಕೆಲವು ಮಂದಿಯನ್ನು ಕಳಿಸಿಬಿಟ್ಟಿದ್ದಾರೆ ಎಂದು ಹೇಳಿದರು. ಮದ್ರಾಸಿಗೆ ನಮ್ಮ ಆಫೀಸರ್ ಹೋಗಿದ್ದರು. ಆದರೆ ಕರ್ನಾಟಕದ ಹೆಣ್ಣು ಮಕ್ಕಳು ಯಾರೂ ಇರಲಿಲ್ಲ. ವಾಲಂಟರಿ ಆರ್ಗನೈಸೇಷನ್ ಅವರು ಸಹ ಕರ್ನಾಟಕದ ಹೆಣ್ಣು ಮಕ್ಕಳು ಬಂದಿದ್ದಾರೆಂದು ಹೇಳಲಿಲ್ಲ. ಅವರ ಪುನರ್ವಸತಿ ಬಗ್ಗೆ ತಮಿಳುನಾಡು ಸರ್ಕಾರದವರು ಯಾವ ರೀತಿ ಮಾಡಿದ್ದಾರೆ. ಅದೇ ಪ್ರಕಾರ ನಾವೂ ಸಹ ವ್ಯವಸ್ಥೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಅಂತಹ ವಾಲಂಟರಿ ಆರ್ಗನೈಸೇಷನ್ ಬಗ್ಗೆ ತಮಗೆ ಏನಾದರೂ ಗೊತ್ತಿದ್ದರೆ ಹೇಳಿ. ಅಂತಹವರಿಗೆ ಸರ್ಕಾರದಿಂದ ಸಹಾಯ ಮಾಡಿಸುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನನಗೆ ಹೆಚ್ಚಿಗೆ ತಿಳಿಯುವುದಿಲ್ಲ, ನೀವೇ ಅದನ್ನು ಸರಿಯಾಗಿ ತಿಳಿದುಕೊಳ್ಳಿ. ಮುಖ್ಯವಾಗಿ ೧೯೭೫ನೇ ಇಸವಿಯಲ್ಲಿ ಇದನ್ನು ಏನು ರಾಷ್ಟ್ರೀಕರಣ ಮಾಡಿದೆವು, ಆ ರಾಷ್ಟ್ರೀಕರಣ ಮಾಡಿದ ಕಾಲಕ್ಕೆ ನಾನು ಒಬ್ಬ ರಾಜ್ಯದ ಮಂತ್ರಿಮಂಡಲದ ಸದಸ್ಯ ಶ್ರೀಮಾನ್ ದೇವರಾಜ ಅರಸ್‌ರವರ ಮಂತ್ರಿಮಂಡಲದಲ್ಲಿ ನಾನು ಮಂತ್ರಿಯಾಗಿ ಕೆಲಸ ಮಾಡುತ್ತಿದ್ದ ಕಾಲದಲ್ಲಿ ಈ ಗ್ರಾನೈಟನ್ನು ರಾಷ್ಟ್ರೀಕರಣ ಮಾಡಿದೆವು. ರಾಷ್ಟ್ರೀಕರಣ ಮಾಡುವ ಕಾಲಕ್ಕೆ ಇದ್ದಂಥ ಸ್ಥಿತಿ ನಿಮಗೆ ತಿಳಿದಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಹಾಗೇನಾದರೂ ತಿಳಿದಿದ್ದರೆ ಬಹುಶಃ ೧೦ ವರ್ಷಗಳಲ್ಲಿ ಇದು ಬದಲಾವಣೆಯಾಗಿದೆ ಎಂದು ನಿಮ್ಮ ಮನಸ್ಸಿಗೆ ಅನಿಸಿದ್ದರೆ ಅದಕ್ಕೆ ಸಕಾರಣಗಳಿಲ್ಲ. ಇಲ್ಲಿ ಒಂದು ವ್ಯವಸ್ಥೆ ಇಲ್ಲ. ಯಾರು ಬೇಕಾದರೂ ಬೇಕಾದಷ್ಟು ತೆಗೆಯಬಹುದು, ಬೇಕಾದಷ್ಟು ಕಳಿಸಬಹುದು. ಅದಕ್ಕಾಗಿಯೇ ಒಂದು ವ್ಯವಸ್ಥೆ ಇರಬೇಕು ಎಂದು ವಿಶೇಷವಾಗಿ ಬ್ಲಾಕ್ ಗ್ರಾನೈಟನ್ನು ರಾಜ್ಯಸರ್ಕಾರಕ್ಕೆ ಸೀಮಿತವಾದಂಥ ಸಂಸ್ಥೆಯ ಮೂಲಕ ಅಂದರೆ ತಾವು ಏನು ಕೇಂದ್ರದ ಮಂತ್ರಿಗಳು

ಬರೆದ ಕಾಗದ ಓದಿದ್ದೀರಿ ; ಆದರೆ ನಮ್ಮ ರಾಜ್ಯಸರ್ಕಾರದ ಸಂಸ್ಥೆ ಆದಂಥ ಮೈಸೂರು ಮಿನರಲ್ಸ್ ಲಿಮಿಟೆಡ್‌ನವರು ಕಳಿಸಿದರೆ ಫಾರಿನ್ ಎಕ್ಸ್‌ಚೇಂಜ್ ಬರುವುದಿಲ್ಲವೇ. ಅವರು ೨ ಪತ್ರಗಳಲ್ಲಿ ಸಾಧ್ಯವಾದಷ್ಟು ಬೇಗ ನಿಮ್ಮ ಪಾಲಿಸಿ ನಿರ್ಧಾರಮಾಡಿ ಎಂದು ಹೇಳಿದ್ದಾರೆಯೇ ಹೊರತು ನೀವು ಪ್ರೈವೇಟೀಸೇಷನ್ ಮಾಡಿ ಡೀನ್ಯಾಷನಲೈಸೇಷನ್ ಮಾಡಿ ಎಂದು ಕಾಗದದಲ್ಲಿ ಎಲ್ಲೂ ಬರೆದಿಲ್ಲ. ತಾವು ದಯಮಾಡಿ ಮತ್ತೊಮ್ಮೆ ಕಾಗದ ಓದಿ. ನಿಮ್ಮ ಅನುಕೂಲಕ್ಕೆ ಬೇಕಾದ ಹಾಗೆ ಪತ್ರ ಓದುವುದಕ್ಕೆ ಆಗುವುದಿಲ್ಲ. ನಿಮ್ಮ ಸರ್ಕಾರದ ಪಾಲಿಸಿ ಏನು ತಿಳಿಸಿ ಎಂದು ಹೇಳಿದ್ದಾರೆ ಟೋಟಲ್ ನ್ಯಾಷನಲೈಸೇಷನ್ ಮಾಡಿದ್ದೇವೆಂದು ನೀವು ಬರೆದಿದ್ದರೆ ಇದು ಆಗುತ್ತಾ ಇರಲಿಲ್ಲ. ಎರಡನೆಯೆಂದು, ಇವತ್ತು ತಾವು ಒಂದು ದೃಷ್ಟಿಯಿಂದ ಹೈಕೋರ್ಟಿನ ಮೇಲೆ ಅಪಾದನೆ ಮಾಡಿದ್ದೀರಿ. ೧೭೭ ಕೇಸುಗಳಲ್ಲಿ ಹೈಕೋರ್ಟ್‌ನವರು ಸ್ಟೇ ಕೊಟ್ಟಿದ್ದಾರೆ, ಕೋರ್ಟ್ ಇಂಟರ್‌ಫಿಯರಾಗಿದೆ ಎನ್ನುವ ಪದವನ್ನು ಬಳಸಿದ್ದೀರಿ ಅದು ಸರಿಯೋ ತಪ್ಪೋ ಎಂಬುದಕ್ಕೆ ನಾನು ವಿಶೇಷವಾಗಿ ಹೋಗುವುದಿಲ್ಲ ಕೋರ್ಟ್ ಇಂಟರ್‌ಫಿಯರ್ ಮಾಡತಕ್ಕಂಥಾದ್ದು ಸರಿಯೋ ತಪ್ಪೋ ನನಗೂ ಗೊತ್ತಿಲ್ಲ. ಆದರೆ ಸ್ಟೇ ಕೊಟ್ಟಿದ್ದಾರೆಂದರೆ, ಈ ಸ್ಟೇಯನ್ನು ವೆಕೇಟ್ ಮಾಡುವುದಕ್ಕೆ ಏನು ಪ್ರಯತ್ನ ನಡೆಯಿತು? ಏಕೆ ಪ್ರಯತ್ನ ನಡೆಯಲಿಲ್ಲ? ಇಷ್ಟೆಲ್ಲಾ ಅನುಕೂಲವಾಗಿದ್ದು, ಯಾವುದೇ ಸರ್ಕಾರವಾಗಲಿ, ಹಿಂದಿನದು ಇರಲಿ, ಮುಂದೆ ಬರುವುದು ಇರಲಿ, ಅಥವಾ ಇದಕ್ಕಿಂತ ಹಿಂದಿನವರು ಇದ್ದರೂ, ಸ್ಟೇ ಕೊಟ್ಟಿದ್ದನ್ನೇ ಒಂದು ಅಸ್ತ್ರವಾಗಿ ಬಳಸಿಕೊಂಡು ಲೂಟಿಗೆ ಇದು ಒಂದು ಪ್ರೇರಣೆಯಾಯಿತೇನೋ...

ಶ್ರೀ ಎಂ. ಪಿ. ವೆಂಕಟೇಶ್.—ಕೋರ್ಟ್‌ನವರು ಲೂಟಿ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ, ಈ ಸರ್ಕಾರ ಏನು ಅಪೀಲ್ ಹಾಕಿಕೊಂಡರೂ ಏನೂ ಪರಿಗಣನೆಗೆ ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಮಂತ್ರಿಗಳು ಹೇಳಿದ್ದಾರೆ, ಅದು ಕಡತದಲ್ಲಿದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಆ ಕಾರಣ ನಾನು ತಮ್ಮಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿರುವುದು ಏನೆಂದರೆ ೧೯೭೭ರಲ್ಲಿ ರಾಷ್ಟ್ರೀಕರಣ ಮಾಡಿದಾಗ ನಾನೂ ಕೂಡ ರಾಜ್ಯದ ಒಬ್ಬ ಕ್ಯಾಬಿನೆಟ್ ದರ್ಜೆಯ ಸಚಿವನಾಗಿ ಅದಕ್ಕೆ ಪಾಲುದಾರನಾದ ಕಾರಣ ಈ ಪ್ರಶ್ನೆ ಕೇಳುತ್ತಾ ಇದ್ದೇನೆ. ೧೯೭೭ರಲ್ಲಿ ನಾವು ರಾಷ್ಟ್ರೀಕರಣ ಮಾಡಿದಂಥ ಈ ಬ್ಲಾಕ್ ಗ್ರಾನೈಟ್ ೧೯೮೯ರಷ್ಟು ಹೊತ್ತಿಗೆ ಡಿನ್ಯಾಷನಲೈಸ್ ಮಾಡುವಂಥ ಸ್ಥಿತಿಗೆ ಬಂದರೆ, ನಿಮ್ಮ ಒಟ್ಟಾರೆ ಚಿಂತನೆ ಇದೆಯೆಲ್ಲ, ಬಸ್ ರಾಷ್ಟ್ರೀಕರಣ ಡೀನ್ಯಾಷನಲೈಸ್ ಮಾಡಬೇಕು. ಮತ್ತೊಂದು ಮಾಡಬೇಕು ಎಂದು ಏನು ಹೊರಟಿದ್ದೀರಿ ಅದಕ್ಕೆ ಒಂದೊಂದಾಗಿ ಇದು ಮೊದಲನೆ ಹೆಜ್ಜೆ ಎಂದು ನನಗೆ ಕಾಣುತ್ತದೆ. ಆದುದರಿಂದ ಇಲ್ಲಿ ಡೀನ್ಯಾಷನಲೈಸ್ ಮಾಡುವುದಕ್ಕೆ ಸಕಾರಣಗಳಿಲ್ಲ. ಕೋರ್ಟಿನಲ್ಲಿ ಸ್ಟೇ ಕೊಟ್ಟರು ಎನ್ನುವ ಕಾರಣ ತೆಗೆದುಕೊಂಡು ನೀವು ಡೀನ್ಯಾಷನಲೈಸ್ ಮಾಡುವುದಾದರೆ, ಇನ್ನೂ ಅನೇಕ ವಿಚಾರಗಳನ್ನು ನೀವು ಮಾಡಬೇಕಾಗುತ್ತದೆ. ಆದುದರಿಂದ ಒಟ್ಟು ಚಿಂತನೆ ನಿಮ್ಮ ಪಕ್ಷದ್ದು ಏನಿತ್ತು ಮೂಲತಃ ಏನು ಇತ್ತು. ಬೇಸಿಕ್ ಥಿಂಕಿಂಗ್ ಆಫ್ ಇದಿ ಕಾಂಗ್ರೆಸ್‌ಪಾರ್ಟಿ ಏನಿತ್ತು, ಅದಕ್ಕೆ ತದ್ವಿರುದ್ಧವಾದಂಥ ಕೆಲಸ ನೀವು ಮಾಡಿದ್ದೀರಿ. ಆದ್ದರಿಂದ ಈ ಒಂದೆರಡು ವಿಚಾರಗಳ ಬಗ್ಗೆ ವಿವರಣೆಯನ್ನು ತಾವು ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೆ, ೧೯೬೦ರಲ್ಲಿ ಈ ಬ್ಲಾಕ್ ಗ್ರಾನೈಟನ್ನು ನ್ಯಾಷನಲೈಸ್ ಮಾಡಿದರು. ೧೯೬೧-೬೨ರಲ್ಲಿ ಪಿಂಕ್ ಗ್ರಾನೈಟ್ ಗ್ರೇ ಗ್ರಾನೈಟನ್ನೂ ಕೂಡ ನ್ಯಾಷನಲೈಸ್ ಮಾಡಿದರು. ಮಾಡಿದ ಕೂಡಲೇ ೧೩೩-೧೩೮ ಕೇಸಸ್ ಕೋರ್ಟಿಗೆ ಹೋದವು. ಬೇರೆ ಪ್ರೈವೇಟ್ ಲ್ಯಾಂಡ್‌ನಲ್ಲಿರುವವರು ಹೋದರು. ಕಂಪ್ಲೀಟ್ ಸ್ಟೇ ಬಂದಮೇಲೆ ಸರ್ಕಾರಕ್ಕೆ ಅವರ ಮೇಲೆ ಹಿಡಿತ ಇಲ್ಲದ ಹಾಗೆ ಆಯಿತು. ಹೀಗಾಗಿ ಅವರು ಮನಸ್ಸು ಬಂದಹಾಗೆ ಗ್ರಾನೈಟ್ಸನ್ನು ಕ್ವಾರಿಗಳಿಂದ ತೆಗೆದು ಲೂಟ್ ಮಾಡಿದರು, ಏಕೆಂದರೆ ನಾವು ಏನೇ ಕಂಪ್ಲೈಟ್ ಮಾಡಲಿ ಅಥವಾ ಏನಾದರೂ ನಾವು ಅವರ ವಿರುದ್ಧ ಹೋಗಲಿ, ಇಮ್ಮಿಡಿಯೇಟಾಗಿ ಕೋರ್ಟ್ ಸ್ಟೇ ಆರ್ಡರ್ ಕೊಟ್ಟಿದೆ. ಅಷ್ಟೇ ಅಲ್ಲ, ಗವರ್ನಮೆಂಟ್‌ಗೆ ಡೈರೆಕ್ಷನ್ ಕೂಡ ಕೊಟ್ಟರು ನೀವು ಇಂಟರ್‌ಫಿಯರ್ ಮಾಡಬಾರದು ಎಂದು ರೆವಿನ್ಯೂ ಅಥಾರಿಟೀಸ್‌ಗೆ ಕೂಡ ಹೇಳಿದರು. ಈ ಪ್ರಕಾರವಾಗಿ ಕೋರ್ಟ್ ಆರ್ಡರ್ ಆದ ಮೇಲೆ, ನಮಗೆ ಬಹಳ ತೊಂದರೆಯಾಯಿತು ಎಂದು ಹೇಳಬೇಕಾಗಿದೆ. ಗೌರ್ನಮೆಂಟ್ ಕಂಟ್ರೋಲ್‌ನಲ್ಲಿದ್ದರೂ ನ್ಯಾಷನಲೈಸ್ ಪಾಲಿಸಿ ಏತಕ್ಕೆ ಸಕ್ಸಸ್‌ಫುಲ್ ಆಗಲಿಲ್ಲ ಅಂತ ನಾವು ತಿಳಿದುಕೊಳ್ಳ ಬೇಕಾಗಿದೆ, ಈ ಕ್ವಾರಿಗಳಿಂದ ಗ್ರಾನೈಟ್ ತೆಗೆದರೆ ಅಡಿಷನಲ್ ವ್ಯಾಲ್ಯು ಆದಂಥ ಫಾರೀನ್ ಎಕ್ಸ್‌ಚೇಂಜ್ ಜಾಸ್ತಿ ಬರುತ್ತದೆನ್ನುವ ಉದ್ದೇಶದಿಂದ ಮಾಡಿದ್ದು. ನಾವು ಯಾರಿಗೆ ಲೀಸ್ ಕೊಟ್ಟಿದ್ದೆವು. ಅವರಿಗೂ ಕೂಡ ರಾಮೆಟೀರಿಯಲ್ಸ್ ಸಿಗಲಿಲ್ಲ. ಅವರೆಲ್ಲಾ

ಕೆಲಸ ಬಿಟ್ಟರು, ಆದರೆ ಖಾಸಗೀ ಜಮೀನು ಮತ್ತು ಪಕ್ಕಾ ಲ್ಯಾಂಡ್‌ನಲ್ಲಿದ್ದಂತಹ ಗ್ರಾನೈಟ್ ಅನ್ನು ಲೂಟಿ ಮಾಡಿದರು ಎಂಬುದು ಸರ್ಕಾರದ ಅಭಿಪ್ರಾಯ ಇದೆ. ಇದರ ಬಗ್ಗೆ ಸರ್ಕಾರ ಸಡಿಲಗೊಳಿಸಿದಂತಹ ನೀತಿ ಆ್ಯಂಟಿನಾಷನಲೈಸ್ ಅಂತ ಅಲ್ಲ; ಲಿಬರಲೈಜೇಷನ್ ಪಾಲಿಸಿ ಯಿಂದ ಕೆಲವು ಜನರಿಗೆ ಲಾಭದಾಯಕವಾಗಲಿ ಅಂತ ಅಲ್ಲ. ಇಂಡಸ್ಟ್ರಿಯಲ್ ರೆಸಲ್ಯೂಷನ್ ಪಾಲಿಸಿ ಆಫ್ ಸೆಂಟ್ರಲ್ ಗೌರ್ನಮೆಂಟ್ ಏನಿದೆ ಅದರ ಪ್ರಕಾರ ಇದನ್ನು ಖಾಸಗೀಯವರಿಗೆ ಕೊಡಬಹುದು ಎನ್ನುವ ಅರ್ಥದಲ್ಲಿದ್ದುದರಿಂದ ಕೊಡಲಾಗಿದೆ ಮಾನ್ಯ ಚಂದ್ರೇಗೌಡರು ೭೯ರಲ್ಲಿ ಅಧಿಕಾರದಲ್ಲಿದ್ದರು, ಕಳೆದ ೯-೧೦ ವರ್ಷಗಳ ಅವಧಿಯಲ್ಲಿ ಇದನ್ನು ಏತಕ್ಕೆ ಮಾಡಲಿಕ್ಕಾಗಲಿಲ್ಲ ಎನ್ನುವುದನ್ನು ತಾವೇ ವಿಚಾರ ಮಾಡಬೇಕು ಇದರ ಬಗ್ಗೆ ನನಗೆ ಏನೂ ಹೇಳುವುದಕ್ಕೆ ಬರುವುದಿಲ್ಲ. ನಾವು ಅಧಿಕಾರಕ್ಕೆ ಬಂದ ೫-೬ ತಿಂಗಳಲ್ಲಿ ಲಿಬರಲೈಜೇಷನ್ ಪಾಲಿಸಿ ಬಗ್ಗೆ ಬಹಳಷ್ಟು ಒತ್ತಡ ಬಂದಿದ್ದರಿಂದ ಮಾಡಬೇಕಾಗಿ ಬಂತು. ಆದ್ದರಿಂದ ಈ ಪಾಲಿಸಿಯನ್ನು ಜಾರಿಗೆ ತರಲಾಯಿತೆಂದು ತಮಗೆ ತಿಳಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರದಿಂದ ನನಗೆ ಬಹಳ ನಿರಾಶೆಯಾಗಿದೆ. ಸ್ಪೆಸಿಫಿಕ್ಕಾಗಿ ಡಿಮ್ಯಾಂಡ್ ಬಗ್ಗೆ ಮಾತನಾಡುವಾಗ, ಸದನಕ್ಕೆ ಬಂದು ಕೆಲವು ವಿಷಯಗಳನ್ನು ಸಂಗ್ರಹ ಮಾಡಿಕೊಂಡು ಬಂದು ಆ ಬಗ್ಗೆ ಸಲಹೆಗಳನ್ನು ಕೊಟ್ಟಾಗ, ಖಚಿತವಾಗಿ ಮಾಡುತ್ತೇವೆನ್ನುವ ಉತ್ತರ ಮಾನ್ಯ ಮಂತ್ರಿಗಳಿಂದ ಬರದೆ ಇರತಕ್ಕಂಥಾದ್ದು ನನಗಂತೂ ಬಹಳ ನಿರಾಶೆಯಾಗಿದೆ. ನಾನು ಒಂದೂವರೆ ಗಂಟೆಗಳ ಕಾಲ ಮಾತನಾಡಿದ್ದೇನೆ, ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ, ಪರಿಶೀಲನೆ ಮಾಡುತ್ತೇನೆಂದು ಹೇಳಿದರೆ, ನಿಮ್ಮ ಬಗ್ಗೆ ಅಧಿಕಾರಿಗಳು ಏನೆಂದು ಕೊಳ್ಳುತ್ತಾರೆಂಬುದನ್ನು ಯೋಚನೆ ಮಾಡಿ. ತಾವು ಈ ಇಲಾಖೆಯಲ್ಲಿ ಏನು ಮಾಡಬೇಕೆಂದು ಇದ್ದೀರಿ ಎಂಬುದೇ ನನಗೆ ಅರ್ಥವಾಗುವುದಿಲ್ಲ, ನಾನು ಒತ್ತು ಕೊಟ್ಟು ಹೇಳಿದ್ದೇನೆಂದರೆ ಸ್ಪೆಷಲ್ ಕಾಂಪೋನೆಂಟ್ ಸ್ಕೀಮಿನಲ್ಲಿ ಖರ್ಚುಮಾಡತಕ್ಕ ಹಣ ವೇಸ್ಟ್‌ಫುಲ್ ಎಕ್ಸ್‌ಪೆಂಡೀಚರ್ ಬಹಳ ಇದೆ, ಅನ್‌ನೆಸಸರಿ ಪ್ರೋಗ್ರಾಂಗಳು ಬಹಳ ಇದೆ, ಅದನ್ನು ತಡೆಗಟ್ಟಬೇಕಾದರೆ ರಿವ್ಯೂ ಮಾಡತಕ್ಕ ಇವಾಲ್ಯುಯೇಟ್ ಮಾಡತಕ್ಕ ಒಂದು ಸಿಸ್ಟಂ ಅನ್ನು ಜಾರಿಗೆ ತರಬೇಕೆಂದು ಹೇಳಿದ್ದೆ. ಅದರ ಬಗ್ಗೆ ತಾವೇನೂ ಹೇಳಲಿಲ್ಲ ಡೈರೆಕ್ಟರ್ ಆಫ್ ಹಾಸ್ಟಲ್ಸ್ ಮಾಡಬೇಕೆಂದು ಹೇಳಿದ್ದೆ ಅದರ ಬಗ್ಗೆ ಕೂಡ ತಾವು ಏನೂ ಹೇಳಲಿಲ್ಲ ಇರಿಗೇಷನ್ ಬೋರ್‌ವೆಲ್ಸ್‌ಗೆ ಕೊಡತಕ್ಕ ೩೫,೦೦೦ ರಿಂದ ೪೫,೦೦೦ ಮಾಡಬೇಕು ಮತ್ತೆ ಡಿಸ್ಟೆನ್ಸ್ ಬಗ್ಗೆ ನಬಾರ್ಡ್ ರಿಸ್ಟ್ರಿಕ್ಷನ್ ೮೨೫ ಅಡಿಗಿಂತ ಹೆಚ್ಚು ಇರಬೇಕೆಂಬುದನ್ನು ತೆಗೆದು ಹಾಕಬೇಕೆಂದು ಹೇಳಿದ್ದೆ ಅದರ ಬಗ್ಗೆಯೂ ಹೇಳಲಿಲ್ಲ ಯೂನಿವರ್ಸಿಟಿಗಳಲ್ಲಿ ಬೋರ್ಡುಗಳಲ್ಲಿ ಸರ್ಕಾರದ ಕಾರ್ಪೋರೇಷನ್‌ಗಳಲ್ಲಿ ರಿಸರ್ವೇಷನ್ ಪಾಲಿಸಿ ಎಷ್ಟು ಇಂಪ್ಲಿಮೆಂಟ್ ಆಗಬೇಕಾಗಿತ್ತೋ ಅಷ್ಟು ಆಗಿಲ್ಲ ೧೮ ಪರ್ಸೆಂಟ್ ಇರಬೇಕಾದ ಕಡೆ ಕೇವಲ ೪ ಮತ್ತು ೫ ಪರ್ಸೆಂಟ್ ಇದೆ ಎಂದು ಹೇಳಿದ್ದೆ ನೀವು ಇದರ ಬಗ್ಗೆ ಕೂಡ ಟಚ್ ಮಾಡಲಿಲ್ಲ. ಮುನಿಸಿಪಾಲಿಟಿಗಳಲ್ಲಿ ಮತ್ತು ಕಾರ್ಪೋರೇಷನ್‌ಗಳಲ್ಲಿ ೧೮ ಪರ್ಸೆಂಟ್ ಮೀಸಲು ಹಣವನ್ನು ಯಾವರೀತಿ ಖರ್ಚು ಮಾಡಬೇಕೆಂಬುದರ ಬಗ್ಗೆ ಗೈಡ್‌ಲೈನ್ಸ್ ಕೊಡಿ ಎಂದು ಹೇಳಿದ್ದೆ, ಅದರ ಬಗ್ಗೆ ಸಹ ಹೇಳಲಿಲ್ಲ. ವಿಧವಾ ಮಾಸಾಶನ, ಅಂಗವಿಕಲರ ಮಾಸಾಶನ ೪-೫ ತಿಂಗಳಾದರೂ ಅವರಿಗೆ ಸಿಗುತ್ತಿಲ್ಲ, ಈ ವಿಚಾರವನ್ನು ನಾನು ಮೂರು ಸಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮಧ್ಯವರ್ತಿಗಳು ದುಡ್ಡು ತಿನ್ನುತ್ತಿದ್ದಾರೆಂದು ಹೇಳಿದೆ ಇದರ ಬಗ್ಗೆ ಕೂಡ ತಾವು ಏನೂ ಹೇಳಲಿಲ್ಲ. ಪರಿಶಿಷ್ಟಜಾತಿಯವರಿಗೆ ಕೊಡತಕ್ಕ ಸಾಮಾನುಗಳು ಏನಿವೆ, ಅಸೆಟ್ಸ್ ಏನಿವೆ, ಇವನ್ನು ಮಾರುವವರಿಗೆ ಮತ್ತು ಕೊಳ್ಳುವವರಿಗೆ ಶಿಕ್ಷೆ ಮಾಡತಕ್ಕ ಒಂದು ಕಾನೂನು ಮಾಡಿ ಎಂದು ಹೇಳಿದೆ ಅದರ ಬಗ್ಗೆ ಕೂಡ ಹೇಳಲಿಲ್ಲ, ತಾವು ಖಚಿತವಾಗಿ ಇವುಗಳ ಬಗ್ಗೆ ಹೇಳಬೇಕಾಗುತ್ತದೆ. ಒಂದು ವರ್ಷದ ಒಳಗೆ ಈ ಕೆಲಸಗಳನ್ನು ಮಾಡಲಿಕ್ಕಾಗುತ್ತದೆ. ಅಥವಾ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಬೇಕಾಗುತ್ತದೆ ೫೦ ಹೊಸ ಹಾಸ್ಟೆಲುಗಳು ೨೫ ಬಿ. ಸಿ. ಎಂ. ಹಾಸ್ಟೆಲುಗಳು ಕೊಡುತ್ತೇವೆಂದು ಹೇಳಿದ್ದೀರಿ. ನನಗೆ ತಿಳಿದಂತೆ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಈ ಅಂಕಿಸಂಖ್ಯೆಗಳು ಸಿಗಬಹುದು. ಜಿಲ್ಲಾ ಪರಿಷತ್ ನವರು ೧೦-೧೫ ಹಾಸ್ಟೆಲುಗಳನ್ನು ಒಂದೊಂದು ಜಿಲ್ಲೆಯಲ್ಲಿ ಮಾಡಿಕೊಂಡಿದ್ದಾರೆ. ೨೫೦-೩೦೦ ಹಾಸ್ಟೆಲ್‌ಗಳು ಈಗಾಗಲೇ ನಡೆಯುತ್ತಿವೆ. ನೀವು ಕೇವಲ ೫೦ ಹಾಸ್ಟೆಲುಗಳನ್ನು ಕೊಟ್ಟರೆ, ಉಳಿಕೆ ೧೫೦-೨೦೦ ಹಾಸ್ಟೆಲುಗಳು ಏನಾಗಬೇಕು ಇದರ ಬಗ್ಗೆ ತಾವು ಏನನ್ನೂ ಹೇಳಲಿಲ್ಲ. ಇನ್ನೂ ಗ್ರಾನೈಟ್ ಬಗ್ಗೆ ರಮೇಶಜಿಗಜಿಣಗಿಯವರು ಹೀಗೆ ಪತ್ರ ಬರೆದಿದ್ದರು. ಅರುಣ್ ನೆಹರೂರವರು ಅಜಿತ್‌ಸಿಂಗ್‌ರವರು ಹೀಗೆ ಪತ್ರ ಬರೆದಿದ್ದಾರೆ ಎಂದು ತಮ್ಮ ಅನುಕೂಲಕ್ಕೆ ತಕ್ಕಹಾಗೆ ಓದಿ ನಮಗೆ ಸಮಾಧಾನ ಮಾಡುವುದಕ್ಕೆ ಹೋಗಬೇಡಿ. ರಾಜ್ಯದ ಸಂಪತ್ತು ಕೊಳ್ಳೆಯಾಗಿ ಹೋಗುತ್ತಿದೆ. ನಮ್ಮ ಕೈನಲ್ಲೂ ತಡೆಗಟ್ಟುವುದಕ್ಕೆ ಆಗದಿದ್ದರೆ ನಮ್ಮದೂ ತಪ್ಪಿದೆ. ನಮಗೆ ಇವತ್ತು ಏತಕ್ಕೆ ಇಷ್ಟೊಂದು ಕಾಳಜಿ ಇದೆ ಅಂದರೆ, ನಮ್ಮ ತಾಲ್ಲೂಕಿನಲ್ಲಿ ಕಳೆದ ೧೦-೧೨ ವರ್ಷದಲ್ಲಿ ಬೆಟ್ಟ ಗುಡ್ಡ

ಕಾಡು ಎಲ್ಲ ದರೋಡೆಯಾಗಿದೆ. ಅಲ್ಲಿ ಏನೂ ಉಳಿದಿಲ್ಲ. ಸಾವಿರಾರು ಜನ ಪೋಲಿಗಳಾಗಿದ್ದಾರೆ. ತಮಿಳುನಾಡಿನವರು ಬಂದು ಲೂಟಿ ಹೊಡೆಯುತ್ತಿದ್ದಾರೆ. ನಮಗೆ ಅವರ ಕಾಗದ ಇವರ ಕಾಗದ ಬೇಕಿಲ್ಲ. ಸದನದ ಸಮಿತಿ ಮಾಡಿ. ನಾವು ಎಲ್ಲರನ್ನೂ ನೋಡಿದ್ದೇವೆ. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆಯಾಗಲಿ. ೨೦ ಕೋಟಿ ಬರುತ್ತದೆಂದು ಹೇಳಿದಿರಿ, ಅದು ಇನ್ನು ೪ ವರ್ಷ ಆದಮೇಲೆ ಬರಲಿ. ೨ ವರ್ಷವಾದ ಮೇಲೆ ಬರಲಿ ಹೇಗಿದ್ದರೂ ೨೫೦–೩೦೦ ಕೋಟಿ ಬೇರೆ ಬೇರೆ ಇಲಾಖೆಗಳಿಂದ ಜಾಸ್ತಿ ಉತ್ಪತ್ತಿಯಾಗುತ್ತಿದೆಂದು ಹೇಳಿದ್ದೀರಿ, ಆದ್ದರಿಂದ ಹೌಸ್ ಕಮಿಟಿ ಏತಕ್ಕೆ ಮಾಡಬಾರದು ಎಂಬುದನ್ನು ನಮಗೆ ತಿಳಿಸಿ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೆ, ನಾನು ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಮ್ ಬಗ್ಗೆ ಹೇಳಿದ್ದಾರೆ. ಬೇರೆ ಬೇರೆ ಡಿಪಾರ್ಟ್‌ಮೆಂಟಿನವರೆಲ್ಲಾ ಕೂಡಿ ಈ ಹಣವನ್ನು ಖರ್ಚುಮಾಡುತ್ತಿದ್ದಾರೆ. ಎಲ್ಲೆಲ್ಲಿ ಅವ್ಯವಹಾರ ಆಗುತ್ತಿದೆ ಎಂಬುದನ್ನು ನೋಡಲು ನಾವು ಎವಾಲ್ಯೂಯೇಷನ್ ಪ್ರೊಗ್ರಾಮ್ ಇಟ್ಟು ಕೊಂಡಿದ್ದೇವೆ. ತುಮಕೂರು ಜಿಲ್ಲೆಯಲ್ಲಿ ಈಗಾಗಲೇ ಮಾಡಿದ್ದೇವೆ. ಈಗ ನಮ್ಮ ಹೈಪವರ್ ಕಮಿಟಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಛೇರ್‌ಮನ್ ಇದ್ದಾರೆ. ಹೈಪವರ್ ಕಮಿಟಿ ಮೀಟಿಂಗ್ ಕರೆದು ಡಿಸ್‌ಕಷನ್ ಮಾಡಿ ನಾವು ಏನು ಪ್ರೋಗ್ರಾಮ್‌ಗಳನ್ನು ಹಾಕಿಕೊಳ್ಳಬೇಕು ಎಂಬುದನ್ನು ಹೇಳಿದ್ದೇವೆ. ಇನ್ನು ಹರಿಜನಗಿರಿಜನರ ಪ್ರಾಪರ್ಟಿಯ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಕಾನೂನು ಮಾಡಿ ಶಿಕ್ಷೆ ವಿಧಿಸುತ್ತೇವೆಂದು ಹೇಳಿದ್ದೇನೆ. ಇನ್ನು ಹಾಸ್ಟೆಲುಗಳ ಬಗ್ಗೆ ಹೇಳಿದ್ದಾರೆ. ನಮ್ಮ ಎಲ್ಲಾ ಕೆಲಸಗಳು ಜಿಲ್ಲಾಪರಿಷತ್ ಮುಖಾಂತರ ಆಗುತ್ತದೆ. ಎಲ್ಲೆಲ್ಲಿ ಹಾಸ್ಟಲುಗಳು ಬೇಕು, ಅಲ್ಲೆಲ್ಲಾ ಅವುಗಳನ್ನು ತೆರೆದರೆ ನಮ್ಮ ಅಭ್ಯಂತರವಿಲ್ಲ. ಆದರೂ ಕೂಡ ಬಹಳ ಶಾಸಕರು ಹಾಸ್ಟಲುಗಳನ್ನು ತೆರೆಯಬೇಕೆಂದು ಹೇಳಿದರು. ಅದರಂತೆ ಹಾಸ್ಟಲುಗಳನ್ನು ತೆರೆಯತಕ್ಕಂಥಾದ್ದು, ಮತ್ತು ಕನ್‌ಸ್ಟ್ರಕ್ಷನ್ ಮಾಡತಕ್ಕಂಥ ಪ್ರೋಗ್ರಾಮ್ ಸಹ ಇದೆ. ಇನ್ನು ಯೂನಿವರ್ಸಿಟಿಗಳಲ್ಲಿ ೧೮ ಪರ್‌ಸೆಂಟ್ ರಿಸರ್ವೇಷನ್ ಮಾಡಿರುವ ಬಗ್ಗೆ ನಾವು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ಪತ್ರ ಬರೆದಿದ್ದೇವೆ. ಆಯಾ ಡಿಪಾರ್ಟ್‌ಮೆಂಟಿನಲ್ಲಿ ಯಾವ ಪಾಲಿಸಿ ಅಡಾಪ್ಟ್ ಮಾಡಿದ್ದಾರೆ, ಅದನ್ನು ನಮಗೆ ಕಳುಹಿಸಿ ಕೊಡಬೇಕೆಂದು ಹೇಳಿದ್ದೇವೆ. ಅದು ಬಂದಾಗ ಕ್ಯಾಬಿನೆಟ್‌ನಲ್ಲಿ ಇಟ್ಟು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಇನ್ನು ಬೋರ್‌ವೆಲ್ ಬಗ್ಗೆ ಹೇಳಬೇಕೆಂದರೆ, ನಬಾರ್ಡ್‌ರೂಲ್ಸ್ ಪ್ರಕಾರ ೪೦ ಸಾವಿರ ಬರುತ್ತದೆ. ಇನ್ನು ಗ್ರಾನೈಟ್ ಪಾಲಿಸಿ ಬಗ್ಗೆ ಹೇಳಬೇಕೆಂದರೆ ತಾವು ಸಲಹೆಗಳನ್ನು ಕೊಡಿ ಆದರೆ ಈಗ ಲಿಬರಲೈಸೇಷನ್ ಪಾಲಿಸಿ ಏನು ಅಡಾಪ್ಟ್ ಮಾಡಿದ್ದೇವೆ, ಅದನ್ನು ಹಿಂದಕ್ಕೆ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ ಮತ್ತು ಇದಕ್ಕೆ ಹೌಸ್ ಕಮಿಟಿ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮೂಲ ಭೂತವಾಗಿ ನಾನು ಈ ಪ್ರಶ್ನೆಯನ್ನು ಬಹಳ ಕಾಲದಿಂದಲೂ ಈ ಸಮಸ್ಯೆ ಬಗ್ಗೆ ಹೊರಗೆ, ಒಳಗೆ ಹೋರಾಟ ಮಾಡಿ ಸಾರ್ವಜನಿಕರ, ರಾಜ್ಯದ ಮತ್ತು ದೇಶದ ಹೀಗೆ ಎಲ್ಲರ ಗಮನವನ್ನು ಸೆಳೆದಿದ್ದೇನೆ. ನನ್ನ ಪ್ರಶ್ನೆ ಇಷ್ಟೆ, ಗ್ರಾನೈಟ್ ತೆಗೆಯಬೇಕೆ, ಬಿಡಬೇಕೆ ಎನ್ನುವ ಬಗ್ಗೆ ಒಂದೇ ಪ್ರಶ್ನೆ. ಸಮಗ್ರವಾಗಿ ಇಡೀ ರಾಜ್ಯದಲ್ಲಿ ಏನು ಒಂದು ನಿಸರ್ಗ ಸಂಪತ್ತು ಇದೆ, ಈ ನಿಸರ್ಗ ಸಂಪತ್ತು ನಾಶವಾಗಬಾರದು. ಇದನ್ನು ನಾಶವಾಗದಂತೆ ತಡೆಯಬೇಕೆಂದರೆ, ಸಮಗ್ರವಾಗಿ ಗ್ರಾನೈಟ್ ತೆಗೆಯುವುದು ನಿಲ್ಲಿಸಬೇಕೆಂದು ನನ್ನ ಮೂಲ ಉದ್ದೇಶ. ಯಾವ ರೀತಿ ಲೈಸೆನ್ಸ್ ಕೊಡಬೇಕು, ಯಾವರೀತಿ ಲೈಸೆನ್ಸ್ ಕೊಡಬಾರದು ಎನ್ನುವ ಉದ್ದೇಶ ಇಲ್ಲ. ಇವರ ಬಗ್ಗೆ ದೇಶದ ಅನೇಕ ಜನ ತಜ್ಞರು, ಸುಪ್ರೀಮ್‌ಕೋರ್ಟ್ ನ್ಯಾಯಾಧೀಶರುಗಳು ಅನೇಕ ನಿರ್ಣಯಗಳನ್ನು, ತೀರ್ಮಾನವನ್ನು ಕೊಟ್ಟಿರತಕ್ಕಂಥಾದ್ದು ಇದೆ. ತಾವು ಅದನ್ನು ಗಮನಿಸಬೇಕು, ಆದರೆ ಗಮನಿಸಿಲ್ಲ. ಈಗ ನಾನು ವೈಯಕ್ತಿಕವಾಗಿ ಹೇಳುವುದು ಇದನ್ನು ತೆಗೆಯಕೂಡದು ನಮ್ಮ ಸಿಂಧ್ಯ, ಅವರ ತೀರ್ಮಾನವೂ ಅದೇ, ನಮ್ಮ ರೈತಸಂಘದವರ ತೀರ್ಮಾನವೂ ಅದೇ ಆಗಿದೆ. ಗ್ರಾನೈಟ್ ತೆಗೆಯಕೂಡದು ಎಂಬುದು; ಇನ್ನು ಎರಡನೆಯ ಪ್ರಶ್ನೆಗೆ ಬಂದಾಗ ಯಾರು ಏನ ಹೇಳಿದರೂ ನಾವು ತೆಗೆದೇ ತೆಗೆಯುತ್ತೇವೆ, ಸರ್ಕಾರಕ್ಕೆ ಹಣ ಬೇಕಾಗಿದೆ ಎನ್ನತಕ್ಕ ಉದ್ದೇಶದ ಬಗ್ಗೆ ನೀವು ಹೇಳುವುದಾದರೆ ನಿಮಗೆ ನಿಸರ್ಗ ನಾಶ ಆದರೂ ಚಿಂತೆ ಇಲ್ಲ, ಈ ರಾಜ್ಯಕ್ಕೆ ಬೆಂಕಿ ಬಿದ್ದರೂ ಚಿಂತೆಯಿಲ್ಲ ಈ ರಾಜ್ಯ ಎರಡು ಭಾಗವಾಗಿ ಜನರೆಲ್ಲಾ ಭೂಮಿಗೆ ಹೋದರೂ ಚಿಂತೆಯಿಲ್ಲ. ಭೂಕಂಪ ಆದರೂ ಚಿಂತೆ ಇಲ್ಲ ಎಂದು ಶಿವಣ್ಣ ಅವರು ಅಂದರೆ ಶಿವನ ಅಣ್ಣ ಶಿವಣ್ಣ ಅವರು ತೀರ್ಮಾನ ಮಾಡುವುದಾದರೆ ಇದು ಭಸ್ಮಾಸುರನ ಕಥೆಯಾಗುತ್ತದೆ. ನಾನು ಹೇಳುವುದು ಇಷ್ಟು, ೨೦ ಕೋಟಿ ರೂಪಾಯಿ ನಿಮ್ಮ ಆದಾಯ. ಮೊನ್ನೆ ನಿಮ್ಮ ಪಕ್ಕದಲ್ಲಿ ಕುಳಿತಿದ್ದ ಹಣಕಾಸು ಸಚಿವರು ೬೦ ಕೋಟಿ ರೂಪಾಯಿ ಎಂದು ಹೇಳಿದರು.

ಶ್ರೀ ಬಿ. ಶಿವಣ್ಣ.— ಇಲ್ಲ, ೨೦ ಕೋಟಿ ರೂಪಾಯಿ.

ಶ್ರೀ ಟಿ.ಎಂ. ಮಂಜುನಾಥ್.— ಅಧ್ಯಕ್ಷರೇ, ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು...

ಶ್ರೀ ವಾಟಾಳ್ ನಾಗರಾಜ್.— ನಾವು ಕೇಳುತ್ತೇವೆ, ನೀವು ಕುಳಿತುಕೊಳ್ಳಿ; ಸುಮ್ಮನೆ ಏತಕ್ಕೆ ತಲೆ ತಿನ್ನುತ್ತೀರಿ...

ಶ್ರೀ ಟಿ.ಎಂ. ಮಂಜುನಾಥ್.— ಅಧ್ಯಕ್ಷರೆ, ಮಾನ್ಯ ಸದಸ್ಯರು ಆ ರೀತಿ ಮಾತನಾಡಬಾರದು; ತಾವು ಅವರಿಗೆ ಅವಕಾಶ ಕೊಟ್ಟಿರುವುದು ಕ್ಲಾರಿಫಿಕೇಷನ್ ಕೇಳಲಿಕ್ಕೆ ಹೊರತು ಭಾಷಣ ಮಾಡಲಿಕ್ಕೆ ಅಲ್ಲ. ಅವರು ಮತ್ತೊಬ್ಬ ಸದಸ್ಯರ ಬಗ್ಗೆ ಹೀನಾಯವಾಗಿ ಮಾತನಾಡುತ್ತಿದ್ದಾರೆ. ಅದು ಸರಿಯಲ್ಲ ನಿಸರ್ಗ ಎನ್ನತಕ್ಕದ್ದು ಮಾನವನ ಉಪಯೋಗಕ್ಕೆ ಇರತಕ್ಕದ್ದು. ವಾಟಾಳ್ ಅವರು ಅದನ್ನು ತಿಳಿದುಕೊಳ್ಳಬೇಕು. ಭೂಮಿಯಲ್ಲಿ ಚಿನ್ನ ಇರುತ್ತದೆ, ಅದನ್ನು ತೆಗೆಯಬೇಡಿ ಎಂದು ಹೇಳುವುದಕ್ಕೆ ಅವರಿಗೆ ಏನು ಅಧಿಕಾರ ಇದೆ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಈ ವಿಷಯದಲ್ಲಿ ಅವರು ಏತಕ್ಕೆ ನಿಲ್ಲಿಸಬೇಕೆಂದು ಹೊರಟಿದ್ದಾರೆ. ಅದು ನನಗೆ ಗೊತ್ತಿದೆ.

ಶ್ರೀ ಟಿ.ಎಂ. ಮಂಜುನಾಥ್.— ನೀವು ಹೇಳಿದ್ದೇ ಹೇಳುತ್ತಿದ್ದೀರಲ್ಲಾ ಅದಕ್ಕೇ ನಾನು ಹೇಳಿದ್ದು; ನೀವೇ ಎಲ್ಲಾ ದೇಶ ಉದ್ಧಾರ ಮಾಡುವವರು. ಇದ್ದವರೆಲ್ಲಾ ಹಾಳು ಮಾಡುತ್ತಿದ್ದಾರೆಯೆ? ಅದೇನು ನೀವು ಮಾತನಾಡುವಾಗ ಶಿವನ ಅಣ್ಣ ಶಿವಣ್ಣ, ಇದೇನು ಸ್ವಾಮಿ ಇದು;

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೆ, ಈ ಸಭೆಯಲ್ಲಿ ಏನು ನಡೆಯುತ್ತದೆ, ತಮಗೆ ಗೊತ್ತಿದೆ, ಯಾರು ಹಾಳು ಮಾಡುತ್ತಾರೆ, ಯಾರು ಉದ್ಧಾರ ಮಾಡುತ್ತಾರೆ ಮಂಜುನಾಥ್ ಅವರಿಗೆ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರಿಗೆ ಕ್ಲಾರಿಫಿಕೇಷನ್ ಕೇಳಲಿಕ್ಕೆ ಹೆಚ್ಚಿನ ಅವಕಾಶ ಕೊಡುತ್ತೇನೆಂದು ಹೇಳಿ ಈಗ ಕೊಟ್ಟಿದ್ದೀರಿ. ಈಗ ಅವರು ಮಾತನಾಡುತ್ತಿದ್ದಾರೆ. ಅದಕ್ಕೆ ದಯವಿಟ್ಟು ಅವರಿಗೆ ಅವಕಾಶ ಕೊಡಿ.

ಉಪಾಧ್ಯಕ್ಷರು.— ತಾವು ಈಗ ಭಾಷಣ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್.— ಇದು ಭಾಷಣ ಅಲ್ಲ; ಈ ಬಗ್ಗೆ ಹೈಕೋರ್ಟಿನಲ್ಲಿ ಅನೇಕ ಜನ ತಡೆಯಾಜ್ಞೆಯನ್ನು ತಂದಿದ್ದಾರೆಂದು ಹೇಳಿದ್ದಾರೆ ಅದನ್ನು ತರುವುದಕ್ಕೆ ಕಾರಣಗಳೇನು ಎನ್ನುವುದನ್ನು ತಾವು ಪರಿಶೀಲನೆ ಮಾಡಬೇಕು. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿಯಮಾವಳಿ ಏನು ಇದೆ ಆ ಕಾನೂನಿನ ಪರಿಮಿತಿ ಸರಿ ಇಲ್ಲವೆಂದು ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ನೀವು ಈ ತಡೆಯಾಜ್ಞೆಯನ್ನು ತೆಗೆಸುವುದಕ್ಕೆ ಎಷ್ಟು ಪ್ರಯತ್ನ ನಡೆಸಿದ್ದೀರಿ ಎಂಬ ಬಗ್ಗೆ ತಿಳಿಸಬೇಕು. ತಡೆಯಾಜ್ಞೆಯಲ್ಲಿ ಸರಕಾರಕ್ಕೆ ಏನು ಹೇಳಿದ್ದಾರೆ; ಕಾಯಿದೆಯಲ್ಲಿ ತಿದ್ದುಪಡಿಯಾಗಬೇಕು ಎಂದು ಹೇಳಿದ್ದಾರೆ. ಆದರೆ ಅದರ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ನಮ್ಮದೇ ಆದಂಥ ಮೈಸೂರು ಮಿನರಲ್ಸ್ ಲಿಮಿಟೆಡ್ ಇದೆ ಅಲ್ಲಿ ಐ.ಎ.ಎಸ್. ಅಧಿಕಾರಿ ಇದ್ದಾರೆ ಅದು ದೊಡ್ಡ ಸಂಸ್ಥೆ ಇದೆ. ಅಲ್ಲಿ ಸಾಕಷ್ಟು ಸಿಬ್ಬಂದಿ ಇದೆ. ಅದನ್ನು ಬಿಟ್ಟು ೨೭ ಜನ ಖಾಸಗಿಯವರಿಗೆ ಕೊಡಬೇಕೆನ್ನತಕ್ಕಂಥ ನಿರ್ಧಾರ ತೆಗೆದುಕೊಂಡಿರತಕ್ಕಂತಹದ್ದರ ಬಗ್ಗೆ ಸರಕಾರ ವಿಚಾರ ಮಾಡಬೇಕು. ತಮಗೆ ಅರುಣ್ ನೆಹರು ಕಾಗದ ಬರೆದಿದ್ದಾರೆ ಅಜಿತ್‌ಸಿಂಗ್‌ರವರು ಕಾಗದ ಬರೆದಿದ್ದಾರೆಂದು ಹೇಳಿದ್ದೀರಿ. ಅವರು ಪತ್ರ ಬರೆದ ತಕ್ಷಣ ಅದಕ್ಕೆ ಮನ್ನಣೆ ಕೊಟ್ಟು ಈ ರಾಜ್ಯದ ನಿಸರ್ಗ ಸಂಪತ್ತನ್ನು ನಾಶ ಮಾಡಬೇಕೆಂಬ ಉದ್ದೇಶ ನಿಮಗೆ ಇದೆಯೇ ? ನಿಮ್ಮ ಪರಿಸ್ಥಿತಿ ಏನು ಇದೆ ಅದನ್ನು ಬರೆಯ ಬೇಕಾಗಿತ್ತು. ಇದರಿಂದ ೨೦ ಕೋಟಿ ಉತ್ಪನ್ನ ಬರುತ್ತದೆ ಎಂದು ಹೇಳುತ್ತಿದ್ದೀರಿ; ಆದರೆ ನಮಗೆ ಬಿಡಿ ೬೦ ಕೋಟಿ ರೂಪಾಯಿನ್ನು ನಾವು ಕೊಡುತ್ತೇವೆ. ಈ ೭ ಜನರು ಯಾರಿದ್ದಾರೆ ಅವರು ಕೇಂದ್ರಕ್ಕೆ ಹೋಗಿ ಅಲ್ಲಿಂದ ಒತ್ತಡ ತಂದಿದ್ದಾರೆ. ಹಿಂದಿನ ಮಾನ್ಯ ರಾಜ್ಯಪಾಲರ ಮೇಲೆ ಒತ್ತಡ ತಂದಿದ್ದಾರೆ. ಹಿಂದಿನ ಸರಕಾರದ ಮೇಲೆ ಒತ್ತಡ ತಂದಿದ್ದಾರೆ. ಅದರ ಫಲ ಈ ಸರಕಾರದ ಮೇಲೆ ಒತ್ತಡ ತಂದಿದ್ದರಿಂದ ದೊರಕಿತು. ಹಿಂದಿನಿಂದ ಇದನ್ನು ಮಾಡಿಕೊಂಡು ಬಂದಿದ್ದಾರೆ. ಇವರ ವ್ಯವಹಾರ ಇಷ್ಟು ಕಡಿಮೆ ಏನೂ ಅಲ್ಲ. ಇದರಲ್ಲಿ ಭಾರಿ ಅವ್ಯವಹಾರ ನಡೆದಿದೆ. ಇದನ್ನು ಬಹಿರಂಗ ಗೊಳಿಸಲು ಒಂದು ಸದನ ಸಮಿತಿ ಮಾಡಬೇಕು.

ಶ್ರೀ ಎಂ. ಶಿವಣ್ಣ.— ಮಾನ್ಯ ವಾಟಾಳ್ ನಾಗರಾಜ್‌ರವರ ಬಗ್ಗೆ ನನಗೆ ಬಹಳ ವಿಶ್ವಾಸ ಇದೆ. ೬೦ ಕೋಟಿ ರೂಪಾಯಿ ಕೊಡಿಸುತ್ತೇನೆಂದು ಹೇಳಿದ್ದಾರೆ. ಅಂದರೆ ಅವರಿಗೆ ಮಂತ್ರಿಯಾಗಬೇಕೆಂಬ ಆಸೆ ಇದ್ದಹಾಗೆ ಕಾಣುತ್ತದೆ. ಹಾಗಿದ್ದರೆ ಅವರು ನಮ್ಮ ಪಕ್ಷದ ಸಹ ಸದಸ್ಯರಾಗಬೇಕಾಗುತ್ತದೆ. ಇಲ್ಲವೇ ಅವರ ಪಕ್ಷಕ್ಕೆ ರಾಜೀನಾಮೆ ಕೊಟ್ಟು ನಮ್ಮ ಪಕ್ಷ ಸೇರಬೇಕು. ಆಗಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿ ಮಂತ್ರಿ ಪದವಿ ಕೊಡಿಸೋಣ. Anybody can become a Minister at any time at the pleasure of the Chief Minister. ಇದನ್ನು ಸುಧಾರಿಸಬೇಕಾದರೆ ಅವರು ಅಲ್ಲಿ ಕುಳಿತರೆ ಆಗುವುದಿಲ್ಲ. ಈಗ ಅವರು ಒಬ್ಬರೇ ಇದ್ದಾರೆ. ಈ ಗ್ರಾನೈಟ್ ಪಾಲಿಸಿ ಹುಟ್ಟಿದ್ದು ೧೯೮೦ರಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಹಂತ ಹಂತವಾಗಿ ನೋಡಿದರೆ ಇಲ್ಲಿಯವರೆಗೆ ಯಾವ ಸರಕಾರಗಳೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ಸ್ಟೇ ವೆಕೇಟ್ ಮಾಡಿಸಲು ಯಾರಿಗೂ ಆಗಲಿಲ್ಲ ಈಗ ಅವ್ಯವಹಾರವಾಗಿದೆ ಎಂದು ಹೇಳುತ್ತಿದ್ದಾರೆ. ನಾವು ಅಧಿಕಾರಕ್ಕೆ ಬಂದು ಇನ್ನೂ ಆರು ತಿಂಗಳಾಗಿಲ್ಲ. ಎಲ್ಲವೂ ನಾಶವಾಗಿದೆ ಎಂದು ಅವರು ಹೇಳುತ್ತಿದ್ದಾರೆ. ನಾನು ಹೇಳಿದ್ದೇನೆಂದರೆ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ನಾನು ಮಂತ್ರಿಯಾಗುವುದು ನನಗೆ ಬೇಕಾಗಿಲ್ಲ. ನಾನು ಅವರ ಪಕ್ಷಕ್ಕೆ ಸೇರಬೇಕಾಗಿಲ್ಲ. ಅವರು ಮಾಡಿರತಕ್ಕಂತಹ ಸರಕಾರದ ಆಜ್ಞೆಯನ್ನು ನಿಲ್ಲಿಸಿ ಒಂದು ತಿಂಗಳ ಕಾಲ ಅಧಿಕಾರವನ್ನು ನನಗೆ ಕೊಡಿ; ಮಂತ್ರಿ ಪದವಿ ನನಗೆ ಬೇಡ. ನನ್ನ ಸಲಹೆ ತೆಗೆದುಕೊಳ್ಳಿ, ನಾನು ಸರಕಾರಕ್ಕೆ ೬೦ ಕೋಟಿ ಕೊಡಲಿಲ್ಲವೆಂದರೆ ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ.

ಶ್ರೀ ಎಂ. ಶಿವಣ್ಣ.— ಮಾನ್ಯ ವಾಟಾಳ್ ನಾಗರಾಜ್‌ರವರು ನನಗೆ ೨-೩ ಪತ್ರಗಳನ್ನು ಈ ಬಗ್ಗೆ ಬರೆದರು. ಇವರಿಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ ಎಂದು ತಿಳಿದು ಡಿಸ್ಕಸ್ ಮಾಡೋಣ ಬನ್ನಿ ಎಂದು ಕರೆದೆ. ಆದರೆ ಅವರಿಗೆ ಬರಲಿಕ್ಕೆ ಆಗಲಿಲ್ಲ.

೧೧-೦೦ ಎ. ಎಂ.

ಎರಡನೆಯದಾಗಿ ಈಗ ನಾವು ಒಂದು ಪಾಲಿಸಿ ಡಿಸಿಷನ್‌ನನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಮುಂದೆ ಏನಾದರೂ ಸುಧಾರಣೆ ಮಾಡುವುದಿದ್ದರೆ ಮಾಡಬಹುದು ಆದ್ದರಿಂದ ನಾನು ಮಾನ್ಯ ಶಾಸಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಮಗೇನಾದರೂ ಸಮಯ ಸಿಕ್ಕಿದರೆ ದಯವಿಟ್ಟು ಬನ್ನಿ ಇದರ ಬಗ್ಗೆ ಡಿಸ್ಕಸ್ ಮಾಡೋಣವೆಂದು ಹೇಳಿ ನಾನು ಈ ಸದನದ ಮುಂದೆ ಮಂಡಿಸಿರುವ ನನ್ನ ಇಲಾಖೆಗಳ ಬೇಡಿಕೆಗಳಿಗೆ ಮಾನ್ಯ ಸಭೆಯು ತನ್ನ ಸರ್ವಾನುಮತದ ಅನುಮೋದನೆಯನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಈ ಗ್ರಾನೈಟ್ ವಿಚಾರದಲ್ಲಿ ಬಹಳ ದೊಡ್ಡ ಭ್ರಷ್ಟಾಚಾರ ನಡೆದಿದೆ ದೊಡ್ಡ ಅವ್ಯವಹಾರ ನಡೆದಿದೆ. ಅದು ಬಹಿರಂಗವಾಗಲೇಬೇಕು. ಇದರ ಬಗ್ಗೆ ನನಗೆ ಸ್ಪಷ್ಟವಾದ ಭರವಸೆ ಮಾನ್ಯ ಮಂತ್ರಿಗಳಿಂದ ಬರದಿದ್ದರೆ ನಾನು ಇಲ್ಲಿ ಧರಣಿಯನ್ನು ಮಾಡಬೇಕಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀಮತಿ ಮೋಟಮ್ಮ.—ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಮಾತನಾಡುವಾಗ ಕೆಲವು ಸೂಚನೆಗಳನ್ನು ಕೊಟ್ಟು ಏತಕ್ಕೆ ಹೀಗೆ ಮಾಡಬಾರದೆಂದು ಹೇಳಿದ್ದೇನೆ. ಹರಿಜನರ ಮಕ್ಕಳಿಗೆ ಅನ್ನ ಬಟ್ಟೆ ಕೊಟ್ಟು ಹಾಸ್ಟೆಲ್‌ನಲ್ಲಿ ದನಗಳನ್ನು ಕೂಡಿಹಾಕುವಂತೆ ಮಾಡುವುದರಿಂದ ಏನು ಪ್ರಯೋಜನವಾಗುವುದಿಲ್ಲ ಆ ಮಕ್ಕಳಿಗೆ ಒಬ್ಬ ಟ್ಯೂಟರ್‌ನ್ನು ಇಟ್ಟು ಒಳ್ಳೆಯ ರಿಜಲ್ಟ್ ಬರುವಂತೆ ಮಾಡಬೇಕೆಂದು ಹೇಳಿದ್ದೆ ಅದಕ್ಕೆ ಏನು ಹೇಳಲಿಲ್ಲ ಮತ್ತೆ ಎರಡನೆಯದಾಗಿ ವಿಮೆನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರಿಗೆ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಹಣವನ್ನು ಕೊಟ್ಟಮೇಲೆ ಅದು ಏತಕ್ಕೆ ಇನ್ನೂ ಕೆಲಸ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿಲ್ಲ ಎಂದು ನಾನು ಕೇಳಿದ್ದೆ ಇದಕ್ಕೆ ಸಹ ಮಾನ್ಯ ಮಂತ್ರಿಗಳಿಂದ ಏನೂ ಉತ್ತರ ಬರಲಿಲ್ಲ. ಇನ್ನು ಹರಿಜನ ವಿದ್ಯಾರ್ಥಿಗಳು ಐ. ಎ. ಎಸ್. ಐ.ಪಿ.ಎಸ್. ಮಾಡಿಕೊಳ್ಳಲು ಟ್ರೈನಿಂಗ್ ಕೊಡುತ್ತೇವೆಂದು ಹೇಳಿದ್ದೀರಿ. ನಾನಾದರೂ ಕೇಳುತ್ತೇನೆ, ನೀವು ಎಷ್ಟು ಜನ ಹರಿಜನ ಮಕ್ಕಳಿಗೆ ಟ್ರೈನಿಂಗ್ ಕೊಟ್ಟು ಐ.ಎ.ಎಸ್, ಐ.ಪಿ.ಎಸ್. ಪಾಸ್ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದೀರೆಂಬುದನ್ನು ಹೇಳಬೇಕು. ಇನ್ನು ಹೊಸದಾಗಿ ಎಸ್.ಸಿ, ಎಸ್.ಟಿ. ಮಕ್ಕಳಿಗೆ ಹಾಸ್ಟೆಲ್‌ಗಳನ್ನು ಹೊಸದಾಗಿ ತೆರೆಯುವುದಕ್ಕೆ ಸಾಧ್ಯವಾಗದಿದ್ದರೆ ಈಗಿರತಕ್ಕ ಹಾಸ್ಟೆಲುಗಳಲ್ಲೇ ಪ್ರತಿಯೊಂದರಲ್ಲೂ ಇನ್ನೂ ೧೦-೧೫ ಮಕ್ಕಳನ್ನು ಹೆಚ್ಚಿಗೆ ಸೇರಿಸಿಕೊಳ್ಳಲು ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಿದ್ದೆ. ಇದಕ್ಕೂ ಉತ್ತರ ಕೊಡಲಿಲ್ಲ ಹಿಂದೆ ಮಾನ್ಯ ದೇವರಾಜ ಅರಸ್‌ರವರ

ಕಾಲದಲ್ಲಿ ದೌರ್ಜನ್ಯಕ್ಕೊಳಗಾದ ಹರಿಜನ ಗಿರಿಜನರಿಗೆ ಸ್ಪೆಷಲ್ ಲೀಗಲ್ ಏಡ್ ಸೆಲ್ ಎಂದು ಮಾಡಿದ್ದರು ಅದನ್ನು ಹಿಂದಿನ ಸರ್ಕಾರದವರು ಫ್ರೀ ಲೀಗಲ್ ಏಡ್ ಬೋರ್ಡಿನವರಿಗೆ ವಹಿಸಿಕೊಟ್ಟಿದ್ದಾರೆ. ಇದನ್ನು ತಾವು ಪುನರ್ ಪರಿಶೀಲನೆ ಮಾಡಿ ದೌರ್ಜನ್ಯಕ್ಕೊಳಗಾದ ಹರಿಜನಗಿರಿಜನರಿಗೆ ಫ್ರೀ ಲೀಗಲ್ ಏಡ್ ಸಿಕ್ಕುವಂತೆ ವ್ಯವಸ್ಥೆ ಮಾಡುತ್ತಾರಾ ಎಂದು ಕೇಳಬಯಸುತ್ತೇನೆ ?

ಶ್ರೀ ಬಿ. ಶಿವಣ್ಣ.—ಫ್ರೀ ಲೀಗಲ್ ಏಡ್ ಈಗಲೂ ಕೂಡ ಇದೆ. ದೌರ್ಜನ್ಯಕ್ಕೊಳಗಾದ ಹರಿಜನಗಿರಿಜನರು ಇದರ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಇನ್ನು ಎರಡನೆಯದಾಗಿ ಹಾಸ್ಟೆಲ್‌ಗಳಲ್ಲಿರುವ ಹುಡುಗರಿಗೆ ಎಕ್ಸ್‌ಟ್ರಾ ಛಾರ್ಜಸ್ ಕೊಡುವುದಲ್ಲದೆ ಎಲ್ಲ ತರಹದ ಅನುಕೂಲಗಳನ್ನೂ ಈ ಸಲ ಮಾಡಿಕೊಡುತ್ತೇವೆ. ಇನ್ನು ಮಕ್ಕಳಿಗೆ ಟ್ಯೂಷನ್ ಮಾಡಲು ವ್ಯವಸ್ಥೆ ಮಾಡಬೇಕೆಂದು ಹೇಳಿದ್ದಾರೆ. ಈ ಪದ್ಧತಿ ಈಗ ಜಾರಿಯಲ್ಲಿದೆ. ಆದರೆ ಕೆಲವು ಕಡೆ ಅವ್ಯವಹಾರಗಳಾಗುತ್ತಿವೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಸರಿಯಾಗಿ ನಡೆಯುತ್ತಿಲ್ಲ. ಈಗ ಈ ಮಕ್ಕಳಿಗೆ ಪರೀಕ್ಷೆಯ ಸಮಯದಲ್ಲಿ ಸ್ವಲ್ಪ ಸಹಾಯ ಮಾಡಬಹುದು ಮಾನ್ಯ ಸದಸ್ಯರು ಹೇಳಿದಂತೆ ಇದನ್ನು ನಾನು ಪರಿಶೀಲಿಸುತ್ತೇನೆ. ಇನ್ನು ವಿಮೆನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳಿದರು. ಅದು ಇಷ್ಟರಲ್ಲೇ ರೀ-ಕಾನ್ಸಿಟಿಟ್ಯೂಟ್ ಆಗುತ್ತದೆ. ಅದಕ್ಕೆ ದುಡ್ಡು ಕೂಡ......

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರೆ, ಗ್ರಾನೈಟ್ ಲೈಸೆನ್ಸ್ ನೀಡಿರುವುದರಲ್ಲಿ ಬಹಳ ದೊಡ್ಡ ಅನ್ಯಾಯ ನಡೆದಿದೆ, ಅವ್ಯವಹಾರ ನಡೆದಿದೆ ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ನನಗೆ ಸ್ಪಷ್ಟವಾದ ಭರವಸೆಯನ್ನು ನೀಡಿಲ್ಲ. ಆದ್ದರಿಂದ ನಾನು ಇಲ್ಲಿ ಧರಣಿ ಕೂತುಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾನ್ಯ ಅಧ್ಯಕ್ಷರ ಪೀಠದ ಮುಂದಿರುವ ಆವರಣದಲ್ಲಿ ಬಂದು ಧರಣಿ ಕುಳಿತರು)

ಶ್ರೀಮತಿ ಮೋಟಮ್ಮ.—ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಮಂತ್ರಿಗಳು ನನಗೆ ಸ್ಪಷ್ಟವಾಗಿ ಉತ್ತರವನ್ನು ಹೇಳಲಿಲ್ಲ. ನಾನು ಹೇಳಿದ್ದು ಹಾಸ್ಟೆಲ್‌ಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಟ್ಯೂಷನ್ ಹೇಳಿಕೊಡಲು ಸ್ಕೂಲ್‌ನಲ್ಲಿ ಕೆಲಸ ಮಾಡತಕ್ಕ ಟೀಚರ್‌ನ್ನೇ ನೇಮಕ ಮಾಡಿದ್ದಾರೆ ಅವರಿಗೆ ತಿಂಗಳಿಗೆ ೮೦೦ ರೂಪಾಯಿಯಂತೆ ಸಂಭಾವನೆಯನ್ನು ಕೊಡುತ್ತಿದ್ದೀರಿ. ಅವರು ಸಾಯಂಕಾಲದ ಹೊತ್ತು ಸರಿಯಾಗಿ ಬಂದು ಪಾಠವನ್ನು ಮಾಡುವುದಿಲ್ಲ. ಇದರಿಂದಾಗಿ ಹರಿಜನಗಿರಿಜನ ಮಕ್ಕಳ ಹಾಸ್ಟೆಲ್‌ಗಳಲ್ಲಿನ ವಿದ್ಯಾರ್ಥಿಗಳ ರಿಸಲ್ಟ್ ಚೆನ್ನಾಗಿ ಬರುತ್ತಿಲ್ಲ. ಒಳ್ಳೆಯ ರಿಸಲ್ಟ್ ಬರುವಂತೆ ಮಾಡಬೇಕು ಈ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ಒಬ್ಬ ಟ್ಯೂಟರ್‌ನ್ನು ಇಟ್ಟರೆ ಅವನ್ನು ಅಲ್ಲೇ ಇದ್ದು ಆ ಮಕ್ಕಳಿಗೆ ಪಾಠವನ್ನು ಹೇಳಿಕೊಡಲು ಅನುಕೂಲವಾಗುತ್ತದೆ, ಜೊತೆಗೆ ಒಳ್ಳೆಯ ಫಲಿತಾಂಶ ಕೂಡ ಬರುತ್ತದೆ ಈ ರೀತಿ ಮಾಡುತ್ತೀರಾ ?

ಶ್ರೀ ಬಿ. ಶಿವಣ್ಣ.—ಮಾನ್ಯ ಉಪಾಧ್ಯಕ್ಷಿಣಿಯವರೆ. ಐ.ಎ.ಎಸ್.ಗೆ ಹೋಗುವಂಥ ವಿದ್ಯಾರ್ಥಿಗಳಿಗೆ ಬೆಂಗಳೂರಿನಲ್ಲಿ ಇತ್ತೀಚೆಗೆ ಟ್ಯೂಷನ್ ವ್ಯವಸ್ಥೆ ಮಾಡಿದ್ದೇವೆ. ಮತ್ತೆ ಮಾನ್ಯ ಸದಸ್ಯೆಯವರು ಪ್ರಸ್ತಾಪ ಮಾಡಿದಂಥ ಇತರ ವಿಚಾರಗಳ ಬಗ್ಗೆ ಅವರ ಜೊತೆ ನಾನು ಚರ್ಚೆ ಮಾಡುತ್ತೇನೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಉಪಾಧ್ಯಕ್ಷಿಣಿಯವರೆ......

ಉಪಾಧ್ಯಕ್ಷರು.—ಮೊದಲು ಆ ಕಡೆಯವರದ್ದು ಆಗಲಿ, ಅನಂತರ ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಪಿ. ಎಸ್. ರಾಣೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಗಂಗಾ ಕಲ್ಯಾಣ ಕಾರ್ಯಕ್ರಮದ ಬಗ್ಗೆ ೫ ವರ್ಷದ ವರೆಗೂ ಸರ್ಕಾರವೇ ಮೇನ್‌ಟೆನೆನ್ಸ್ ಮಾಡಬೇಕಾಗುತ್ತದೆಂದು ಸರ್‌ಕ್ಯುಲರ್ ಹೊರಡಿಸಿದ್ದೇವೆಂದು ಹೇಳಿದರು. ಐದು ವರ್ಷಗಳಾದ ನಂತರ ಅದನ್ನು ಯಾರು ಮಾಡುತ್ತಾರೆಂಬುದನ್ನು ಸ್ಪಷ್ಟಪಡಿಸಬೇಕು. ಐದು ವರ್ಷಗಳ ನಂತರವೂ ಬೇರೆ ನೀರಾವರಿ ಯೋಜನೆಗಳನ್ನು ಸರ್ಕಾರದವರೇ ನಿರ್ವಹಣೆ ಮಾಡಿದಂತೆ ಇದನ್ನು ಸಹ ಮಾಡಬೇಕು ಆ ರೀತಿ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಎರಡನೆಯದಾಗಿ ಐ.ಸಿ.ಡಿ.ಎಸ್. ಪ್ರೋಗ್ರಾಮ್‌ಗಳ ಬಗ್ಗೆ ಕೆಲಸಗಳು ತೃಪ್ತಿಕರವಾಗಿ ಕೆಲಸ ಆಗಿಲ್ಲವೆಂದು ಎಲ್ಲ ಮಾನ್ಯ ಸದಸ್ಯರು ದೂರು ಕೊಟ್ಟಿದ್ದಾರೆ ಸಾಧ್ಯವಾದಷ್ಟು ಕಡೆ ವಾಲೆಂಟರಿ ಆರ್ಗನೈಸ್‌ಗೆ ಐ.ಸಿ.ಡಿ.ಎಸ್. ಪ್ರೋಗ್ರಾಮ್ ನಿರ್ವಹಣೆ ಮಾಡಲಿಕ್ಕೆ ಕೊಡಬೇಕೆಂದು ಕೇಂದ್ರ ಸರ್ಕಾರ ಒಂದು ನಿರ್ಣಯ ತೆಗೆದುಕೊಂಡಿದೆ. ಇಂಥ ಯಾವುದೇ ಸಂಸ್ಥೆಗಳು ಮುಂದೆ ಬಂದರೆ ಅವರಿಗೆ

ನಿರ್ವಹಣೆಯ ಜವಾಬ್ದಾರಿಯನ್ನು ಕೊಡಬೇಕೆಂದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕೇಳಿದೆ. ಈಗಾಗಲೇ ನಿರ್ದೇಶಕರು ರಾಜ್ಯದಲ್ಲಿರತಕ್ಕಂಥ ವಾಲೆಂಟರಿ ಆರ್ಗನೈಸೇಷನ್‌ಗಳ ಸಭೆ ಕರೆದು ಅವರ ಒಪ್ಪಿಗೆ ಪಡೆದುಕೊಂಡು ಸರ್ಕಾರದ ಮುಂದೆ ಆ ಒಂದು ಪ್ರಪೋಸಲ್ಸ್ ಇಟ್ಟಿದ್ದಾರೆ. ಅದರ ಬಗ್ಗೆ ಯಾವ ನಿರ್ಣಯ ತೆಗೆದುಕೊಂಡಿದ್ದೀರೆಂಬುದನ್ನು ಹೇಳಬೇಕು.

ಇನ್ನು ಫಿಸಿಕಲಿ ಹ್ಯಾಂಡಿಕ್ಯಾಪ್ ಡೆವಲಪ್‌ಮೆಂಟ್ ಬಗ್ಗೆ ಒಂದು ನಿರ್ದೇಶನಾಲಯವನ್ನು ಮಾಡಿದರು. ಇಲ್ಲಿ ಅಂಗವಿಕಲರ ಕ್ಷೇಮಾಭ್ಯುದಯದ ಬಗ್ಗೆ ಅನೇಕ ಯೋಜನೆಗಳನ್ನು ತೆಗೆದು ಕೊಂಡಿದ್ದೇವೆಂದು ಹೇಳಿದ್ದಾರೆ. ನಾನು ಕೇಳುವುದು ಸಿಯೋಲ್ ಒಲಂಪಿಕ್‌ನಲ್ಲಿ ಅಂಗವಿಕಲರ ಸ್ಪರ್ಧೆಯಲ್ಲಿ ನಮ್ಮ ರಾಜ್ಯದ ಕುಮಾರಿ ಮಾಲತಿಹೊಳ್ಳ ಎಂಬವರು ಪ್ರಥಮ ಸ್ಥಾನವನ್ನು ಪಡೆದಿದ್ದಾರೆ ಅವರಿಗೆ ಹೋಗಿಬರಲಿಕ್ಕೆ ಆದ ವೆಚ್ಚವನ್ನು ಸರ್ಕಾರದವರು ಇಲ್ಲಿಯವರೆಗೂ ಕೊಟ್ಟಿಲ್ಲ. ಅವರು ಇನ್ನಿತರ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸಲು ಸರ್ಕಾರದವರು ಯಾವ ಒಂದು ವ್ಯವಸ್ಥೆಯನ್ನು ಮಾಡಿಕೊಟ್ಟಿಲ್ಲ. ನಮ್ಮ ರಾಜ್ಯಕ್ಕೆ ಕೀರ್ತಿಯನ್ನು ತಂದುಕೊಟ್ಟ ಒಬ್ಬ ಅಂಗವಿಕಲಕ್ರೀಡಾ ಸ್ಪರ್ಧಿಯ ಬಗ್ಗೆ ಈ ರೀತಿಯಾದ ಒಂದು ಮನೋಭಾವನೆ ತಮಗೆ ಇದ್ದರೆ ಇನ್ನು ಯಾವರೀತಿ ಅಂಗವಿಕಲರಿಗೆ ಉತ್ತೇಜನವನ್ನು ಕೊಡುತ್ತೀರಿ ಎನ್ನುವ ಬಗ್ಗೆ ತಿಳಿಸಬೇಕು ?

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ಮೈನ್ಸ್ ಅಂಡ್ ಜೀಯಾಲಜಿ ಡಿಪಾರ್ಟ್‌ಮೆಂಟ್ ಬಗ್ಗೆ ನಾನು ಹೇಳಿದ್ದೇನೆಂದರೆ, ಮಿನರಲ್ ಮೈನ್ಸ್ ನಮ್ಮ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿದೆ, ಅದನ್ನು ಲೀಸ್ ಕೊಟ್ಟ ಜಾಗದಲ್ಲಿ ಮಾತ್ರ ತೆಗೆಯದೆ ಬೇರೆ ಕಡೆಗಳಲ್ಲಿ ಸಹ ತೆಗೆದು ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಅದನ್ನು ತಡೆಹಿಡಿಯಲಿಕ್ಕೆ ಆಯಾ ಜಿಲ್ಲೆಯಲ್ಲಿರುವಂಥ ಸೀನಿಯರ್ ಜಿಯಾಲಜಿಸ್ಟ್ ಹುದ್ದೆಯನ್ನು ಅಪ್‌ಗ್ರೇಡ್ ಮಾಡಿ ಡೆಪ್ಯೂಟಿ ಡೈರೆಕ್ಟರ್ ಹುದ್ದೆಯನ್ನು ನಿರ್ಮಾಣ ಮಾಡುವುದರ ಜೊತೆಗೆ ಇನ್ನು ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ಬರುವಂತೆ ಏನಾದರೂ ನಿರ್ಧಾರವನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ.—ಗಂಗಾಕಲ್ಯಾಣದ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಐದು ವರ್ಷಕ್ಕಿಂತ ಹೆಚ್ಚು ಮಾಡಲಿಕ್ಕೆ ಬರುವುದಿಲ್ಲ. ಎರಡನೆಯದಾಗಿ ಐ.ಸಿ.ಡಿ.ಎಸ್. ಪ್ರೋಗ್ರಾಮ್ ಅನ್ನು ನಿರ್ವಹಣೆ ಮಾಡಲಿಕ್ಕೆ ವಾಲೆಂಟರಿ ಆರ್ಗನೈಸೇಷನ್ಸ್ ಅವರು ಮುಂದೆ ಬಂದರೆ ನಾವು ಖಂಡಿತವಾಗಿ ಪ್ರೋತ್ಸಾಹ ಕೊಡುತ್ತೇವೆ. ಮೂರನೆಯದಾಗಿ ಅಂಗವಿಕಲರ ಬಗ್ಗೆ ಹೇಳಿದರು ಆದರೆ ಈ ಬಗ್ಗೆ ನನಗೆ ಅಪ್ಲಿಕೇಷನ್ಸ್ ಬಂದಿಲ್ಲ.

ಶ್ರೀ ಪಿ. ಎಸ್. ರಾಣೆ.—ಬೇಕಾದಷ್ಟು ಬಂದಿದೆ. ಬೇಕಾದಷ್ಟು ಸಲ ಮನವಿ ಮಾಡಿ ಕೊಂಡಿದ್ದಾರೆ.

ಅಧ್ಯಕ್ಷರು.—ಅಂಥವರು ಅಪ್ಲಿಕೇಷನ್ ಹಾಕಲೇ ಬಾರದು. ತಾವೇ ಅವರನ್ನು ಗುರುತಿಸ ಬೇಕು.

ಶ್ರೀ ಬಿ. ಶಿವಣ್ಣ.—ಇದು ತಮ್ಮ ಸಲಹೆ ಅದನ್ನು ಒಪ್ಪುತ್ತೇನೆ ಇನ್ನು ಮೈನ್ಸ್‌ಅಂಡ್ ಜಿಯಾಲಜಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸೀನಿಯರ್ ಜಿಯಾಲಜಿಸ್ಟ್ ಹುದ್ದೆಯನ್ನು ಅಪ್‌ಗ್ರೇಡ್ ಮಾಡುವ ಬಗ್ಗೆ ಯಾವರೀತಿ ಕ್ರಮ ತೆಗೆದುಕೊಳ್ಳಬೇಕು ಮತ್ತು ಲೀಸ್ ಯಾವರೀತಿ ಕೊಡಬೇಕೆಂಬ ಬಗ್ಗೆ ರೂಲ್ಸ್ ನೋಡಿ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಅಂಗವಿಕಲರ ವೇತನ ಮತ್ತು ವೃದ್ಧಾಪ್ಯ ವೇತನ ಕೊಡುವ ಕಾರ್ಯಕ್ರಮ ಕಳೆದ ೪-೫ ತಿಂಗಳುಗಳಿಂದ ನಮ್ಮ ಜಿಲ್ಲೆಯಲ್ಲಿ ಹಾಗೂ ನನ್ನ ಕ್ಷೇತ್ರದಲ್ಲಿ ನಿಂತು ಹೋಗಿದೆ. ಸರಿಯಾಗಿ ಬಟವಾಡೆ ಆಗುತ್ತಿಲ್ಲ, ಕಾರಣ ಕೇಳಿದರೆ ಸರಿಯಾದ ಉತ್ತರ ಸಿಗುತ್ತಿಲ್ಲ ನಾವು ಪ್ರತಿ ತಿಂಗಳೂ ಜನ ಸಂಪರ್ಕ ಸಭೆ ನಡೆಸಿ ಇಂತಹವರನ್ನು ಗುರುತಿಸಿ ವೇತನ ಕೊಡುವ ಕೆಲಸ ಮಾಡುತ್ತಿದ್ದೆವು. ಈಗ ನಿಂತಿದೆ ಇನ್ನು ಮುಂದೆ ಇಂತಹ ಜನಸಂಪರ್ಕ ಸಭೆ ನಡೆಸಿ ಈ ವೇತನಗಳನ್ನು ಕೊಡುತ್ತೀರಾ ಎಂಬುದನ್ನು ತಿಳಿಸಬೇಕು.

ಎರಡನೆಯದಾಗಿ, ನವ ಮಂಗಳೂರು ಬಂದರಿನಲ್ಲಿ ಎಷ್ಟೋ ಎಕರೆ ಭೂಮಿಯಲ್ಲಿ ಕರೀ ಕಲ್ಲುಗಳು ಬಿದ್ದಿವೆ. ಅವು ಅಲ್ಲೇ ಇರುವಂಥವೋ ಅಥವಾ ಹೊರಗೆ ಹೋಗುತ್ತವೋ ? ಅವುಗಳಿಂದ ಸರ್ಕಾರಕ್ಕೆ ಹಣ ಏನಾದರೂ ಬರುತ್ತದೋ ಎಂಬುದನ್ನು ತಿಳಿಸಬೇಕು ಇದೇ ವಿಚಾರದಲ್ಲಿ ಇವತ್ತು ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸದನದಲ್ಲಿ ಧರಣಿ ಕುಳಿತಿದ್ದಾರೆ. ಅವರು

ಸುಮಾರು ಈ ವಿಚಾರದ ಬಗ್ಗೆ ಖಾಸಗಿ ನಿರ್ಣಯ ಮಾಂಡಿಸಿ ೭-೮ ಗಂಟೆಗಳ ಕಾಲ ಮಾತನಾಡಿದ್ದಾರೆ. ನಿನ್ನೆ ಕೂಡ ಮಾತನಾಡಿದ್ದಾರೆ. ಹೀಗಿರುವಾಗ ಅವರು ಈ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ ಆದ್ದರಿಂದ ಅವರು ಧರಣೆ ನಿಲ್ಲಿಸಿದರೆ ಒಳ್ಳೆಯದು.

ಶ್ರೀ ಬಿ. ಶಿವಣ್ಣ.—ಫಿಸಿಕಲಿ ಹ್ಯಾಂಡಿಕ್ಯಾಪ್‌ಡಿಗೆ ಪೆನ್‌ಷನ್‌ಗಾಗಿ ರೆವಿನ್ಯೂ ಇಲಾಖೆಗೆ ನಾವು ಹಣ ಕೊಡುತ್ತೇವೆ, ರೆವಿನ್ಯೂ ಇಲಾಖೆಯವರು ಹಂಚುತ್ತಾರೆ. ಆದರೆ ಅವರಿಗೆ ಏಕೆ ಮುಟ್ಟುತ್ತಿಲ್ಲವೆಂಬುದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ ಓಲ್ಡ್ ಏಜ್ ಪೆನ್‌ಷನ್ ಆಗಲಿ, ವಿಡೋಸ್ ಪೆನ್‌ಷನ್ ಆಗಲ್ಲಿ ಖಾತೆ ನಮ್ಮದೇ ಇರುತ್ತದೆ. ರೆವಿನ್ಯೂ ಇಲಾಖೆಯವರು ದುಡ್ಡು ಹಂಚುತ್ತಾರೆ. ಅವರು ಏತಕ್ಕೆ ಸರಿಯಾಗಿ ಹಂಚುತ್ತಿಲ್ಲವೆಂದು ಬರೆದು ವಿಚಾರಣೆ ಮಾಡಿಸುತ್ತೇನೆ. ಮಂಗಳೂರು ಪೋರ್ಟ್‌ನಲ್ಲಿದ್ದ ಗ್ರಾನೈಟ್ ಬಗ್ಗೆ ಹೇಳಿದರು. ಅದರಲ್ಲಿ ಕೆಲವು ಎಕ್ಸ್‌ಪೋರ್ಟ್ ಆಗತಕ್ಕದ್ದು ಇದೆ ಕೆಲವು ಎಕ್ಸ್‌ಪೋರ್ಟ್ ಆಗಲಿಕ್ಕೆ ಬರುವುದಿಲ್ಲ, ಅಂಥದ್ದು ಮಂಗಳೂರಿನಲ್ಲೇ ಬೀಳುತ್ತದೆ. ಕೆಲವಕ್ಕೆ ವ್ಯಾಲ್ಯು ಇರುವುದಿಲ್ಲ, ಅಂಥದ್ದು ಹಾಗೆ ಅಲ್ಲಿಯೇ ಬಿದ್ದಿರುತ್ತವೆ.

ಶ್ರೀ ಜಿ. ರಾಜುಗೌಡ.—ಬ್ಲಾಕ್ ಗ್ರಾನೈಟ್ ಎಂದರೆ ಏನು ಹೇಳುತ್ತಿದ್ದಾರೆ. ಅದನ್ನು ವಾಟಾಳ್ ನಾಗರಾಜ್ ಅವರು ಸರ್ಕಾರದ ಸೊತ್ತು ಎನ್ನುತ್ತಿದ್ದಾರೆ. ಅವರು ಹೇಳಿದಂತೆ ಅದನ್ನು ಸರ್ಕಾರದ ಸೊತ್ತು ಎಂದು ತೀರ್ಮಾನ ಮಾಡುವುದಕ್ಕಾಗುವುದಿಲ್ಲವೆ ? ಆಗ ಅದಕ್ಕೆ ಸರ್ಕಾರದ ಒಡೆತನ ಬರುತ್ತದೆ, ಆ ರೀತಿ ಬಂದ ಮೇಲೆ ಏನು ಮಾಡಬೇಕೆಂದು ವಿಚಾರ ಮಾಡಬಹುದು. ದಯಮಾಡಿ ಆ ಬಗ್ಗೆ ವಿಚಾರ ಮಾಡಿ ಇದನ್ನು ಖನಿಜ ಸಂಪತ್ತು ಎಂದು ಟ್ರೀಟ್ ಮಾಡುತ್ತೀರಾ ?

ಶ್ರೀ ಬಿ. ಶಿವಣ್ಣ.—ನನ್ನ ಭಾಷಣದಲ್ಲಿ ಈ ಬಗ್ಗೆ ಸಂಪೂರ್ಣವಾಗಿ ಹೇಳಿದ್ದೇನೆ. ಆದ್ದರಿಂದ ಅಪರ ಸಲಹೆ ಬಗ್ಗೆ ಈಗ ಏನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀಮತಿ ಚಂದ್ರಪ್ರಭಾ ಅರಸ್.—ಪ್ರಕೃತಿಯಲ್ಲಿರತಕ್ಕ ನಿಸರ್ಗದ ಸಂಪತ್ತು ಬಗ್ಗೆ ಸಚಿವರು ಉತ್ತರಿಸುತ್ತಾ ಹೇಳಿದರು. ಚಿನ್ನ ಇನ್ನೂ ಅನೇಕ ಉಪಯುಕ್ತವಾದ ಲೋಹಗಳು ಪ್ರಕೃತಿದತ್ತವಾಗಿ ನಿಸರ್ಗದತ್ತವಾಗಿ ನಮಗೆ ಸಿಕ್ಕುತ್ತಿವೆ, ಮನುಷ್ಯ ಅವುಗಳನ್ನು ಯಾವ ರೀತಿ ಎಲ್ಲಿಯವರೆಗೆ ನಾಗರೀಕತೆಗೆ ಮತ್ತು ಕೈಗಾರಿಕರಣಕ್ಕೆ ಉಪಯೋಗ ಮಾಡಿಕೊಳ್ಳಬಹುದು, ಎಂಬುದನ್ನು ಅರಿತುಕೊಂಡು ಅದರಂತೆ ಉಪಯೋಗ ಮಾಡುತ್ತಿದ್ದೇವೆ. ಆದರೆ ಯಾವ ಭಾಗದಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂಬುದು ಸ್ಟೇಟ್ ಪಾಲಿಸಿ ಮ್ಯಾಟರ್ ಅದನ್ನು ಎಕ್ಸ್‌ಪೋರ್ಟ್ ಮಾಡಿದರೆ ಸರ್ಕಾರಕ್ಕೆ ಆದಾಯ ಬರುತ್ತದೆ ನಿಜ. ಕೆಲವು ಕಡೆ ನೋಡುತ್ತಿದ್ದೇವೆ. ಪವಿತ್ರವಾದ ಯಾತ್ರಾಸ್ಥಳ ಮತ್ತು ಬೆಟ್ಟಗಳ ಸುತ್ತ ಕಲ್ಲುಗಳು, ವಿಗ್ರಹಗಳು ಇರುತ್ತವೆ. ಉದಾಹರಣೆ ಕೊಳ್ಳೇಗಾಲದ ಮಹದೇಶ್ವರನ ಬೆಟ್ಟ ಹಾಗೂ ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಗೊಮ್ಮಟೇಶ್ವರನ ವಿಗ್ರಹ ವಿಶ್ವ ವಿಖ್ಯಾತಿಯನ್ನು ಪಡೆದಿದೆ. ಅದು ೫೮ ಅಡಿ ಎತ್ತರವಿದೆ. ಅದು ಒಂದೇ ಕಲ್ಲಿನಿಂದ ಕೆತ್ತಿರುವುದಾಗಿದೆ, ಅಂಥ ಕಡೆ ಕಲ್ಲನ್ನು ಸಾಗಿಸುವುದಕ್ಕೆ ಅವಕಾಶ ಕೊಟ್ಟಾಗ ಅಂತಹ ವಿಗ್ರಹಗಳು ಕೆಲವಾರು ವರ್ಷಗಳಲ್ಲಿ ಧೂಳಿಪಟ ಆಗುವ ಸಂಭವವಿದೆ. ಸುಮಾರು ಸಹಸ್ರಾರು ವರ್ಷಗಳಿಂದ ಪ್ರಕೃತಿ ಸಂಪತ್ತನ್ನು ವಿಶ್ವವಿಖ್ಯಾತ ವಿಗ್ರಹಗಳನ್ನು ಜನರು ಉಳಿಸಿಕೊಂಡು ಬಂದಿದ್ದಾರೆ. ಅಂತಹ ಪ್ರಖ್ಯಾತ ರೂವಾರಿಗಳು, ವಿಜ್ಞಾನಿಗಳು ಹುಟ್ಟಿದಂತಹ ಈ ನಾಡಿನಲ್ಲಿ ಪ್ರಕೃತಿ ಸಂಪತ್ತನ್ನು ಅಭಿವೃದ್ಧಿ ಮಾಡಬೇಕು ನಿಜ, ಆದರೆ ಎಲ್ಲಿ ಯಾವ ಮಟ್ಟದಲ್ಲಿ ಎಂದು ನಿಖರವಾಗಿ ಸರ್ಕಾರ ನಿರ್ಧಾರ ಮಾಡಬೇಕಾಗುತ್ತದೆ. ಈ ಸ್ಟೇಟ್ ಪಾಲಿಸಿ ಮ್ಯಾಟರನ್ನು ಪುನರ್ ವಿಮರ್ಶೆ ಮಾಡಿ ಸೂಕ್ತ ಬದಲಾವಣೆ ತರಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಶ್ರೀ ಎಂ. ಶಿವಣ್ಣ.—ರಿಲಿಜಿಯಸ್ ಪ್ಲೇಸ್ ಇದ್ದ ಕಡೆ ಮತ್ತು ಮಾನ್ಯುಮೆಂಟಲ್ಸ್ ಇದ್ದ ಕಡೆ ಕ್ವಾರಿಯನ್ನು ನಾವು ಲೀಸ್‌ಗೆ ಕೊಡುವುದಿಲ್ಲ. ಖಾಸಗಿಯವರು ಅಂತಹ ಕೆಲಸ ಮಾಡಬಾರದು. ಎಲ್ಲಿಯಾದರೂ ದುರುಪಯೋಗ ಮಾಡಿದ ದೂರುಗಳು ಇದ್ದರೆ ಕೊಡಿ. ವಿಚಾರಣೆ ಮಾಡಿಸುತ್ತೇನೆ, ೭೦ ಪರ್ಸೆಂಟ್ ಮೈನ್ಸ್ ಫಾರೆಸ್ಟ್ ಲ್ಯಾಂಡ್‌ನಲ್ಲೂ, ೩೫ ಪರ್ಸೆಂಟ್ ಪಟ್ಟಾ ಲ್ಯಾಂಡ್‌ನಲ್ಲೂ ಹಾಗೂ ೫ ರಿಂದ ಹತ್ತು ಪರ್ಸೆಂಟ್ ಗವರ್ನಮೆಂಟ್ ಲ್ಯಾಂಡ್‌ನಲ್ಲೂ ಈ ಕಲ್ಲುಗಣಿಗಳು ಇವೆ, ಹೀಗಾಗಿ ಖಾಸಗಿಯವರ ಮೇಲೆ ನಮ್ಮ ಕಂಟ್ರೋಲ್ ಇತ್ತೀಚಿನ ಹೈಕೋರ್ಟ್ ಜಡ್ಜ್‌ಮೆಂಟ್ ಮತ್ತು ಸ್ಟೇ ಆರ್ಡರ್‌ನಿಂದ ಇಲ್ಲ. ಇದೇ ಕಾರಣದಿಂದ ಕಳೆದ ಹತ್ತು ವರ್ಷಗಳಿಂದ ಇದನ್ನು ಲೂಟಿ ಮಾಡಿದ್ದಾರೆಂದು ನಮ್ಮ ಅಭಿಪ್ರಾಯ ಆಗಿದೆ. ಮುಂದೆ ನಮ್ಮ ಲಿಬರಲೈಜೇಷನ್ ಪಾಲಿಸಿ ಬಂದ ಮೇಲೆ ನಾವು ರೆಸ್ಟ್ರಿಕ್ಷನ್ಸ್ ಮಾಡುತ್ತೇವೆ. ಅದು ಸರ್ಕಾರದ ಕಂಟ್ರೋಲಿಗೆ ಬರಬೇಕಾಗಿದೆ, ಮುಂದೆ ಯಾವುದೇ ರೀತಿಯ ದೂರು ಇಲ್ಲದಂತೆ ನೋಡಿಕೊಳ್ಳುತ್ತೇವೆ,

ಶ್ರೀಮತಿ ದಮಯಂತಿ ಬೋರೇಗೌಡ.—ಕೇಂದ್ರ ಸರ್ಕಾರದಿಂದ ೨೫ ಐ.ಸಿ.ಡಿ.ಎಸ್. ಪ್ರಾಜೆಕ್ಟ್‌ಗಳನ್ನು ನಮ್ಮ ರಾಜ್ಯಕ್ಕೆ ಕೊಡುತ್ತಿದ್ದಾದರೆ ಅದಕ್ಕೆ ನಮ್ಮ ಸರ್ಕಾರದ ಒಪ್ಪಿಗೆ ಮತ್ತು ಅವರ ಸಹಭಾಗಿತ್ವ ಬೇಕಾಗಿದೆ. ಈ ಬಗ್ಗೆ ದಯವಿಟ್ಟು ಮಂತ್ರಿಗಳು ಉತ್ತರಿಸಬೇಕು, ಎರಡನೆಯದು, ಈ ವಾಲಂಟರಿ ಆರ್ಗನೈಸೇಷನ್‌ಗಳನ್ನು ಹೆಚ್ಚು ಹೆಚ್ಚು ಇದರಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳುತ್ತಿದ್ದೀರಿ ಆದರೆ ಮಾರ್ಚ್ ೩೧ ನೇ ತಾರೀಖಾದರೂ ಅದಕ್ಕೆ ಅನುದಾನ ರಿಲೀಸ್ ಮಾಡುವುದಿಲ್ಲ. ಇದರಿಂದ ನಮ್ಮಂಥ ಸೋಷಿಯಲ್ ವರ್ಕರ್ಸ್‌ಗೆ ತುಂಬಾ ಬೇಸರವಾಗಿದೆ. ವಾಲಂಟರಿ ಆರ್ಗನೈಸೇಷನ್‌ಗಳು ಕೆಲಸ ಮಾಡಿದರೆ ಸರ್ಕಾರಕ್ಕೆ ವೆಚ್ಚ ಕಡಿಮೆಯಾಗುತ್ತದೆ. ಆದ್ದರಿಂದ ಸಮಯಕ್ಕೆ ಸರಿಯಾಗಿ ಅನುದಾನವನ್ನು ರಿಲೀಸ್ ಮಾಡುತ್ತೀರಾ ಎಂದು ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಮಾನ್ಯ ಸಭಾಧ್ಯಕ್ಷರೆ, ೨೮ ಪ್ರಾಜೆಕ್ಟ್‌ಗಳನ್ನು ಕೇಂದ್ರದವರು ಮಂಜೂರು ಮಾಡಿ ೧೯೮೭ಕ್ಕೆ ನಮ್ಮ ಸ್ಟೇಟ್ ಗೌರ್ನಮೆಂಟ್‌ಗೆ ಕಳುಹಿಸಿದ್ದಾರೆ: ಈಗ ಅದು ಫೈನಾನ್ಸ್ ಡಿಪಾರ್ಟ್‌ಮೆಂಟ್ ಮತ್ತು ಗೌರ್ನಮೆಂಟ್‌ನ ಪರಿಶೀಲನೆಯಲ್ಲಿ ಆಗಿದೆ. ಬಹುಶಃ ಸರ್ಕಾರ ಅದನ್ನು ಒಪ್ಪಬಹುದು ಎಂದು ನನಗನ್ನಿಸುತ್ತದೆ.

ಶ್ರೀ ಕರಿಯಣ್ಣ.—ಹರಿಜನ ಗಿರಿಜನರ ಹಾಸ್ಟೆಲ್‌ಗಳಲ್ಲಿ ೧೫–೨೦ ವರ್ಷಗಳಿಂದ ಏನು ಸಂಖ್ಯೆ ಇಟ್ಟಿದ್ದರೋ ಅದನ್ನೇ ಈಗಲೂ ಇಟ್ಟಿದ್ದಾರೆ: ಅದನ್ನು ಹೆಚ್ಚಿಗೆ ಮಾಡಬೇಕೆಂದು ಹೇಳಿದ್ದೆ, ಅದರ ಬಗ್ಗೆ ಉತ್ತರ ಹೇಳಲಿಲ್ಲ, ಹಳ್ಳಿಗಳಿಂದ ಮಕ್ಕಳು ಬಂದಾಗ ಹಾಸ್ಟೆಲ್ ಸಿಗದೇ ಇದ್ದಾಗ ನಗರದಲ್ಲಿ ಪಟ್ಟಣದಲ್ಲಿ ರೂಮ್ ಮಾಡಿಕೊಂಡು ಓದುತ್ತಾರೆ. ಅವರು ಹಾಸ್ಟೆಲ್ ಹುಡುಗರಿಗಿಂತ ಕಷ್ಟಪಟ್ಟು ಓದುತ್ತಾರೆ. ಆದ್ದರಿಂದ ಅವರಿಗೂ ಹಾಸ್ಟೆಲ್‌ನಲ್ಲಿ ಕೊಡುವಂತೆ ಸ್ಕಾಲರ್‌ಷಿಪ್ ಕೊಡಬೇಕೆಂದು ಕೇಳಿದ್ದೆ. ಅದರ ಬಗ್ಗೆ ಸ್ಪಷ್ಟೀಕರಣ ಕೊಡಲಿಲ್ಲ. ಗಂಗಾ ಕಲ್ಯಾಣ ಯೋಜನೆಯನ್ನು ಹರಿಜನ ಗಿರಿಜನರಿಗೆ ವಹಾಡಿದ್ದಾರೆ. ಇದರಲ್ಲಿ ೭೫ ಪರ್ಸೆಂಟ್ ಹಣವನ್ನು ಸರ್ಕಾರ ಕೊಟ್ಟು ೨೫ ಪರ್ಸೆಂಟ್ ಸಾಲ ಪಡೆಯಬೇಕೆಂದು ಹೇಳಿದ್ದಾರೆ ಇದರಿಂದ ಯಾರಿಗೂ ಅದರ ಉಪಯೋಗ ಆಗುತ್ತಿಲ್ಲ, ಕಾರಣ ಏನೆಂದರೆ ೨೫ ಪರ್ಸೆಂಟ್ ಸಾಲವನ್ನು ಬ್ಯಾಂಕಿನವರು ಕೊಡುವುದಿಲ್ಲ. ಹೀಗಾಗಿ ಈ ಯೋಜನೆ ಪೂರ್ಣವಾಗಿ ಪ್ರಯೋಜನ ಆಗಬೇಕಾದರೆ ೧೦೦ ಕ್ಕೆ ೧೦೦ ರಷ್ಟು ಹಣವನ್ನು ಸರ್ಕಾರವೇ ಕೊಡಬೇಕು ಇದರ ಬಗ್ಗೆ ಸಹ ಮಂತ್ರಿಗಳು ಹೇಳಲಿಲ್ಲ. ಆಮೇಲೆ ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಂಡಿರುವವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೆ. ಅದರ ಬಗ್ಗೆ ಸಹ ಹೇಳಿಲ್ಲ. ಕ್ರಮ ತೆಗೆದುಕೊಳ್ಳದೇ ಹೋದರೆ ಮಾಮೂಲಿಯಾಗಿ ಅದು ಕಂಟಿನ್ಯೂ ಆಗುತ್ತದೆ. ಹಾಗೆಯೇ ವಿವಿಧ ಇಲಾಖೆಗಳಿಂದ ಹರಿಜನ ಗಿರಿಜನರಿಗೆ ಅನ್ಯಾಯವಾಗುವ ಬಗ್ಗೆ ಮತ್ತು ಅವರಿಗೆ ಒದಗತಕ್ಕ ಕಷ್ಟಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ತಮಗೆ ಅಧಿಕಾರ ಇದೆಯೇ ಅಧಿಕಾರ ಇಲ್ಲದಿದ್ದರೆ ಸರ್ಕಾರದಿಂದ ಅಧಿಕಾರ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದೆ. ಅದಕ್ಕೂ ಉತ್ತರ ಹೇಳಲಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ನಿರ್ದಿಷ್ಟವಾದ ಉತ್ತರ ಹೇಳಬೇಕು.

ಶ್ರೀ ಬಿ. ಶಿವಣ್ಣ.—ಹಾಸ್ಟೆಲ್‌ಗಳಲ್ಲಿ ಸಂಖ್ಯೆ ಹೆಚ್ಚು ಮಾಡಬೇಕು ಎಂದು ಹೇಳಿದ್ದಾರೆ, ಅಕಾಮಡೇಷನ್ ಪ್ರಾಬ್ಲಂ ಇದೆ. ಎಮರ್ಜೆನ್ಸಿಗೆ ೫–೧೦ ಸೀಟುಗಳನ್ನು ಹೆಚ್ಚು ಮಾಡಲು ಪ್ರಯತ್ನ ಮಾಡುತ್ತೇವೆ ಕ್ಯಾಸ್ಟ್ ಸರ್ಟಿಫಿಕೇಟ್ ಬಗ್ಗೆ ಹೇಳಿದ್ದಾರೆ. ನಾನು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ತಹಸೀಲ್ದಾರರು ರೆವಿನ್ಯೂ ಅಥಾರಿಟಿ ಏನಿದ್ದಾರೆ ಅವರು ಮಾತ್ರ ಕೊಡಬೇಕೆಂದಿದೆ. ಬೇರೆಯವರು ಕೊಟ್ಟ ಬಗ್ಗೆ ಕಂಪ್ಲೇಂಟ್ಸ್ ಬಂದರೆ, ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಗಂಗಾ ಕಲ್ಯಾಣ ಬಗ್ಗೆ ಹೇಳಿದ್ದೇವೆ. ೫ ವರ್ಷದವರೆಗೆ ಸರ್ಕಾರವೇ ಮೈಂಟೇನ್ ಮಾಡುತ್ತದೆ.

ಶ್ರೀ ಕರಿಯಣ್ಣ.—೨೫ ಪರ್ಸೆಂಟ್ ಹಣವನ್ನು ಅವರಿಂದ ಕೇಳದೆ ಸರ್ಕಾರವೇ ೧೦೦ ಭಾಗ ಕೊಡಿ ಎಂದು ಹೇಳುತ್ತಿದ್ದೇನೆ

ಶ್ರೀ ಬಿ. ಶಿವಣ್ಣ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಪಿ. ವೆಂಕಟೇಶ್—ರಾಷ್ಟ್ರೀಕರಣ ಮಾಡಿದಮೇಲೆ ಏನು ಕಾನೂನು ಮಾಡಿದ್ದಾರೆ ಅದನ್ನು ತೆಗೆಯುವುದಕ್ಕಾಗುವುದಿಲ್ಲ ಏಕೆಂದರೆ ಸರ್ಕಾರದ ಬೊಕ್ಕಸಕ್ಕೆ ಅದರಿಂದ ೨೦ ಕೋಟಿ ರೂಪಾಯಿ ಹಣ ಬರುತ್ತಿದೆ ಎಂದು ಹೇಳಿದ್ದಾರೆ. ಇಂಡಸ್ಟ್ರೀಸ್‌ಗೆ ಕೊಟ್ಟರೆ ಪ್ರತಿ ವರ್ಷ ೨೦ ಕೋಟಿ ರೂಪಾಯಿ ಬರುತ್ತದೆಂದು ಗ್ಯಾರಂಟಿ ಕೊಡುತ್ತೀರಾ. ೨೦ ಕೋಟಿ ರೂಪಾಯಿ ಬರುತ್ತದೆಂದು ಏನು ನೋಟಿಫಿಕೇಷನ್ ಇಷ್ಯೂ ಮಾಡಿದ್ದೀರಿ, ಅದು ಬರದಿದ್ದರೆ ತಾವು ಏನು ಮಾಡುತ್ತೀರಿ ? ಫ್ಯಾಕ್ಟರಿ ಇಟ್ಟವರಿಗೆ ಪ್ರಿಯಾರಿಟಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಅದಕ್ಕೆ ಪವರ್ ಯಾರು ಕೊಡುತ್ತಾರೆ ?

ಶ್ರೀ ಬಿ. ಶಿವಣ್ಣ.—ಆದಾಯ ಲೆಕ್ಕ ಮಾಡಿ ೨೧ ಕೋಟಿ ರೂಪಾಯಿ ಬರುತ್ತದೆಂದು ಹೇಳಿದ್ದೇವೆ. ಎಲೆಕ್ಟ್ರಿಸಿಟಿ ಬಗ್ಗೆ ಹೇಳುತ್ತಿದ್ದಾರೆ. ನಾವು ಇಂತಹವರಿಗೆ ವಿದ್ಯುತ್ ಕೊಡಬೇಕೆಂದು ವಿದ್ಯುತ್ ಮಂಡಳಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

ಶ್ರೀ ಎಂ. ಪಿ. ವೆಂಕಟೇಶ್.—ಈ ಫ್ಯಾಕ್ಟರಿಯವರಿಗೆ ಪವರ್ ಕೊಟ್ಟೇಕೊಡುತ್ತೇವೆಂದು ನೀವು ಭರವಸೆ ಕೊಡಬೇಕು. ಏಕೆಂದರೆ ೩೦ ಲಕ್ಷ ರೂಪಾಯಿ ಫ್ಯಾಕ್ಟರಿ ಪ್ರಾರಂಭ ಮಾಡಲು ಖರ್ಚು ಆಗುತ್ತದೆ. ಅದಕ್ಕೆ ಪವರ್ ಬೇಕಾಗುತ್ತದೆ, ವಾಟರ್ ಬೇಕಾಗುತ್ತದೆ. ಸರ್ಕಾರ ಪವರ್ ಕೊಡುವ ಬಗ್ಗೆ ಭರವಸೆ ಕೊಡಬೇಕಲ್ಲ. ಸರ್ಕಾರ ಅದಕ್ಕೆ ಬದ್ಧರಾಗಿ ಹೇಳಬೇಕಲ್ಲ. ಪರಿಶೀಲನೆ ಎಂದರೆ ಹೇಗೆ ?

ಶ್ರೀ ಬಿ. ಶಿವಣ್ಣ.—ಕಾರ್ಖಾನೆ ಪ್ರಾರಂಭ ಮಾಡುವವರಿಗೆ ಎಲೆಕ್ಟ್ರಿಸಿಟಿಯನ್ನು ಕೊಡುವಂತೆ ಇವರಿಗೆ ಕೊಡಬೇಕಾಗುತ್ತದೆ. ಈ ಕಾರ್ಖಾನೆಗಳನ್ನು ಪ್ರಾರಂಭ ಮಾಡುವವರಿಗೆ ಏನಾದರೂ ತೊಂದರೆ ಇದ್ದರೆ, ಆ ಬಗ್ಗೆ ವಿದ್ಯುತ್ ಮಂಡಳಿಯವರಿಗೆ ಸೂಕ್ತ ತಿಳುವಳಿಕೆಯನ್ನು ನೀಡುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್.—ವಿದ್ಯಾರ್ಥಿ ವೇತನವನ್ನು ಏನು ೧೫೦ ರೂಪಾಯಿಗಳನ್ನು ಕೊಡುತ್ತಿದ್ದೀರಿ ಅದು ಸಾಕಾಗುವುದಿಲ್ಲವೆಂಬುದು ಎಲ್ಲ ಸದಸ್ಯರ ಅಭಿಪ್ರಾಯ. ಅದನ್ನು ೩೦೦ ರೂಪಾಯಿಗಳಿಗೆ ಹೆಚ್ಚು ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದೆವು. ಅದರ ಬಗ್ಗೆ ಏನನ್ನೂ ಹೇಳಲಿಲ್ಲ. ಇದರಿಂದ ೧೩ ಕೋಟಿ ರೂಪಾಯಿಗಳು ಖರ್ಚು ಬರುತ್ತದೆ. ಇದು ಅಷ್ಟೇನೂ ಜಾಸ್ತಿಯಾಗುವುದಿಲ್ಲ.

ಶ್ರೀ ಬಿ. ಶಿವಣ್ಣ.—ಸದ್ಯಕ್ಕೆ ಆಗುವುದಿಲ್ಲವೆಂದು ಮೊದಲೇ ಹೇಳಿದ್ದೇನೆ.

ಶ್ರೀ ಹರ್ಷಕುಮಾರ ಗೌಡ.—ರಾಜ್ಯಾದ್ಯಂತ ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ನಡೆಸುವಂತಹ ಸಂದರ್ಭದಲ್ಲಿ ಹಿಂದಿನ ಸರ್ಕಾರ ಈ ಹರಿಜನ–ಗಿರಿಜನ ವಿದ್ಯಾರ್ಥಿಗಳಲ್ಲಿ ಯಾರು ಸ್ನಾತಕೋತ್ತರ ತರಗತಿಯಲ್ಲಿ ಅತ್ಯಂತ ಹೆಚ್ಚಿನ ಅಂಕಗಳನ್ನು ತೆಗೆದುಕೊಂಡಿರುತ್ತಾರೋ ಅಂತಹ ವಿದ್ಯಾರ್ಥಿಗಳಿಗೆ ಸರ್ಕಾರದ ಕೆಲಸವನ್ನು ಆದ್ಯತೆಯ ಮೇಲೆ ಕೊಡುತ್ತೇವೆಂದು ಪ್ರಕಟಣೆ ಹೊರಡಿಸಿದ್ದರು ಮತ್ತು ಪ್ರಚಾರ ತೆಗೆದುಕೊಂಡಿದ್ದರು. ಅದೇ ರೀತಿ ನಮ್ಮ ಸರ್ಕಾರವೂ ಕೂಡ ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಏನಾಗಿದೆ ? ಯಾವ ಸ್ಥಿತಿಗತಿಯಲ್ಲಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳಿಂದ ತಿಳಿಯಬಯಸುತ್ತೇನೆ, ಜೊತೆಗೆ ಗಣಿ ಇಲಾಖೆಯಲ್ಲಿ ಹೊಸದಾಗಿ ಕಾನೂನು ತಂದಿದ್ದೀರಿ. ಇದರಲ್ಲಿ ಬಂಡವಾಳಶಾಹಿಗಳನ್ನು ಬಿಟ್ಟು ಈ ರಾಜ್ಯದ ಶ್ರೀ ಸಾಮಾನ್ಯರೂ ಸಹ ಇದರಲ್ಲಿ ಪಾಲುಗೊಳ್ಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ಈ ಸದನಕ್ಕೆ ಮನವರಿಕೆ ಮಾಡಿಕೊಡಬೇಕೆಂದು ತಮ್ಮ ಮೂಲಕ ಅವರನ್ನು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಮೆರಿಟ್‌ನಲ್ಲಿ ಅಥವಾ ಫಸ್ಟ್‌ಕ್ಲಾಸ್‌ನಲ್ಲಿ ಬಂದಂತಹ ಹರಿಜನ–ಗಿರಿಜನರಿಗೆ ಉದ್ಯೋಗವನ್ನು ಕೊಡಬೇಕೆಂಬ ನಿರ್ಣಯ ಸಚಿವ ಸಂಪುಟದ ಮುಂದಿದೆ. ಸರ್ಕಾರದ ಮಟ್ಟದಲ್ಲಿ ಆ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಗಣಿ ಇಲಾಖೆಯ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಲೋಕಲ್ ಪಟ್ಟಾದವರು ಯಾರ್ಯಾರು ಇದ್ದಾರೆ, ಅವರು ಮತ್ತು ಬೇರೆಯವರು ಕಾರ್ಖಾನೆಗಳನ್ನು ಮಾಡುವುದಕ್ಕೆ ಮುಂದೆ ಬಂದರೆ ಅವರಿಗೆ ಸಹ ನಾವು ಅನುಮತಿ ಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ.—೩ನೇ ಹಿಂದುಳಿದ ವರ್ಗದ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಆ ವರದಿಯ ಬಗ್ಗೆ ಸಾರ್ವಜನಿಕವಾಗಿ ಕೆಲವು ವರ್ಗಗಳು ಇದಕ್ಕೆ ಪ್ರತಿರೋಧವನ್ನು ವ್ಯಕ್ತಪಡಿಸಿವೆ ಆ ವರದಿಯನ್ನು ಸರ್ಕಾರ ಒಪ್ಪಿಕೊಳ್ಳುತ್ತದೋ ಅಥವಾ ಬಿಡುತ್ತದೋ ಎನ್ನತಕ್ಕಂತಹದ್ದರ ಬಗ್ಗೆ ತಾವು ಏನೂ ಹೇಳಲಿಲ್ಲ. ಹಿಂದೆ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈ ವರದಿಯನ್ನು ಜಾರಿಗೆ ಕೊಡುತ್ತೇವೆಂದು ಈ ವರದಿಯನ್ನು ಕೊಡುವುದಕ್ಕಿಂತ ಮೊದಲು ಹೇಳಿದ್ದಾರೆ. ಈಗಲೂ ಕೂಡ ಅದನ್ನು ಜಾರಿಗೆ ಕೊಡುವುದನ್ನು ಮಾನ್ಯ ಮುಖ್ಯಮಂತ್ರಿಗಳು ಅಥವಾ ಸರ್ಕಾರ ಅದನ್ನು ಮನ್ನಣೆ ಮಾಡುತ್ತದೆಯೇ ? ಮತ್ತು ಇದು ವೈಜ್ಞಾನಿಕವಾಗಿ ಇದೆ ಎಂದು ಏನಾದರೂ ಸರ್ಕಾರ ಅಭಿಪ್ರಾಯಪಟ್ಟಿದೆಯೇ ? ಕೆಲವು ವರ್ಗಗಳನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿರತಕ್ಕಂತಹದ್ದು ಇದೆ ಎನ್ನತಕ್ಕ ಕೂಗು ಹೊರಗಡೆಯಿಂದ ಕೇಳುತ್ತಿದ್ದೇವೆ. ಇದರ ಬಗ್ಗೆ ಸರ್ಕಾರದ ನಿರ್ದಿಷ್ಟವಾದ ನಿಲುವು ಏನು ?

ಶ್ರೀ ಬಿ. ಶಿವಣ್ಣ.—ಹಿಂದುಳಿದವರ್ಗದವರ ವಿಚಾರವಾಗಿ ಹೇಳಬೇಕಾದರೆ ಮಹಾರಾಜರು ಇದ್ದ ಕಾಲದಲ್ಲಿ Miller Commitee ಅಂತ ಮಾಡಿದರು. ಅದು ತನ್ನ ವರದಿಯನ್ನು ಕೊಟ್ಟಿದೆ. ಅದರಲ್ಲಿ

except Brahmins all are backwards, ಎಂದು ಹೇಳಿದರು. ಆ ಪ್ರಕಾರ ಆ ಕಾಲಕ್ಕೆ ಮಹಾರಾಜರು ಹಿಂದುಳಿದ ಜನರಿಗೆ ಕೆಲವು ಅನುಕೂಲಗಳನ್ನು ಮಾಡಿಕೊಟ್ಟರು. ೧೯೬೦ರಲ್ಲಿ ನಾಗನಗೌಡರ ನೇತೃತ್ವದಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಒಂದು ಆಯೋಗವನ್ನು ರಚನೆ ಮಾಡಿದರು. ೧೯೬೧ರಲ್ಲಿ ಅದು ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟಿತು. ಆ ವರದಿಯ ಬಗ್ಗೆ Balaji Vs. State of Karnataka ಕೇಸ್‌ನಲ್ಲಿ ಜಾತಿಯ ಆಧಾರದ ಮೇಲೆ ಕ್ರೈಟೀರಿಯ ಏನು ಫಿಕ್ಸ್ ಮಾಡಿದ್ದರು, ಅದನ್ನು ಕೋರ್ಟು ಸ್ಟ್ರಕ್‌ಡೌನ್ ಮಾಡಿತು. ಆಗ ೧೯೬೩ರಲ್ಲಿ ಸರ್ಕಾರವೇ ಒಂದು ರೂಲ್ಸನ್ನು ಮಾಡಿತು ಆ ರೂಲ್ಸ್ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಯಾವ ಪ್ರಕಾರ ಮೀಸಲಾತಿ ಇರಬೇಕೆಂದು ಮಾಡಿತು. ಆ ಜನರ ಬಗ್ಗೆ ವರಮಾನದ ಮಿತಿ ಇರಬೇಕೆಂದು ಮಾಡಿತು. ೧೨೦೦ ರೂ. ಗಿಂತ ಕಡಿಮೆ ವರಮಾನ ಯಾರಿಗೆ ಇತ್ತೋ, ಅಂತಹವರಿಗೆ ಅನುಕೂಲವನ್ನು ಒದಗಿಸಿಕೊಡಬೇಕೆಂದಾಯಿತು. ಇದರ ಪ್ರಕಾರ ಬ್ರಾಹ್ಮಣರಿಗೆ, ಲಿಂಗಾಯಿತರಿಗೆ ಹಾಗೂ ಒಕ್ಕಲಿಗರಿಗೇ ಇದರಿಂದ ಅನುಕೂಲವಾಯಿತು. ೧೯೬೩ರ ರೂಲ್ಸ್ ಬಂದ ನಂತರ ಬ್ರಾಹ್ಮಣರಿಗೆ, ಲಿಂಗಾಯಿತರಿಗೆ ಹಾಗೂ ಒಕ್ಕಲಿಗರಿಗೆ ಲಾಭವಾಯಿತು. ಇದು ೧೯೭೨ರವರೆಗೆ ನಡೆಯಿತು. ೧೯೭೨ರಲ್ಲಿ ಶ್ರೀಮಾನ್ ದೇವರಾಜ್ ಅರಸ್‌ರವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಹಾವನೂರ್‌ರವರ ನೇತ್ರುತ್ವದಲ್ಲಿ ಹಿಂದುಳಿದವರ್ಗದವರ ಆಯೋಗವನ್ನು ರಚನೆ ಮಾಡಲಾಯಿತು. ಅದು ತನ್ನ ವರದಿಯನ್ನು ೧೯೭೫ರಲ್ಲಿ ಕೊಟ್ಟಿತ್ತು, ೧೯೭೭ರಲ್ಲಿ ಅದನ್ನು ಜಾರಿಗೆ ಕೊಡಲಾಯಿತು, ವಸಂತಕುಮಾರ್ ಕೇಸ್‌ನಲ್ಲಿ ಅದು ಸ್ವಲ್ಪ ಏರುಪೇರು ಆಯಿತು, ಇದರ ಬಗ್ಗೆ ಗೈಡ್‌ಲೈನ್ಸ್ ಅನ್ನು ಸುಪ್ರೀಂ ಕೋರ್ಟ್ ಕೊಡುವ ಮೊದಲೇ ರಾಜ್ಯ ಸರ್ಕಾರವೇ ೨ನೇ ಹಿಂದುಳಿದವರ್ಗದ ಆಯೋಗವನ್ನು ನೇಮಕ ಮಾಡುತ್ತೇವೆಂದು ಹೇಳಿತು, ಆಗ ಶ್ರೀಮಾನ್ ವೆಂಕಟಸ್ವಾಮಿಯೇವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚನೆ ಮಾಡಿತು. ಶ್ರೀ ವೆಂಕಟಸ್ವಾಮಿಯವರು ೨–೩ ವರ್ಷಗಳ ಕಾಲ ಕಷ್ಟಪಟ್ಟು ವರದಿಯನ್ನು ತಯಾರು ಮಾಡಿ ಸರ್ಕಾರಕ್ಕೆ ಕೊಟ್ಟಿತು. ಆದರೆ ಸರ್ಕಾರ ಅದನ್ನು ಒಪ್ಪಿಕೊಳ್ಳಲಿಲ್ಲ. ೯–೩–೧೯೮೮ರಲ್ಲಿ ಅಂತ ಕಾಣುತ್ತೆ. ೩ನೇ ಹಿಂದುಳಿದ ವರ್ಗದ ಆಯೋಗವನ್ನು ಶ್ರೀಮಾನ್ ಚಿನ್ನಪ್ಪರೆಡ್ಡಿಯವರ ನೇತೃತ್ವದಲ್ಲಿ ರಚನೆ ಮಾಡಲಾಯಿತು. ಅದೂ ಕೂಡ ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ.

ಈ ವರದಿ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ. ಇದರ ಅಧ್ಯಕ್ಷತೆಯನ್ನು ಮುಖ್ಯಮಂತ್ರಿಯವರೇ ವಹಿಸಲಿದ್ದಾರೆ. ಈ ವಿಷಯ ಕ್ಯಾಬಿನೆಟ್ ಸಬ್ ಕಮಿಟಿಯ ಮುಂದೆ ಇರುವುದರಿಂದ ಈಗಲೇ ಏನೂ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಒಂದು ಸಮಾರಂಭದಲ್ಲಿ ಮುಖ್ಯಮಂತ್ರಿಗಳೇ ಈ ವರದಿ ಬರುವುದಕ್ಕಿಂತಾ ಮೊದಲೇ ಈ ವರದಿಯನ್ನು ಒಪ್ಪುತ್ತೇವೆಂದು ಹೇಳಿದ್ದಾರೆ. ಇವತ್ತು ಮುಖ್ಯಮಂತ್ರಿಗಳು ಏನೇ ಹೇಳಿದರೂ, ಅದು ಸರ್ಕಾರದ ಮಾತು ಆಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತಿಗೆ ಸರ್ಕಾರ ಈಗಲೂ ಬದ್ಧವಾಗಿದೆಯೋ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಬಿ. ಶಿವಣ್ಣ.—ಈ ಬಗ್ಗೆ ಸಬ್ ಕಮಿಟಿ ರಚನೆ ಆಗಿದೆ.

ಶ್ರೀ ಕೆ.ಹೆಚ್. ಪಾಟೀಲ್.—ಸರ್ಕಾರ ಒಪ್ಪುತ್ತದೆಂದು ಅವರು ಹೇಳಿಲ್ಲ. ಸರ್ಕಾರ ಪರಿಶೀಲನೆ ಮಾಡುತ್ತದೆ ಎಂದು ಹೇಳಿದ್ದಾರೆ. ಸರ್ಕಾರ ಈ ಬಗ್ಗೆ ಈಗಾಗಲೇ ಸಬ್ ಕಮಿಟಿ ಮಾಡಿದ್ದು ಮುಖ್ಯಮಂತ್ರಿಗಳು ಅದರ ಅಧ್ಯಕ್ಷರಾಗಿದ್ದಾರೆ. ಅದಲ್ಲದೆ ಚಿನ್ನಪ್ಪರೆಡ್ಡಿ ಅವರ ವರದಿಯನ್ನು ಸಭೆಯಲ್ಲಿ ಇಡಲಾಗಿದ್ದು ಇಲ್ಲೂ ಕೂಡಾ ತಾವು ವಿಚಾರ ಮಾಡಬಹುದು. ನಿಮ್ಮೆಲ್ಲರ ಅಭಿಪ್ರಾಯ ಏನು ಬರುತ್ತದೆ, ಅದನ್ನು ಸರ್ಕಾರ ಒಪ್ಪುತ್ತದೆ.

ಶ್ರೀ ಸಿದ್ದನಗೌಡ ಪಾಟೀಲ್.—ಏನು ಈ ಆಯೋಗದ ವರದಿ ಕೊಟ್ಟಿದ್ದಾರೆ, ಅದು ಇಂಗ್ಲೀಷ್‌ನಲ್ಲಿ ಇದ್ದು ಅದರ ಕನ್ನಡದ ಪ್ರತಿಯನ್ನು ನಮಗೆ ಒದಗಿಸಬೇಕು. ಮತ್ತೆ ಮೊದಲನೇ, ಎರಡನೇ ಆಯೋಗಗಳ ವರದಿಯನ್ನು ಸಹ ನಮಗೆ ಕೊಡಬೇಕು. ಆಯೋಗಗಳ ಬಗ್ಗೆ ಮಾನ್ಯ ಮಂತ್ರಿಗಳು ವಿವರವಾಗಿ ಹೇಳಿದರು ಈ ಮೂರನೇ ವರದಿ ಬಗ್ಗೆ ತಿಳಿದುಕೊಳ್ಳಬೇಕಾದರೆ ಒಂದು ಹಾಗೂ ಎರಡನೇ ವರದಿಯೂ ಸಹ ನಮ್ಮ ಕೈ ಸೇರಬೇಕಾಗುತ್ತದೆ. ಆದ್ದರಿಂದ ಮೂರೂ ವರದಿಗಳನ್ನು ನಮಗೆ ದೊರಕಿಸಿಕೊಡಬೇಕು. ಮತ್ತೆ ಇಂತಹ ಜಾತಿ, ಕುಲದವರು ಚೆನ್ನಾಗಿ ಇದ್ದಾರೆ ಎಂದು ಹೇಳಿದರು. ಯಾರು ಚೆನ್ನಾಗಿದ್ದಾರೆ, ಯಾರು ಕೆಟ್ಟಿದ್ದಾರೆ ಎನ್ನುವುದು ಬೇರೆ ಪ್ರಶ್ನೆ. ಆ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಇನ್ನು ಎರಡನೆಯದಾಗಿ ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುವಾಗ ಸ್ಟೈಪೆಂಡರಿಗಳ ಬಗ್ಗೆ ಹೇಳಲಿಲ್ಲ. ಈಗಾಗಲೇ ಸಾಕಷ್ಟು ಜನ ನಿರುದ್ಯೋಗಿಗಳು ಇದ್ದಾರೆ. ಇನ್ನು ಮುಂದಾದರೂ ಅವರಿಗೆ ಕೆಲಸ ಕೊಡುತ್ತೀರಾ ಎಂದು ಹೇಳಿಲ್ಲ. ಇನ್ನು ಅಂಗನವಾಡಿ ಬಗ್ಗೆ

ಪ್ರಪೋಸಲ್ ಇದೆ. ಅದನ್ನು ಕೇಂದ್ರಕ್ಕೆ ಕಳುಹಿಸಿದ್ದೇವೆಂದು ಹಿಂದಿನ ಸಚಿವರು ಹೇಳಿದ್ದರು, ಆ ಬಗ್ಗೆ ತಾವು ಏನೂ ಹೇಳಲಿಲ್ಲ. ಇನ್ನು ಭೂವಿಜ್ಞಾನ ಇಲಾಖೆ ಬಗ್ಗೆ ಹೇಳಬೇಕೆಂದರೆ ಇಲ್ಲಿನ ತಜ್ಞರು ತೋರಿಸಿದ ಕಡೆ ಸುಮಾರು ಶೇಕಡಾ ೫೦ ಬೋರ್‌ವೆಲ್‌ಗಳು ಫೇಲ್ ಆಗಿವೆ. ಇವತ್ತು ನಮ್ಮ ಹಳ್ಳಿ ಕಡೆ ಬೇವಿನಕಡ್ಡಿ ಹಿಡಿದು ತೋರಿಸಿದ ಕಡೆ ಬಾವಿ ತೋಡಿದರೆ ನೀರು ಸಿಗುತ್ತದೆ. ಇಂತಹವರಿಗೆ ಟ್ರೈನಿಂಗ್ ಕೊಟ್ಟು ಇವರು ತೋರಿದ ಕಡೆ ಬೋರ್ ಹಾಕುವುದಕ್ಕೆ ತಾವು ಹಣದ ಸಹಾಯ ಮಾಡುತ್ತೀರಾ ? ಇವತ್ತು ನೋ ವಾಟರ್, ನೋ ಮನಿ ಸ್ಕೀಮ್‌ನಲ್ಲಿ ೩೦೦ ರೂಪಾಯಿ ಒಬ್ಬೊಬ್ಬ ರೈತ ಕೊಡುತ್ತಿದ್ದಾನೆ. ಇದರ ಬಗ್ಗೆ ಹೇಳಬೇಕು. ಈಗ ಕಲ್ಲಿನ ಬಗ್ಗೆ ಹೇಳಬೇಕೆಂದರೆ ದೇವಸ್ಥಾನ, ಮಸೀದಿ, ಚರ್ಚ್, ಮಠ ಇರುವ ಕಡೆ ಕಲ್ಲು ಎತ್ತುತ್ತಿದ್ದಾರೆ. ಇವತ್ತು ತಾವು ಕೋರ್ಟಿಗೆ ಹೋಗಿ ಸ್ಟೇ ತರುತ್ತಿದ್ದಾರೆಂದು ಹೇಳುತ್ತೀರಿ. ಆದರೆ ಇವತ್ತು ಏನಾಗಿದೆ ಎಂದರೆ, ಈ ಇಲಾಖೆಯಲ್ಲಿ ಒಂದು ಅಂಡರ್‌ಸ್ಟಾಂಡಿಂಗ್ ಇದ್ದು ಇಲ್ಲೀಗಲ್ ಆರ್ಡರ್ ಮಾಡಿ ನೀವು ಕೋರ್ಟಿಗೆ ಹೋಗಿ ಎಂದು ಅವರೇ ಹೇಳುತಾರೆ. ಆಪ್ರಕಾರ ಇವರು ಹೋಗಿ ಸ್ಟೇ ತರುತ್ತಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಕೊಡಬೇಕು.

ಶ್ರೀ ಬಿ. ಶಿವಣ್ಣ.—ಗಣಿ ವಿಷಯದಲ್ಲಿ ನಾನು ಎಲ್ಲಾ ಹೇಳಿದೇನೆ. ಮಾನ್ಯ ಸದಸ್ಯರು ಹೇಳಿದಂತೆ ದೇವಸ್ಥಾನ ಮಸೀದಿ ಮುಂತಾದ ಕಡೆಗಳಲ್ಲಿ ಕಲ್ಲು ತೆಗೆಯಲು ಅನುಮತಿ ನೀಡುವುದಿಲ್ಲ. ಅವುಗಳ ರಕ್ಷಣೆ ಮಾಡಲು ನಾವು ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಸಿದ್ಧನಗೌಡ ಪಾಟೀಲ್ .—ಮಸೀದಿ, ಟೆಂಪಲ್ ಇರುವ ಕಡೆ ಇದು ನಡೆದರೆ ನಾಳೆ ಇದು ಸೆಂಟೀವ್ ಇಷ್ಯೂ ಆಗುತ್ತದೆ. ಅಂತಹ ಕಡೆ ಕೊಡುವುದಿಲ್ಲ ಎಂದು ಹೇಳಿ. ಒಂದು ಉದಾರಣೆ ಹೇಳ ಬೇಕೆಂದರೆ ಬೂದನಗುಡ್ಡ ಎಂಬಲ್ಲಿ ಒಂದು ಪುರಾತನ ಟೆಂಪಲ್ ಇದೆ. ಹಿಂದಿನ ಸರ್ಕಾರದಲ್ಲಿ ಮಂತ್ರಿಗಳು ಅಲ್ಲಿಗೆ ಭೇಟಿ ಕೊಡುತ್ತೇನೆಂದು ಹೇಳಿದ್ದರು. ಅಲ್ಲಿ ಕೂಡ ಪರವಾನಿಗೆ ಕೊಟ್ಟಿದ್ದು ತಪ್ಪು

ಶ್ರೀ ಬಿ. ಶಿವಣ್ಣ.—ಅಲ್ಲಿ ಅವರೂ ಕೋರ್ಟ್‌ನಿಂದ ಸ್ಟೇ ತಂದಿದ್ದಾರೆ. ಆದರೂ ನಾವು ಅಲ್ಲಿ ನಿಲ್ಲಿಸಿಬಿಡುತ್ತೇವೆ.

ಅಧ್ಯಕ್ಷರು.—ಅವರು ನಿಲ್ಲಿಸುತ್ತಾರಂತೆ. ಇಲ್ಲಿಗೆ ಚರ್ಚೆ ಮುಗಿಯಿತು. ಈಗ ಮತಕ್ಕೆ ಹಾಕುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.— ಅಧ್ಯಕ್ಷರೇ, ತಮ್ಮ ದೃಷ್ಟಿ ಕೇವಲ ಬಲಗಡೆಯೇ ಇದೆಯೇ ಹೊರತು ಎಡಗಡೆ ಇಲ್ಲ. ತಾವು ಈ ಸಭೆಗೆ ಬರುವುದಕ್ಕಿಂತ ಮುಂಚಿಂದಲೂ ಮಾನ್ಯ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತಿದ್ದಾರೆ. ಅವರು ಏಕೆ ಧರಣಿ ಕೂತಿದ್ದಾರೆ ಎಂದು ತಾವು ತಿಳಿದು ಕೊಳ್ಳಬೇಕಲ್ಲವೇ ? ವಾಣಿಜ್ಯ ಮತ್ತು ಕೈಗಾರಿಕಾ ಕಾರ್ಯಾಲಯದಲ್ಲಿ ೨೨-೫-೧೯೮೦ರಲ್ಲಿ ಒಂದು ನೋಟಿಫಿಕೇಷನ್ ಹೊರಟಿದೆ. ಅದಕ್ಕೆ ಕಾರಣವನ್ನು ವಿವರವಾಗಿ ಹೇಳಿದ್ದಾರೆ. ಅದಕ್ಕೆ ಹೈಕೋರ್ಟಿನಲ್ಲಿ ಸ್ಟೇ ಇದ್ದ ಕಾರಣವನ್ನು ಹೇಳಿದ್ದಾರೆ. ಮತ್ತೆ ಕೇಂದ್ರ ಸರ್ಕಾರದ ಮಂತ್ರಿಗಳು ಬರೆದಿದ್ದ ಕಾಗದಗಳ ಕಾರಣ ಎಂದು ಹೇಳಿದ್ದಾರೆ. ಮೂರನೆಯದಾಗಿ ಇನ್ನೂ ಬೇರೆ ಬೇರೆ ವಿಭಿನ್ನವಾದ ಗ್ರೆನೈಟ್ ಬಣ್ಣದ್ದು ಮತ್ತೊಂದು ಮಗದೊಂದು ಇದ್ದಾವೆ

೧೧-೩೦ ಎ. ಎಂ.

ಇದನ್ನು 1979ರಲ್ಲಿ ರಾಷ್ಟ್ರೀಕರಣ ಮಾಡಿ 10 ವರ್ಷಗಳ ಅನುಭವದ ಮೇಲೆ ಕೇವಲ 3-4 ತಿಂಗಳಿನಲ್ಲಿ ಸರ್ಕಾರ ಇದರ ಬಗ್ಗೆ ಕೈಗೊಂಡ ಕ್ರಮ ಸರಿಯಲ್ಲ ಇದನ್ನು ಕನಿಷ್ಠಪಕ್ಷ ಹೈಕೋರ್ಟ್‌ನಲ್ಲಿ ತಡೆಯಾಜ್ಞೆಯನ್ನು ವಜಾ ಮಾಡಿಸಲು ಪ್ರಯತ್ನವನ್ನು ಸರ್ಕಾರ ಮಾಡಿಲ್ಲಿಲ್ಲ ಕೇಂದ್ರ ಸರ್ಕಾರ ಬರೆದಿರತಕ್ಕ ಕಾಗದಪತ್ರಗಳು ಏನಿದೆ ಎಂಬುದನ್ನು ನೋಡಲು ಪ್ರಯತ್ನ ಮಾಡಲಿಲ್ಲ. ತಮ್ಮ ಸರ್ಕಾರದ ನಿಲುವನ್ನು ಹೇಳುವುದಕ್ಕೆ ಮುಂಚೆ ಕೆಲವು ವಿಚಾರಗಳನ್ನು ಹೇಳ ಬೇಕು. ಈಗ ಸರ್ಕಾರದವರು ನಿರ್ಧಿಷ್ಟವಾದ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ We smell something. ಅದ್ದರಿಂದ ಒಂದು ಸದನದ ಸಮಿತಿಯನ್ನು ಮಾಡಿ. Let us go through it. ನೋಡೋಣ ಏನು ನಡೆದಿದೆಯೆಂದು. ಇದಕ್ಕೆ ಮಂತ್ರಿಗಳು ಸಿದ್ಧರಿಲ್ಲರೆಂದರೆ ನಮ್ಮ ಶಂಕೆಗೆ, ಪರಿಹಾರ ಸಿಕ್ಕಿದ ಹಾಗೆ ಅಗಲಿಲ್ಲ. ಈ ಕಾರಣದಿಂದಲೇ ಶ್ರೀ ವಾಟಾಳ್ ನಾಗರಾಜ್ ರವರು ಧರಣಿ ಕುಳಿತ್ತಿದ್ದಾರೆ. ತಾವು ಆದರೂ ನಿರ್ದೇಶನವನ್ನು ಸರ್ಕಾರಕ್ಕೆ ಕೊಡಬೇಕು. ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಬೇಕು. ಈ ಚರ್ಚೆಯಿಂದ ಲಾಭವಾಗಬೇಕಾದರೆ ತಾವು ಒಂದು ಮಾರ್ಗದರ್ಶನವನ್ನು ಸರ್ಕಾರಕ್ಕೆ ನೀಡಬೇಕು. Let us go through it.

ತಮ್ಮ ಅಧ್ಯಕ್ಷತೆಯಲ್ಲಿ ಏನು ನಡೆದಿದೆ ಎಂಬುದನ್ನು ಕನಿಷ್ಠ ಪಕ್ಷ ದಾಖಲೆಗಳನ್ನು ಆದರೂ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕಡೆಯ ಸದಸ್ಯರು ಮಾತ್ರವಲ್ಲ ಆ ಕಡೆಯ ಸದಸ್ಯರು ಕೂಡ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದನ್ನು ರಾಷ್ಟ್ರೀಕರಣ ಮಾಡಿದಂತಹ ಕಾಲದಲ್ಲಿ ಶ್ರೀಮಾನ್ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾಗಿದ್ದರು. ಆ ಮಂತ್ರಿಮಂಡಲದ ಸದಸ್ಯನಾಗಿ ಅಂದು ನಾನು ಇದರ ಸಾಧಕ ಬಾಧಗಳನ್ನು ಆಲೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಂಡಿದ್ದೆವು. ನಿಮ್ಮ ಸರ್ಕಾರ ಬಂದು 3—4 ತಿಂಗಳಿನಲ್ಲಿ ಇದನ್ನು ಬದಲಾವಣೆ ಮಾಡಿದ್ದೀರಿ ಇದಕ್ಕೆ ಕಾರಣವೇನು? we smell something. therefore, we would like to know what exactly the records are, what concrete reasons are there which made this Government to take this decision. whether he is agreeable to constitute a House Committee or' I would like to know.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರೆ ವಿರೋಧ ಪಕ್ಷದ ಸದಸ್ಯರುಗಳು ಈ ಬಗ್ಗೆ ಹೌಸ್ ಕಮಿಟಿ ರಚನೆ ಮಾಡಿಯೆಂದು ಕೇಳುತ್ತಿದ್ದಾರೆ, ಈಗ ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ. ಹಿಂದಿನ ಅನೇಕ ಸಂದರ್ಭಗಳಲ್ಲಿ ಆ ಸಮಿತಿಯು ಆಡಿಟ್ ರಿಪೋರ್ಟಿಗೆ ಹೊರತುಪಡಿಸಿದ ಕೆಲವು ವಿಷಯಗಳನ್ನು ಪರಿಶೀಲನೆಗೆ ತೆಗೆದುಕೊಂಡಿದ್ದಾರೆ. ಆದ್ದರಿಂದ ಈ ವಿಷಯವನ್ನು ಕೂಡ ಅಲ್ಲಿ ಪರಿಶೀಲನೆ ಮಾಡಲು ಅವಕಾಶವಿದೆ. ಅವರೇ ಆ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸರ್ಕಾರಕ್ಕೆ ಬರುವಂತಹ ರೆವಿನ್ಯೂನಲ್ಲಿ ಖೋತ ಆಗಿದೆಯೋ ಅನ್ಯಾಯವಾಗಿದೆಯೋ ಎಂಬುದರ ಬಗ್ಗೆ ಸಂಬಂಧಪಟ್ಟ ಫೈಲುಗಳನ್ನು ಪರಿಶೀಲನೆ ಮಾಡಲು ಆ ಸಮಿತಿಗೆ ಅಧಿಕಾರವಿದೆ. ಈ ವಿಷಯವನ್ನು ತಾವು ಆ ಸಮಿತಿಗೆ ರೆಫರ್ ಮಾಡಿದರೆ ಖಂಡಿತವಾಗಿ ಇದನ್ನು ಪರಿಶೀಲಿಸಲು ಸಾಧ್ಯವಾಗುತ್ತದೆ. ವಿರೋಧ ಪಕ್ಷದ ನಾಯಕರೇ ಇರುವಂತಹ ಸಮಿತಿ ಅದಾಗಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಹಿರಿಯ ಸದಸ್ಯರುಗಳಿದ್ದೀರಿ, ತಾವು ಅನುಭವಿಗಳಿದ್ದೀರಿ, ತಮ್ಮ ಅನುಭವದ ಮೇಲೆ ಒಂದು ಮಾತನ್ನು ಕೇಳುತ್ತೇನೆ.

ಪಿ.ಎ.ಸಿ. ರಿಪೋರ್ಟ್ ಯಾವ ವರ್ಷದ್ದು, ಯಾವ ವರ್ಷಕ್ಕೆ ಬರುತ್ತದೆಂಬುದನ್ನು ನೀವೇ ಹೇಳಿ, ತತ್‌ಕ್ಷಣ ಏನಾದರೂ ಒಂದು ನಿರ್ಧಾರವಾಗಬೇಕಾದರೆ ಇದಕ್ಕಾಗಿಯೇ ಒಂದು ಸದನದ ಸಮಿತಿಯನ್ನು ಮಾಡಬೇಕು ಪಿ.ಎ.ಸಿ. ನಲ್ಲಿ ನಮಗೆ ವಿಶ್ವಾಸ ಇಲ್ಲ ಎಂದು ಅಲ್ಲ, ಆದರೆ ಪಿ.ಎ.ಸಿ ಯಿಂದ ವರದಿ ತರಿಸಿಕೊಳ್ಳುವ ವೇಳೆಗೆ ನೀವೂ ಇರುವುದಿಲ್ಲ, ನಾವು ಇರುವುದಿಲ್ಲ, ಈ ರಾಜ್ಯದಲ್ಲಿ ಗ್ರಾನೈಟ್ ಸಹ ಇರುವುದಿಲ್ಲ. Therefore, I am demanding the Constitution of a House *Committee* to immediately go through the records.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಈ ಗ್ರಾನೈಟ್ ವಿಚಾರದಲ್ಲಿ ಈ ಸದನ ಪ್ರಾರಂಭವಾಗುವುದಕ್ಕೆ ಮುಂಚೆ ಕಳೆದ ಸಲ ಹಾಗೂ ಅದರ ಹಿಂದೆ ಸೇರಿದಾಗ ಕೂಡ ಈ ಕಡೆಯ ಸದಸ್ಯರು ಆ ಕಡೆಯ ಸದಸ್ಯರು ಇದರ ಬಗ್ಗೆ ವಾಸನೆ ಇದೆ ಎನ್ನತಕ್ಕ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನೀವೂ ಸಹಿತ ಸಾಕಷ್ಟು ವಿಷಯಗಳನ್ನು ತಿಳಿದುಕೊಂಡಿದ್ದೀರಿ. ಬರೀ ಸರ್ಕಾರದ ಮೇಲೆ ಗೂಬೆ ಕೂರಿಸುವ ವಿಚಾರ ಇದಲ್ಲ ನಾವು ಏನು ಕೇಳುತ್ತಿದ್ದೇವೆಂದರೆ ಒಂದು ಹೌಸ್ ಕಮಿಟಿ ಮಾಡಿಯೆಂದು ಕೇಂದ್ರ ಸರ್ಕಾರದಿಂದ ಪತ್ರಗಳು ಬಂದಿದೆ. ಮತ್ತು ಹಿಂದಿನ ಮಂತ್ರಿಗಳು ಏನೂ ಫೈಲ್‌ನಲ್ಲಿ ಬರೆದಿದ್ದಾರೆಂದು ರೆಕಾರ್ಡ್ಸ್‌ಗಳನ್ನು ತಮಗೆ ಅನುಕೂಲವಾಗುವ ರೀತಿಯಲ್ಲಿ ಓದಿದರು. ಕೇಂದ್ರ ಸರ್ಕಾರ ಪತ್ರ ಬರೆದರೆ ಅದನ್ನು ಮಾಡಬೇಕೆಂದು ನಾವು ಹೇಳುವುದಿಲ್ಲ. ಗಣಿ ಸಂಪತ್ತನ್ನು ಈ ರಾಜ್ಯದಲ್ಲಿ ರಾಷ್ಟ್ರೀಕರಣ ಮಾಡಲೇಬೇಕು ಎಂಬುದು ಈ ಸದನದ ಈ ಕಡೆಯ ಸದಸ್ಯರ ಅಭಿಪ್ರಾಯವಾಗಿದೆ. ಈ ಸಂದರ್ಭದಲ್ಲಿ ತಾವು ತರಾತುರಿಯಲ್ಲಿ ಅಜ್ಜಿ ಏನು ಮಾಡಿದ್ದೀರಿ ಇದರ ಹಿಂದೆ ಏನೂ ಗುಮಾನಿ ಇದೆ, ತಮ್ಮ ಮೇಲೆ ಆಪಾದನೆ ಇದೆಯೆಂದು ಹೊರಗಡೆ ಜನ ಮಾತನಾಡುತ್ತಿದ್ದಾರೆ. ಇದನ್ನು ಕ್ಲಿಯರ್ ಮಾಡಬೇಕಾಗಿದೆ. ಆದ್ದರಿಂದ ಒಂದು ಹೌಸ್ ಕಮಿಟಿಯನ್ನು ಮಾಡಿ, ಇವರು ಉತ್ತರ ಕೊಡದೆ ನುಣುಚಿಕೊಳ್ಳಲು ಪ್ರಾರಂಭ ಮಾಡಿರುವುದು ನಮಗೆಲ್ಲಾ ಸಂಶಯ ಬಂದಿದೆ. ಆದ್ದರಿಂದ ಈ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಹಾಗೂ ಅವರ ಸಹೋದ್ಯೋಗಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇವತ್ತು ಈ ರಾಜ್ಯದಲ್ಲಿ ಬೊಕ್ಕಸಕ್ಕೆ ಬಹಳ ಅನ್ಯಾಯವಾಗುತ್ತದೆ. ನಾವೇನೂ ಮಾಡಿ ಹೋಗಬಹುದು. ಇದರಿಂದ ೧೦–೧೫ ಕೋಟಿ ರೂಪಾಯಿಗಳ ಆದಾಯ ಸಿಗಬಹುದು. ಆದರೆ ಮುಂದಿನ ನಮ್ಮ ಪೀಳಿಗೆ ನಮಗೆ ಶಾಪಹಾಕುತ್ತಾರೆ. ನನ್ನ ತಾಲ್ಲೂಕಿನಲ್ಲಿ ಕೂಡ ಸಾವಿರಾರು ಕೋಟಿ ರೂಪಾಯಿಗಳಷ್ಟು ಲುಕ್ಸಾನ್ ಆಗುತ್ತಿದೆ. ಈ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳ ಹತ್ತಿರ ಕೂಡ ನಮ್ಮ ರಾಜ್ಯದಲ್ಲಿ ಎಷ್ಟು ಖನಿಜ ಸಂಪತ್ತು ಇದೆ ಎಂಬ ಲೆಕ್ಕಾಚಾರ ಅವರ ಬಳಿ ಇಲ್ಲ. ಇದು ಲೂಟಿಯಾಗಿ

ಹೋಗುತ್ತಿದೆ. ಆದ್ದರಿಂದ ಇದರ ಬಗ್ಗೆ ಸದನದ ಸಮಿತಿಯನ್ನು ಮಾಡಿ, ಅಲ್ಲಿ ಎಲ್ಲರೂ ಸೇರಿಕೊಂಡು ವಿಚಾರಮಾಡೋಣ ಎಂದರೆ ತಾವು ಒಪ್ಪುತ್ತಿಲ್ಲ. ಈ ನಿಲುವನ್ನು ತಾವು ಏತಕ್ಕೆ ತೆಗೆದುಕೊಂಡಿದ್ದೀರಿ ಎಂಬುದು ನಮಗೆ ಅರ್ಥವಾಗುತ್ತಿಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ತಾವು ರಾಷ್ಟ್ರೀಕರಣ ಮಾಡುವುದಕ್ಕೆ ತಮ್ಮಿಂದ ಸಾಧ್ಯವಿಲ್ಲವೆಂದರೆ ನಾವೇ ರಾಷ್ಟ್ರೀಕರಣ ಮಾಡಬೇಕಾಗುತ್ತದೆ. ೧೯೮೭ರಲ್ಲಿ ನಾವು ಮಾಡಿ ತೋರಿಸಿದ್ದೇವೆ. ಇವರು ಈ ಗ್ರಾನೈಟ್ ಕಲ್ಲನ್ನು ಯಾವ ರೀತಿ ಮಂಗಳೂರು ಬಂದರಿಗೆ ತೆಗೆದುಕೊಂಡು ಹೋಗುತ್ತಾರೆಂಬುದನ್ನು ನಾವು ನೋಡುತ್ತೇವೆ, ಆ ಲಾರಿಗಳನ್ನು ತಡೆಯುವಂಥ ಚಳುವಳಿ ಪ್ರಯತ್ನ ಮಾಡುತ್ತೇವೆ ಎಚ್ಚರಿಕೆಯಿಂದಿರಿ ಎಂದು ತಮ್ಮ ಮೂಲಕ ಸರ್ಕಾರಕ್ಕೆ ಎಚ್ಚರಿಸುತ್ತಿದ್ದೇನೆ.

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೇ. ಇದರ ಬಗ್ಗೆ ಸಾಕಷ್ಟು ಉತ್ತರ ಹೇಳಿದ್ದೇನೆ. ಮೂರು ವರ್ಷಗಳಲ್ಲಿ ೮೭,೮೫,೮೯ರಲ್ಲಿ ಈ ಕರ್ನಾಟಕದ ಮಾಜಿ ಮುಖ್ಯಮಂತ್ರಿಯಾದ ಶ್ರೀ ರಾಮಕೃಷ್ಣ ಹೆಗಡೆಯವರು ಒಂದು ಮೀಟಿಂಗ್ ಮಾಡಿದ್ದರು. ಅಂದಿನ ಮಂತ್ರಿಗಳಾದ ಶ್ರೀ ರಮೇಶ್ ಜಿಗಜಿಣಗಿಯವರು ಫೈಲ್‌ನಲ್ಲಿ ಬರೆದು ಹೋದರು. ನಾವು ಕೂಡ ಗ್ರಾನೈಟ್ ಬಗ್ಗೆ ಇರುವ ನಿಯಮವನ್ನು ಲಿಬರ್‌ಲೈಸ್ ಮಾಡಬೇಕು, ರೂಲ್ಸ್ ಚೇಂಜ್ ಮಾಡಬೇಕೆಂದು ಹೇಳಿಕೊಂಡು ಹೋದರು. ನಂತರ ಪ್ರೆಸಿಡೆಂಟ್ ರೂಲ್‌ನಲ್ಲಿ ಇದರ ಬಗ್ಗೆ ಎಲ್ಲ ಪೇಪರ್‌ನಲ್ಲಿ ಬಂತು. ಏನೆಂದರೆ ಗ್ರಾನೈಟ್ ಪಾಲಿಸಿ ಬದಲಾವಣೆ ಆಗುತ್ತದೆ, ಲಿಬರ್‌ಲೈಸ್ ಆಗುತ್ತದೆ ಎಂದು ಆದರೆ ರಾಜ್ಯಪಾಲರು ಎಲೆಕ್ಷನ್‌ನ ಮುಂಚೆ ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಸರಿಯಲ್ಲ. ಪಾಪ್ಯುಲರ್ ಗೌರ್ನಮೆಂಟ್ ಬಂದು ಡಿಸಿಷನ್ ತೆಗೆದುಕೊಳ್ಳಲಿ ಎಂದು ಹೇಳಿದರು. ''ಬಿಲ್ಲಿ ಸೌಚೂಹೇ ಕಾಟ್‌ಕೇ ಹಜ್‌ತೋ ಚಲೆ ಗಯೇ'' ಇದರ ಅರ್ಥ ಬೆಕ್ಕು ನೂರು ಇಲಿಗಳನ್ನು ತಿಂದು ಹಜ್‌ಗೆ ಹೊರಟು ಹೋಯಿತಂತೆ, ಅದರಂತೆ ಮೂರು ವರ್ಷಗಳಿಂದ ಈ ಬಗ್ಗೆ ನಡೆದಂತಹ ಕಾಗದ ಪತ್ರಗಳೆಲ್ಲ ಇದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ಶ್ರೀ ಶಿವಣ್ಣನವರು ಈ ತೀರ್ಮಾನವನ್ನು ತೆಗೆದುಕೊಂಡು ವಿದೇಶದ ಯಾತ್ರೆಗೆ ಹೋಗುತ್ತಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ಗ್ರಾನೈಟ್ ವ್ಯವಹಾರ ಪ್ರಾರಂಭವಾದದ್ದು ಏಪ್ರಿಲ್ ೧೯೮೩ರಲ್ಲಿ ಎಂಬುದನ್ನು ನೀವು ಮರೆಯಬೇಡಿ.

ಶ್ರೀ ಪಿ ಜಿ. ಆರ್. ಸಿಂಧ್ಯಾ.—ಇದರ ಬಗ್ಗೆ ವಿಚಾರಣೆ ನಡೆಯಲಿ, ತಪ್ಪಿತಸ್ಥರು ಯಾರಿದ್ದಾರೆ ಅವರಿಗೆ ಶಿಕ್ಷೆ ಮಾಡಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ನಮ್ಮ ಶಂಕೆಗೆ ಆಧಾರ ಇದೆ. ಇವರ ಉತ್ತರವನ್ನು ನಮ್ಮ ಪಕ್ಷದ ವತಿಯಿಂದ ನಾವು ಒಪ್ಪಲು ಸಾಧ್ಯವಿಲ್ಲ. ಇದರ ಬಗ್ಗೆ ಸದನದ ಸಮಿತಿಯನ್ನು ಮಾಡಲೇಬೇಕು ಅದಕ್ಕೆ ಒಪ್ಪದಿದ್ದರೆ ಈ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಜನತಾ ದಳ ಸದಸ್ಯರು ಜನತಾ ಪಕ್ಷದ ಒಬ್ಬರು ಸದಸ್ಯರು ಹಾಗೂ ರೈತಸಂಘದ ಸದಸ್ಯರುಗಳು ಹಾಗೂ ಪಕ್ಷೇತರ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ರುಕ್ಮಯ್ಯ ಪೂಜಾರಿ.—ಮಾನ್ಯ ಅಧ್ಯಕ್ಷರೆ, ಈ ಗ್ರಾನೈಟ್ ವಿಚಾರದಲ್ಲಿ ಖಂಡಿತಾ ಸದನದ ಒಂದು ಸಮಿತಿಯನ್ನು ಮಾಡುವುದರ ಮೂಲಕ ಸತ್ಯಸಂಗತಿಯನ್ನು ತಿಳಿಯುವುದು ತುಂಬಾ ಅಗತ್ಯವಿದೆ. ನಮ್ಮ ರಾಜ್ಯದ ಸಂಪತ್ತು ದರೋಡೆಯಾಗುತ್ತಿದೆ. ಅದಲ್ಲದೆ ಪ್ರಕೃತಿಯ ಸೌಂದರ್ಯ ಹಾಳಾಗುತ್ತಿದೆ. ಖಂಡಿತಾ ಇದರ ಬಗ್ಗೆ ಸದನದ ಸಮಿತಿಯನ್ನು ಮಾಡಬೇಕು. ಇಲ್ಲದಿದ್ದರೆ ನಾವು ಕೂಡ ಸಭಾತ್ಯಾಗದಲ್ಲಿ ಪಾಲುಗಾರರಾಗುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ರುಕ್ಮಯ್ಯ ಪೂಜಾರಿಯವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ. – ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರುವುದು ಏನೆಂದರೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಈ ವಿಚಾರದ ಬಗ್ಗೆ ಜನರು ಬೀದಿಯಲ್ಲಿ ಮಾತನಾಡುತ್ತಿದ್ದಾರೆ. ಮೊದಲು ೩ ಕೋಟಿ ರೂಪಾಯಿ ಈ ವ್ಯಾಪಾರ

ನಡೆಯುತ್ತಿತ್ತು. ೩ ಕೋಟಿ ರೂಪಾಯಿ ಸಾಕಾಗಲಿಲ್ಲವೆಂದು ಆ ವ್ಯಾಪಾರ ಕುದರಲಿಲ್ಲವೆಂದು ಈಗ ೫ ಕೋಟಿ ರೂಪಾಯಿ ಆಗಿವೆ, ಆದ್ದರಿಂದ ವ್ಯಾಪಾರ ಕುದುರಿದೆಯೆಂದು ಜನ ಬೀದಿಯಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ. ಅದನ್ನು ಹೋಗಲಾಡಿಸುವುದಕ್ಕೆ ವಿಚಾರ ಮಾಡಬೇಕಾಗುತ್ತದೆ. ಸರ್ಕಾರದ ಮೇಲೆ ಬರತಕ್ಕ ಅಪಾದನೆಯನ್ನು ದೂರ ಮಾಡುವುದಕ್ಕೆ ಅದರಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಸದನದ ಸಮಿತಿಯನ್ನು ರಚನೆ ಮಾಡಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಸದನದ ಸಮಿತಿ ಮಾಡದಿದ್ದರೆ ನಾನು ಕೂಡ ಇದರಲ್ಲಿ ಸರ್ಕಾರ ಭಾಗಿಯಾಗಿದೆಯೆಂದು ಹೇಳಬೇಕಾಗುತ್ತದೆ. ಜನರು ಬೀದಿಯಲ್ಲಿ ಏನು ಮಾತನಾಡಿಕೊಳ್ಳುತ್ತಿದ್ದಾರೆ ಅದು ನಿಜವೆನ್ನುವ ಭಾವನೆಗೆ ನಾವು ಬರಬೇಕಾಗಿದೆ. ಆ ದೃಷ್ಟಿಯಿಂದ ನಾನು ಕೂಡ ಈ ಸಭೆಯಿಂದ ಹೊರಗಡೆ ಹೋಗುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಸಿ. ಬೈರೇಗೌಡರು ಸಹ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೭,೬೦ ಮತ್ತು ೬೧ ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರಾದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗನ್ನು ಮಂಜೂರು ಮಾಡುವುದು"

ಪ್ರಸ್ತಾವನೆ ಅಂಗೀಕೃತವಾಯಿತು ಮತ್ತು ಬೇಡಿಕೆಗಳಿಗೆ ಅನುಮೋದನೆ ದೊರೆಯಿತು.

(ಸಭಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ).

ಅಭಿಯಾಚನೆ ಕ್ರಮಾಂಕ ೭–ಗಣಿಗಳು ಮತ್ತು ಭೂ ವಿಜ್ಞಾನ

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೪೨,೬೬,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ೬೦–ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦೨,೦೮,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೫೯,೨೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೬೧-ಮಹಿಳಾ ಮತ್ತು ಮಕ್ಕಳ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨೭,೫೦,೫೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.